BUDGET ESTIMATES FOR 1969-70 DEMANDS FOR GRANTS
Demands Nos. : 24,14,16 and 44.

Sri M. RAJASEKHARA MURTHY (Minister for Industries).—Sir, on the recommendation of the Governor, I beg to move :

> " That a sum not exceeding Rs. 13,40,35,000 be granted to the Government to defray the charges which will come in course of payment during the financial year for the period ending 31st day of March 1970, in respect of 'Industries.' "

Mr. SPEAKER.—Motion moved :

> " That a sum not exceeding Rs. 13,40,35,000 be granted to the Government to defray the charges which will come in course of payment during the financial year for the period ending 31st day of March 1970, in respect of 'Industries.' "

Along with this Demand, the other Demand Nos. 14,16, and 24 are deemed to have been moved are also open for discussion.

† ಶ್ರೀ ಎಚ್. ಬಿ. ಜ್ವಾಲನಯ್ಯ (ಹಾಸನ).—ಸನ್ಮಾನ್ಯ ಅಧ್ಯಕ್ಷರೇ, ಈ ಸಭೆಯ ಮುಂದೆ ಮಾನ್ಯ ಕೈಗಾರಿಕಾ ಮಂತ್ರಿಗಳು ಮಂಡಿಸಿರತಕ್ಕ ಸುಮಾರು 13 ಕೋಟಿ ರೂಪಾಯಿನ ಕೈಗಾರಿಕೆಯ ಡಿಮ್ಯಾಂಡನ್ನು ನಾನು ಈ ಕೆಳಕಂಡ ಕಾರಣಗಳಿಗಾಗಿ ವಿರೋಧಿಸುತ್ತೇನೆ. ಮೈಸೂರು ಸಂಸ್ಥಾನ ಭಾರತದ ಕೈಗಾರಿಕೆಯ ವಿಷಯದಲ್ಲಿ ಪ್ರಥಮ ಸ್ಥಾನವನ್ನು ಪಡೆದಿತ್ತು. ಈಗ ಅದು ತನ್ನ ಸ್ಥಾನವನ್ನು ಬಹಳ ಕೆಳಮಟ್ಟದಲ್ಲಿ ಪಡೆದಿದೆ. ಈಗ ಮಾನ್ಯ ಮಂತ್ರಿಗಳು ಮಂಡಿಸಿರತಕ್ಕ ಈ ಡಿಮ್ಯಾಂಡಿನಲ್ಲಿ ಸರ್ಕಾರ ನಡೆಸತಕ್ಕ ಉದ್ಯಮಗಳಿಗೆ ಸುಮಾರು 11.17 ಕೋಟಿ ರೂಪಾಯಿಗಳಷ್ಟು ಮತ್ತು ಸಣ್ಣ ಕೈಗಾರಿಕೆಗೆ ಮತ್ತು ಗೃಹ ಕೈಗಾರಿಕೆಗಳಿಗಾಗಿ 58·82 ಲಕ್ಷ ರೂಪಾಯಿಗಳನ್ನು, ಡೆವಲೆಪ್‌ಮೆಂಟ್ ಸ್ಕೀಂಗಳಿಗಾಗಿ 58·52 ಲಕ್ಷ ರೂಪಾಯಿಗಳನ್ನು ಕೇಳಿದ್ದಾರೆ. ಈ ಬೇಡಿಕೆ ಏನಿದೆ ಇದು ವಾಸ್ತವವಾದ ಬೇಡಿಕೆಯಲ್ಲ ಎಂದು ನಾನು ಹೇಳಬಯಸುತ್ತೇನೆ. ಸ್ವಾಮಿ, ಮೈಸೂರು ಸಂಸ್ಥಾನದಲ್ಲಿ ಸರ್ಕಾರ ನಡೆಸುತ್ತಾ ಇರತಕ್ಕ ಕೈಗಾರಿಕೆಗಳಲ್ಲಿ ಸುಮಾರು 90 ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು ಹಣವನ್ನು ಈ ಉದ್ದಿಮೆಯಲ್ಲಿ ತೊಡಗಿಸಿದ್ದಾರೆ. ಸರ್ಕಾರದ ನಾನ್‌ಟ್ಯಾಕ್ಸ್ ರೆವಿನ್ಯೂ ಏನಿದೆ ಅದು ಇಂಡಸ್ಟ್ರೀಸ್‌ಯಿಂದ ಬರಬೇಕಾದ್ದು. ಅದಕ್ಕೆ ಸರ್ಕಾರ ಕಷ್ಟಪಟ್ಟು ವಸೂಲು ಮಾಡತಕ್ಕ ತೆರಿಗೆ ಮತ್ತು ಇತರ ಬಾಬುಗಳಿಂದ ಇಷ್ಟು ಹಣವನ್ನು ಹಾಕಿ ಅದರಿಂದ ಪಡೆಯುತ್ತಾ ಇರತಕ್ಕ ಉತ್ಪನ್ನವನ್ನು ನಾವು ನೋಡಬೇಕಾಗಿದೆ.

1962—63	23.5	ಲಕ್ಷ ರೂಪಾಯಿ ನಷ್ಟ
1963—64	64.95	,,
1964—65	64.52	,,
1965—66	122.91	,,
1966—67	106.86	,,
1967—68	106.86	,, ವಾಗಿದೆ. ಈ ಸಾಲಿನಲ್ಲಿ

ಮಾನ್ಯ ಅರ್ಥಮಂತ್ರಿಗಳು ಸುಮಾರು 9.10 ಲಕ್ಷ ರೂಪಾಯಿಗಳಷ್ಟು ನಷ್ಟ ಬರುತ್ತದೆ ಎಂದು ಹೇಳಿದ್ದಾರೆ. ಹೇಗೆ ಬರುತ್ತದೆ ಅಂತ ಅನ್ನುವುದು ನನಗಾದರೂ ತಿಳಿಯದಂತಹ ವಿಷಯವಾಗಿದೆ. 90 ಕೋಟಿ ರೂಪಾಯಿಗಳಷ್ಟು ಬಂಡವಾಳ ಹಾಕಿ 1967-68ರಲ್ಲಿ ಸುಮಾರು ಒಂದು ಕೋಟಿ 6 ಲಕ್ಷ 86 ಸಾವಿರ ರೂಪಾಯಿ ನಷ್ಟವಾಗಿದ್ದರೆ ಈ ಕೈಗಾರಿಕೆಗಳನ್ನು ಹೇಗೆ ನಡೆಸಿಕೊಂಡು ಹೋಗಬೇಕೆನ್ನುವುದನ್ನು ಸ್ವಲ್ಪ ಯೋಚನೆ ಮಾಡಬೇಕಾಗಿದೆ. ಏಕೆಂದರೆ 90 ಕೋಟಿ ರೂಪಾಯಿಗಳೆಂದರೆ ಅದೇನೂ ಬಹಳ ಕಮ್ಮಿಯಾದಂತಹ ಹಣವಲ್ಲ. ಮೈಸೂರು ಸಂಸ್ಥಾನ ಇತರ ರಾಜ್ಯಗಳಿಗೆ ಮಾದರಿಯಾಗಿತ್ತು. ಈ ಕೈಗಾರಿಕೆಗಳನ್ನು ಸರ್ ಎಂ. ವಿಶ್ವೇಶ್ವರಯ್ಯನವರ ನೇತೃತ್ವದಲ್ಲಿ ಮತ್ತು ಹಿಂದಿನ ದಿವಾನ್‌ರವರ ನೇತೃತ್ವದಲ್ಲಿ ಮತ್ತು ರಾಜರುಗಳ ನೇತೃತ್ವದಲ್ಲಿ ಪ್ರಾರಂಭಿಸಲ್ಪಟ್ಟು

ಒಂದು ರೀತಿಯು ಹೆಮ್ಮೆಯಿಂದ ಮಾತನಾಡುತ್ತಾ ಇದ್ದೆವು. ಇತರ ರಾಜ್ಯಗಳವರು ತಮ್ಮ ಅಧಿಕಾರಿಗಳನ್ನು ಇಲ್ಲಿ ಯಾವ ರೀತಿ ಕೈಗಾರಿಕೆಗಳು ನಡೆಯುತ್ತಾ ಇವೆ ಎಂಬುದನ್ನು ತಿಳಿದು ಕೊಂಡು ಬರಲು ಕಳುಹಿಸಿ ಇದನ್ನು ಅನುಕರಣೆ ಮಾಡುವುದಕ್ಕೆ ಅನೇಕ ನಿಯೋಗಗಳು ಬಂದದ್ದು ಉಂಟು. ಈ ರೀತಿ ನಷ್ಟದಲ್ಲಿ ನಡೆಯುತ್ತಿರುವ ಕೈಗಾರಿಕೆಗೆ 11.17 ಲಕ್ಷ ರೂಪಾಯಿಗಳ ವರ್ಕಿಂಗ್ ಕ್ಯಾಪಿಟಲ್ ಕೊಡಬೇಕೆಂದು ವಾನ್ಯ ಕೈಗಾರಿಕಾ ಮಂತ್ರಿಗಳು ನಮ್ಮನ್ನು ಕೇಳುತ್ತಾ ಇದ್ದಾರೆ.

3-00 P.M.

ಅಷ್ಟು ಏಕೆ ಕೊಡಬೇಕು ? ಹೀಗೆ ನಷ್ಟದಲ್ಲಿ ನಡೆಯುತ್ತಿರುವುದಕ್ಕೆ ಸಾರ್ವಜನಿಕರಿಂದ ಕಷ್ಟ ಪಟ್ಟು ಸಂಪಾದಿಸಿದ ಹಣವನ್ನು ಮತ್ತೆ ಮತ್ತೆ ಇದರಲ್ಲಿ ಹಾಕಿ ಆ ಹಣವನ್ನೂ ಹಾಳುಮಾಡ ಬೇಕೇನು ? ಇದಕ್ಕೆ ಒಂದು ಉದಾಹರಣೆಯಾಗಿ ತಿಳಿಸುವುದಾದರೆ ಕಮ್ಯೂನಿಟಿ ಡೆವಲಪ್‌ಮೆಂಟ್ ಮತ್ತು ನ್ಯಾಷನಲ್ ಎಕ್ಸ್‌ಟೆನ್ಷನ್ ಬ್ಲಾಕುಗಳಲ್ಲಿ ಸ್ಮಾಲ್‌ಸ್ಕೇಲ್ ಇಂಡಸ್ಟ್ರೀಸ್ ಮತ್ತು ಕಾಟೇಜ್ ಇಂಡಸ್ಟ್ರಿಗಳಿಗೆ ಸರ್ಕಾರ 6 ಲಕ್ಷ 76 ಸಾವಿರ ರೂಪಾಯಿಗಳನ್ನು ಕೊಟ್ಟಿದೆ. ಈ ಮೊಬಲಗಿನಲ್ಲಿ ಪ್ರತಿಯೊಂದು ತಾಲ್ಲೂಕಿನಲ್ಲೂ ಇರತಕ್ಕ ಇಂಡಸ್ಟ್ರಿಯಲ್ ಎಕ್ಸ್‌ಟೆನ್‌ಷನ್ ಆಫೀಸರುಗಳಿಗೆ ಖರ್ಚುಮಾಡುತ್ತಿರುವುದು ಎಷ್ಟು ? ಅವರಿಗೆಲ್ಲಾ ವರ್ಷಕ್ಕೆ 2-3 ಸಾವಿರ ಖರ್ಚುಮಾಡಿದರೆ ಹೆಚ್ಚಾಯಿತು. ಇನ್ನು ಆ ಸಿಬ್ಬಂದಿ ವರ್ಗಕ್ಕೆ ಖರ್ಚಾಗುತ್ತಿರುವ ಹಣ ಎಷ್ಟೆಂದರೆ ಆರೂಮುಕ್ಕಾಲು ಲಕ್ಷ. ಇಷ್ಟು ಹಣ ಆ ಸಿಬ್ಬಂದಿ ವೆಚ್ಚಕ್ಕೆ ಬೇಕೇ ? ಇಲ್ಲಿ ಒಂದೊಂದು ವಿಷಯವನ್ನೂ ಸರಿಯಾಗಿ ಅನಲೈಜ್ ಮಾಡಿದರೆ ಸಿಬ್ಬಂದಿಗಾಗಿ ಖರ್ಚಾಗತಕ್ಕ ಹಣ ಜಾಸ್ತಿ ಇರುತ್ತದೆಯೇ ವಿನಾ ಡೆವಲಪ್‌ಮೆಂಟಿಗೆ ನಿಖರವಾಗಿ ವಿನಿಯೋಗ ಮಾಡತಕ್ಕ ಹಣ ಬಹಳ ಕಡಮೆಯಾಗಿರುತ್ತದೆ. ನಮ್ಮ ರಾಜ್ಯದಲ್ಲಿ ಸಣ್ಣ ಸಣ್ಣ ಕೈಗಾರಿಕೆಗಳ ಯೂನಿಟ್ ಸುಮಾರು 5,000 ಇರಬಹುದು. ಆದರೆ ಒಂದೊಂದರಲ್ಲೂ ಅಲ್ಲಿ ಕೆಲಸಮಾಡತಕ್ಕವರ ಸಂಖ್ಯೆಯನ್ನು ನೋಡಿದರೆ 10 ಜನರಿಗಿಂತ ಜಾಸ್ತಿಯಾಗಿ ಇರುವುದಿಲ್ಲ. 50 ಸಾವಿರ ಜನರು ಕೆಲಸಮಾಡತಕ್ಕ ಕಡೆ ಸರ್ಕಾರದವರು ಒದಗಿಸಿರತಕ್ಕ ಹಣ 58.82 ಲಕ್ಷ. ಕಾಟೇಜ್ ಅಂಡ್ ಸ್ಮಾಲ್‌ಸ್ಕೇಲ್ ಇಂಡಸ್ಟ್ರಿಗಳ ಬಾಬಿನಲ್ಲಿ ಎಷ್ಟು ದುಡ್ಡು ಸಿಬ್ಬಂದಿಗಾಗಿ ಖರ್ಚಾಗುತ್ತಿದೆ ಎಂದರೆ ಆ ಡೆವಲಪ್‌ಮೆಂಟ್ ಬಾಬಿನ ನಾಲ್ಕರಷ್ಟು ಹಣ ಅದಕ್ಕೆ ವಿನಿಯೋಗವಾಗುತ್ತಿದೆ. ಹಾಗೆ ಆ ಖಾದಿ ಗ್ರಾಮೋದ್ಯೋಗಕ್ಕೆ ಸುಮಾರು ಹದಿನಾರೂವರೆ ಲಕ್ಷ ರೂಪಾಯಿಗಳನ್ನು ಗ್ರಾಂಟ್ ರೂಪದಲ್ಲಿ ಕೊಡಲಾಗುತ್ತಿದೆ. ಅಷ್ಟು ಹಣವನ್ನು ಅದಕ್ಕೆ ಏಕೆ ಕೊಡಬೇಕು ? ಆ ಖಾದೀ ಬೋರ್ಡ್ ಈ ದಿವಸ ಏನು ಕೆಲಸ ಮಾಡುತ್ತಿದೆ ? ನಮ್ಮ ರಾಜ್ಯದಲ್ಲಿ ಯಾವುದಾದರೂ ಕೆಟ್ಟಕೆಲಸ ಮಾಡತಕ್ಕ ಒಂದು ಉದ್ಯಮ ಇದೆ ಎನ್ನುವುದಾದರೆ ಅದು ಖಾದೀ ಉದ್ಯಮವೇ ಎಂದು ಹೇಳಬೇಕು. ಇದಕ್ಕೆ ಅಷ್ಟು ಉದಾರವಾಗಿ ಪ್ರೋತ್ಸಾಹ ಕೊಡುವುದಕ್ಕಾದರೂ ಕಾರಣವೇನು ? ಅದನ್ನು ದಾನ ರೂಪವಾಗಿ ಕೊಡುವುದಾದರೆ ಅದಕ್ಕೆ ಆಕ್ಷೇಪಣೆ ಇಲ್ಲ.

ಇನ್ನು ನಮ್ಮಲ್ಲಿ ಕೆಲವು ಪ್ರೆಸ್ಟೀಜ್ ಮೇಲೆ ನಡೆಯುತಕ್ಕ ಕೈಗಾರಿಕೆಗಳು ಬೇರೆ ಇವೆ. ಮಡಕೇರಿಯಲ್ಲಿ ಇರತಕ್ಕ ಆ ಸೆಂಟ್ರಲ್ ಇಂಡಸ್ಟ್ರಿಯಲ್ ವರ್ಕ್‌ಷಾಪ್ ಏನಿದೆ ಅದು ಸರ್ಕಾರದವರು ಕೊಟ್ಟಿರತಕ್ಕ ಸೌಲಭ್ಯಗಳನ್ನು ದುರುಪಯೋಗ ಮಾಡುತ್ತಿದೆ. ಅಲ್ಲಿ ಸಿಬ್ಬಂದಿಯ ವೆಚ್ಚಕ್ಕಾಗಿ ಒಂದು ಲಕ್ಷ ರೂಪಾಯಿಗಳನ್ನು ಖರ್ಚುಮಾಡಲಾಗುತ್ತಿದೆ. ಇದು ಇನ್ನೂ ಹೆಚ್ಚಾಗತಕ್ಕ ಸಂದರ್ಭಗಳಿವೆ ಎಂದು ಹೇಳಲಾಗುತ್ತಿದೆ. ನಾನು ಆ ಉದ್ಯಮವನ್ನು ಆ ಎಸ್ಟಿಮೇಟ್ ಕಮಿಟಿಯವರ ಜೊತೆಯಲ್ಲಿ ಹೋಗಿದ್ದಾಗ ಕಣ್ಣಾರೆ ನೋಡಿದ್ದೇನೆ. ಇಂಥ ಸಂಸ್ಥೆಗಳನ್ನು ಸರ್ಕಾರದವರು ಏತಕ್ಕೆ ಇಟ್ಟುಕೊಳ್ಳಬೇಕು ? ಇವುಗಳನ್ನು ಕೂಡಲೆ ರದ್ದುಮಾಡಿದರೆ ದೇಶಕ್ಕೆ ದೊಡ್ಡ ಕ್ಷೇಮ. ಪ್ರತಿ ವರ್ಷವೂ ಇದರಿಂದ ಸರ್ಕಾರಕ್ಕೆ 30-35 ಲಕ್ಷ ರೂಪಾಯಿಗಳು ನಷ್ಟವಾಗುತ್ತಿದ್ದರೆ ಅಷ್ಟು ಹೆಚ್ಚಿನ ಖರ್ಚು ಬರತಕ್ಕ ಸಿಬ್ಬಂದಿಯನ್ನು ಇಟ್ಟುಕೊಂಡಿದ್ದರೂ ಅದನ್ನು ಸರಿಪಡಿಸಿ ಲಾಭದಾಯಕವಾದ ರೀತಿಯಲ್ಲಿ ನಡೆಸುವುದಕ್ಕಾಗದಿದ್ದರೆ ಅದನ್ನು ಏತಕ್ಕೆ ಇಟ್ಟುಕೊಳ್ಳಬೇಕು ? ಅಲ್ಲಿ ಬರಿ ಡೆಮಾನಸ್ಟ್ರೇಷನ್ನಿಗೆ 24-25 ಲಕ್ಷ ರೂಪಾಯಿಗಳನ್ನು ಖರ್ಚುಮಾಡಲಾಗುತ್ತಿದೆ. ಇಲ್ಲಿಯವರೆಗೂ ಅಷ್ಟು ಅಪಾರ ಹಣವನ್ನು ಖರ್ಚುಮಾಡಿದ್ದಾಗ್ಯೂ ಅಲ್ಲಿ ಏನಾದರೂ ಹೊಸ ತಳಿಗಳನ್ನು ಹುಡುಕಿ ಕೊಟ್ಟಿದ್ದಾರೆಯೇ ? ಇಂಡಿಯಾ ದೇಶದಲ್ಲೇ ಉತ್ಪತ್ತಿಯಾಗತಕ್ಕ ರೇಷ್ಮೆಯಲ್ಲಿ ಶೇ. 75 ರಷ್ಟು ನಮ್ಮ ಮೈಸೂರು ರಾಜ್ಯದಲ್ಲಿ ಉತ್ಪತ್ತಿಯಾಗುತ್ತದೆ ಮತ್ತು ಇದು ಎಲ್ಲಾ ಇತರೇ ರೇಷ್ಮೆಗಳಿಗಿಂತ ಬಹಳ ಉತ್ತಮ ದರ್ಜೆಯ ರೇಷ್ಮೆ, ನಮ್ಮ ರಾಜ್ಯದ್ದು. ಅಲ್ಲಿ ಇಷ್ಟು ಡೆಮಾನ್‌ಸ್ಟ್ರೇಷನ್ ನಡೆಸಿದ್ದಾಗ್ಯೂ ಯಾವ ಒಂದು ಹೊಸ ಅನ್ವೇಷಣವನ್ನೂ ಮಾಡಿಲ್ಲ. ಅದಕ್ಕೇನು ಕಾರಣ ಎಂದು ನಾನು ಅಲ್ಲಿಗೆ ಆ ಎಸ್ಟಿಮೇಟ್ ಕಮಿಟಿಯವರ ಜೊತೆಯಲ್ಲಿ ಹೋಗಿದ್ದಾಗ ಕೇಳಿದ್ದಕ್ಕೆ ಅಲ್ಲಿದ್ದ ಅಧಿಕಾರಿ ಅದಕ್ಕೆ ಸಮಂಜಸವಾದ ಉತ್ತರವನ್ನು ಕೊಡುವುದಕ್ಕೆ ಆತನಿಂದ ಸಾಧ್ಯವಾಗಲಿಲ್ಲ.

(ಶ್ರೀ ಎಚ್. ಬಿ. ಜ್ವಾಲನಯ್ಯ)

ನಮ್ಮ ರಾಜ್ಯದ ಶಿಲ್ಕನ್ನು ಪ್ಯಾರಾಚೂಟ್ ಮಾಡುವುದಕ್ಕೆ ಕೂಡ ಉಪಯೋಗ ಮಾಡುವಂತದು. ಇದನ್ನು ಉತ್ತಮಗೊಳಿಸುವುದಕ್ಕೆ ಸರ್ಕಾರದವರು ತೀವ್ರ ಕಾರ್ಯಕ್ರಮ ಕೈಗೊಳ್ಳಬೇಕು. ಆ ಇಲಾಖೆಯುವರಿಂದ ಅದು ಸಾಧ್ಯವಾಗದಿದ್ದರೆ ಅದನ್ನು ಬೇರೆ ಯಾರಿಗಾದರೂ ತೋರಿಸಿ ಅದನ್ನು ಉತ್ತಮಪಡಿಸುವುದಕ್ಕೆ ಪ್ರಯತ್ನ ಮಾಡಬೇಕು.

ಇನ್ನು ನಮ್ಮಲ್ಲಿರತಕ್ಕ ಗಂಧದ ಎಣ್ಣೆಯ ಕಾರ್ಖಾನೆಗಳಿಂದ ಲಾಭ ಬರುತ್ತಿದೆ ಎಂದು ಹೇಳಿದ್ದಾರೆ. ಇದರಲ್ಲಿ ಸಿಬ್ಬಂದಿಗಾಗಿ 1.63 ಲಕ್ಷ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದಾರೆ. ಅಲ್ಲಿ ಲೇಬರುಗಳಿಗೆ ಖರ್ಚಾಗುತ್ತಿರುವುದು 3.67 ಲಕ್ಷ ಮಾತ್ರ. ಇವೆರಡನ್ನೂ ಹೋಲಿಕೆ ಮಾಡಿದರೆ ಪ್ರಪೋರ್ಷನೇಟ್ ವೆಚ್ಚಗಳು ಸರಿಯಾಗಿರುವುದಿಲ್ಲ. ಲೇಬರುಗಳಿಗೆ ಖರ್ಚುಮಾಡತಕ್ಕ ಹಣದ ಎರಡರಷ್ಟು ಸಿಬ್ಬಂದಿಗಾಗಿ ವೆಚ್ಚವಾಗುತ್ತಿದೆ. ಇದನ್ನು ತಪ್ಪಿಸಿ ಈ ಎರಡಕ್ಕೂ ಒಂದು ದಾಮಾಷಾದಲ್ಲಿ ಈ ಖರ್ಚುಗಳಿರುವಂತೆ ನೋಡಿಕೊಳ್ಳಬೇಕು. ಅವರೆ ಈಗ ಈ ಗಂಧದ ಬಾಬಿನಿಂದ ಲಾಭ ಬರುತ್ತಿದೆ ಎಂದು ಹೇಳಿರತಕದ್ದನ್ನು ವಿಮರ್ಷೆ ಮಾಡಬೇಕಾಗಿದೆ. ನಮ್ಮಲ್ಲಿ ಕೆಲವು ತಿಂಗಳುಗಳ ಹಿಂದೆ ದುಡ್ಡಿನ ಬೆಲೆಯನ್ನು ತಗ್ಗಿಸಲಾಯಿತು. ಆಗ ಪರರಾಷ್ಟ್ರಗಳು ಇಂಡಿಯಾ ದೇಶದ ಕಚ್ಚಾ ಮಾಲುಗಳನ್ನು ಕೊಳ್ಳುವಾಗ ಈ ಲಾಭ ಬಂದಿದೆ ಆದುದರಿಂದ ಇದು ಗಂಧದ ಮಾರಾಟದಿಂದ ಬಂದ ಲಾಭವಲ್ಲ. ಇದು ಆ ಮನೀ ಡಿವ್ಯಾಲ್ಯುಯೇಷನ್ನಿಂದ ಬಂದ ಪ್ರತಿಫಲ ಎನ್ನಬೇಕು. ಅಲ್ಲದೆ ಈ ಕಂಪೆನಿಗಳಿಗೆ ಗಂಧದ ಮರಗಳನ್ನು ಒಂದು ರಿಯಾಯಿತಿ ದರದಲ್ಲಿ ಕೊಡಲಾಗುತ್ತಿದೆ. ಹಾಗೆ ಮಾಡದೆ ಆ ಕಾರ್ಖಾನೆಗಳು ಈ ಕಚ್ಚಾಮಾಲುಗಳನ್ನು ಮಾರುಕಟ್ಟೆಯಲ್ಲಿ ಕೊಂಡು ಆಗ ಈ 8 ಲಕ್ಷ ರೂಪಾಯಿಗಳ ಲಾಭ ಮಾಡಿದ್ದರೆ ಅದನ್ನು ಒಪ್ಪಬಹುದಾಗಿತ್ತು. ಆದ್ದರಿಂದ ಇಲ್ಲಿ ತೋರಿಸಿರತಕ್ಕ 8 ಲಕ್ಷವನ್ನು ಲಾಭ ಎಂದು ಪರಿಗಣಿಸುವುದಕ್ಕಾಗುವುದಿಲ್ಲ.

ಇನ್ನು ಇದೇ ರೀತಿಯಾಗಿ ಮಂಡ್ಯಾದಲ್ಲಿ ಒಂದು ನ್ಯಾಷನಲ್ ಪೇಪರ್ ಮಿಲ್ಸ್ ಎಂದು ಇದೆ. ಅದು ಒಂದು ಬಹಳ ಅನ್ಎಕನಾಮಿಕಲ್ ಪೇಪರ್ ಮಿಲ್, ಅದರ ಕ್ಯಪಾಸಿಟಿ 35 ಟನ್ ಮಾತ್ರ ಅದಕ್ಕೀಗ ಸರ್ಕಾರದವರು 50 ಲಕ್ಷ ರೂಪಾಯಿಗಳನ್ನು ಕೊಡುವುದಕ್ಕೆ ಹೊರಟಿದ್ದಾರೆಂದು ನನ್ನ ಒಬ್ಬ ಮಿತ್ರರು ಇಲ್ಲಿ ಹೇಳುತ್ತಿದ್ದಾರೆ. ಅದಕ್ಕೆ ಏಕೆ ಅಷ್ಟು ಹಣವನ್ನು ಕೊಡಬೇಕು?

ಇನ್ನು ಆ ಭದ್ರಾವತಿ ಐರನ್ ಅಂಡ್ ಸ್ಟೀಲ್ ವರ್ಕ್ಸ್‌ಗೆ ಅದನ್ನು ಒಂದು ಕಾರ್ಪೊರೇಷನ್ನಾಗಿ ಪರಿವರ್ತನೆ ಮಾಡಬೇಕೆಂದು' ಹೇಳಲಾಗಿದೆ. ಆದರೆ ಅಲ್ಲಿ ಈ ದಿವಸ ಉತ್ಪತ್ತಿ ಮಾಡತಕ್ಕ ಸ್ಟೀಲನ್ನು ಕೊಳ್ಳತಕ್ಕ ಜನರು ಯಾರು? ಅದಕ್ಕೆ ಮಾರುಕಟ್ಟೆ ಇದೆಯೋ ಎಂದರೆ ಅದನ್ನು ಅವರು ಸರ್ವೆಮಾಡಿಲ್ಲ. ಹಾಗೆ ಸರ್ವೆ ಮಾಡದೆ ಅದನ್ನು ಏಕೆ ತಯಾರಿಸುತ್ತಿದ್ದೀರಿ ಎಂದರೆ ಅದಕ್ಕೆ ಅವರಿಂದ ಸರಿಯಾದ ಉತ್ತರವಿಲ್ಲ. ಅದರಲ್ಲಿ ಆ ಕೇಂದ್ರದವರ ಹಣ ಬೇರೆ ಸೇರಿದೆ. ಅಲ್ಲಿ ಈ ದಿವಸ ಒಂದು ಕನ್‌ಸೋರ್ಟಿಯಂ ಏಜನ್ಸಿ ಅಂತ ಒಬ್ಬರಿದ್ದಾರೆ. ವರ್ಷಕ್ಕೆ 10-12 ಲಕ್ಷ ರೂಪಾಯಿಗಳನ್ನು ಕೊಟ್ಟು ಅವರನ್ನಲ್ಲಿ ಇಟ್ಟುಕೊಳ್ಳಲಾಗಿದೆ. ಅಲ್ಲಿ ಒಂದು ಸಾಮಾನ್ಯವಾದ ಷೆಡ್ಡನ್ನು ನಿರ್ಮಾಣಮಾಡಲು ನಮ್ಮಲ್ಲಿ ಬಹಳ ಕುಶಲರಾದ ಕೆಲಸಗಾರರಿದ್ದಾಗ್ಯೂ ಅಲ್ಲಿ ಅವರ ಮೇಲೆ ಇವರ ಒಂದು ಸೂಪರ್‌ವಿಜನ್‌ಗೆಂದು 2-3 ಲಕ್ಷ ರೂಪಾಯಿಗಳನ್ನು ಖರ್ಚುಮಾಡಲಾಗುತ್ತದೆ. ಇದೆಲ್ಲಾ ಬಹಳ ದಂಡದ ಖರ್ಚುವೆಚ್ಚಗಳು. ಅಲ್ಲಿ ಒಂದು ಆಕ್ಸಿಜನ್ ಪ್ಲಾಂಟನ್ನು ಇಟ್ಟುಕೊಂಡಿದ್ದಾರೆ. ಅದನ್ನು ನಡೆಸುವುದಕ್ಕೆ ಆ ಯಂತ್ರವನ್ನು ಯಾವ ದೇಶದವರು ಯಾವ ಕಂಪೆನಿಯವರು ಸಪ್ಲೈ ಮಾಡಿದರೋ ಅವರ ಬಳಿಗೆ ಕೆಲವು ತಜ್ಞರನ್ನು ಇಲ್ಲಿಂದ ಕಳುಹಿಸಿ ಅವರನ್ನು ತರಬೇತು ಮಾಡುವಂತೆ ಆ ಕಂಪೆನಿಗೆ ಒಂದು ನೋಟನ್ನು ಕೊಟ್ಟಿದ್ದಾರೆ. ಅವರಿಗೆ ಸುಮಾರು ಒಂಬು ಲಕ್ಷ ರೂಪಾಯಿಗಳಿಗಿಂತಲೂ ಹೆಚ್ಚು ಸಂಭಾವನೆ ಕೊಡುತ್ತಿದ್ದಾರೆ. ಇದರ ಜೊತೆಗೆ ಭದ್ರಾವತಿ ಕಾರ್ಖಾನೆಯ ಸೇಲ್ಸ್ ಸೆಕ್ಷನ್ ಬಗ್ಗೆ ನಾನು ಹೇಳುವುದಾದರೆ, ಹಾಸನ ಕೋ-ಅಪರೇಟಿವ್ ಸೊಸೈಟಿಯವರು ಭದ್ರಾವತಿಯ ಕಬ್ಬಿಣವನ್ನು ಕೊಂಡುಕೊಳ್ಳುತ್ತಾರೆ. ಆದರೆ ಅವರು ಎಷ್ಟು ಇಂಡೆಂಟ್ ಕಳುಹಿಸುತ್ತೇವೋ ಅದನ್ನು ವಾಪಸ್ಸು ಕಳುಹಿಸಿ ಅವರು ಕೇಳಿದ ಸೆಕ್ಷನ್‌ಗಳನ್ನು ಕಳುಹಿಸುತ್ತಾ ಇಲ್ಲವೆಂದು ಹೇಳುತ್ತಿದ್ದಾರೆ. ಸರ್ಕಾರದಲ್ಲಿ ಅದು ಯಾರ್ಯಾರಿಗೆ ಮಾರಾಟವಾಗುತ್ತಿದೆಯೋ ಗೊತ್ತಿಲ್ಲ. ಅಲ್ಲಿ ಎಷ್ಟೋ ಸಾಮಗ್ರಿಗಳು ಮತ್ತು ಉತ್ಪತ್ತಿಯಾಗುವ ಕಬ್ಬಿಣ ಅಲ್ಲಿನ ಸ್ಟೀಲ್ ಸೆಕ್ಷನ್ನಿಗೆ ಗೊತ್ತಿಲ್ಲದೆ ರೈಲ್ವೆ ಗುಡ್ಸ್ ಗಾಡಿಗಳಲ್ಲಿ ಕೆಳಗೆ ಕಬ್ಬಿಣ ಹಾಕಿ ಮೇಲ್ಗಡೆ ಕಚಡ ಹಾಕಿ ಕಳುಹಿಸುತ್ತಾರೆ. ಅದರ ಜೊತೆಗೆ ನಮ್ಮ ದೇಶದಲ್ಲಿನ ಕೈಗಾರಿಕೆಗಳ ಪೈಕಿ ರೆಮ್‌ಕೊ ಫ್ಯಾಕ್ಟರಿ ಒಂದಿದೆ. ಇದರಲ್ಲಿ 7-8 ಮೇಜರ್ ಐಟಂಗಳನ್ನು ಮಾತ್ರ ತೆಗೆದುಕೊಂಡಿದ್ದಾರೆ. ಆ ಒಂದೊಂದು ಐಟಂಗೆ 10 ಲಕ್ಷ ರೂಪಾಯಿಗಳನ್ನು ಹಾಕಿದರೂ ಸಾಕಾಗುವುದಿಲ್ಲ.

28 ಐಟಂಗಳನ್ನು ಈಗ ತೆಗೆದುಕೊಂಡಿರುವುದರಿಂದ ಯಾವ ಒಂದು ಐಟಂನ್ನು ಸರಿಯಾಗಿ ನಡೆಸಿಕೊಂಡು ಮಾಡುವುದಕ್ಕಾಗುವುದಿಲ್ಲ. ಒಂದೆರಡು ಐಟಂಗಳನ್ನು ತೆಗೆದುಕೊಂಡರೆ ಮಾತ್ರ ಅವು ಬಹಳ ಚೆನ್ನಾಗಿ ಆಗುತ್ತದೆ. ಆ ರೀತಿಯಾಗಿ ಅಲ್ಲಿ ನಡೆಯಬೇಕಾಗಿತ್ತು. ಅಲ್ಲಿಯೂ ಕೂಡ ನಷ್ಟದಲ್ಲಿ ಅದನ್ನು ನಡೆಸುತ್ತಿದ್ದಾರೆ. ಅದರಿಂದ ಯಾವರೀತಿಯಲ್ಲಿಯೂ ಅನುಕೂಲವಾಗಿಲ್ಲ.

ಇನ್ನು ಎಂ.ಎಸ್.ಕೆ ಮಿಲ್ಸ್ ವಿಷಯವಾಗಿ ಹೇಳುವುದಾದರೆ, ರಾತ್ರಿ ಕಂಡ ಬಾವಿಗೆ ಹಗಲು ಹೋಗಿ ಬಿದ್ದ ಹಾಗೆ, ಈಗಾಗಲೇ ಈ ಕಾರ್ಖಾನೆಯಲ್ಲಿ ಕೋಟ್ಯಾಂತರ ರೂಪಾಯಿಗಳು ನಷ್ಟವಾಗುತ್ತಿರುವಾಗ ಮತ್ತೆ ಈ ಹಳೆಯ ಯಂತ್ರಗಳಿಂದಲೇ ಆ ಕಾರ್ಖಾನೆಗಳನ್ನು ನಡೆಸುವುದಕ್ಕೋಸ್ಕರ ಬೇಕಾದಷ್ಟು ಹಣವನ್ನು ಸರ್ಕಾರದವರು ಖರ್ಚುಮಾಡುತ್ತಿದ್ದಾರೆ. ಅದು ಸಾಧುವಾದ ಮಾರ್ಗವಲ್ಲ. ಅದರ ಜೊತೆಗೆ ಸರ್ಕಾರ ನಡೆಸುವ ಉದ್ಯಮಕ್ಕೆ ಬ್ಯಾಲೆನ್ಸ್ ಷೀಟ್ ಅವಶ್ಯಕತೆ ಇದೆ. ಸರ್ಕಾರಿ ಉದ್ಯಮದಲ್ಲಿ ಬ್ಯಾಲೆನ್ಸ್ ಷೀಟ್ ಇಲ್ಲದೇ ಇರುವುದರಿಂದ, ಅಲ್ಲಿ ನಷ್ಟ ಯಾವರೀತಿ ಆಗುತ್ತದೆ ಎಂಬುದು ಗೊತ್ತಾಗುವುದಿಲ್ಲ ಸರ್ಕಾರದ ಕಾರ್ಖಾನೆಯಲ್ಲಿಯೂ ಕೂಡ ಬ್ಯಾಲೆನ್ಸ್ ಷೀಟ್ ತಯಾರಿಸುವ ಸಲುವಾಗಿ ಅದಕ್ಕೆ ಬೇಕಾದ ತಿದ್ದುಪಡಿಯನ್ನು ಕಾನೂನಿಗೆ ಮಾಡಬೇಕೆಂದು ನಾನು ಸೂಚಿಸುತ್ತೇನೆ. ಅದರ ಜೊತೆಗೆ ಹಾಸನದಲ್ಲಿ ಮೈಸೂರು ಇಂಪ್ಲಿಮೆಂಟ್ಸ್ ಫ್ಯಾಕ್ಟರಿ ಎಂದು ಇವೆ. ಅದನ್ನು ಪ್ರಾರಂಭ ಮಾಡಿದ್ದು 30 ವರ್ಷಗಳ ಹಿಂದೆ. ಅಲ್ಲಿ ಮೈಸೂರು ಸಂಸ್ಥಾನಕ್ಕೆ ಬೇಕಾದಂಥ ವ್ಯವಸಾಯೋಪಕರಣಗಳನ್ನು ತಯಾರು ಮಾಡಬೇಕೆಂದಿದ್ದರು. ಆದರೆ ಅಲ್ಲಿ ವ್ಯವಸಾಯೋಪಕರಣಗಳನ್ನು ಉತ್ಪತ್ತಿಮಾಡುವುದನ್ನೇ ಬಿಟ್ಟಿದ್ದಾರೆ. ನಾವು ಕೋಟ್ಯಾಂತರ ರೂಪಾಯಿಗಳ ಪ್ರಾಜೆಕ್ಟ್‌ಗಳನ್ನು ಮಾಡುತ್ತಿದ್ದೇವೆ. ನಾವು ವ್ಯವಸಾಯವನ್ನು ಆಧುನಿಕ ರೀತಿಯಲ್ಲಿ ನಡೆಸಬೇಕೆಂದು ಹೇಳುತ್ತಿದ್ದರೂ, ಈ ಒಂದು ವ್ಯವಸಾಯೋಪಕರಣವನ್ನು ತಯಾರು ಮಾಡುವ ಕಾರ್ಖಾನೆಯಲ್ಲಿ ಒಂದು ನೇಗಿಲನ್ನು ಕೂಡ ನಾವು ತಯಾರು ಮಾಡುತ್ತಾ ಇಲ್ಲ. ಕೋಲಾರದಲ್ಲಿ ಪವರ್ ಟಿಲ್ಲರ್ಸ್ ಕಾರ್ಖಾನೆ ಮಾಡುತ್ತಿದ್ದಾರೆ. ಅದೇ ರೀತಿ ಹಾಸನದಲ್ಲಿಯೂ ಮಾಡಬೇಕು. ಸರ್ಕಾರ ಇಂತಹ ಉತ್ತಮವಾದ ಫ್ಯಾಕ್ಟರಿ ಇಟ್ಟುಕೊಂಡು ವ್ಯವಸಾಯಕ್ಕೆ ಬೇಕಾದಂಥ ಪವರ್ ಟಿಲ್ಲರ್ಸ್, ಬುಲ್‌ಡೋಜರ್ಸ್, ಟ್ರಾಕ್ಟರ್ಸ್, ಇನ್ನೂ ಇತರ ಸ್ಪೇರ್ ಪಾರ್ಟ್ಸ್ ತಯಾರು ಮಾಡುವುದಕ್ಕೆ ಸರ್ಕಾರದವರು ಯಾವರೀತಿಯಾಗಿಯೂ ವ್ಯವಸ್ಥೆ ಮಾಡಲಿಲ್ಲ. ಆಗ್ರೋ ಇಂಡಸ್ಟ್ರೀಸ್ ಫೈನಾನ್ಷಿಯಲ್ ಕಾರ್ಪೋರೇಷನ್ನಿನವರು ಒಂದು ಸಾವಿರ ಟ್ರಾಕ್ಟರುಗಳನ್ನು ಮೈಸೂರು ಸಂಸ್ಥಾನದಲ್ಲಿ ಹಂಚಬೇಕೆಂದು ಮಾಡುತ್ತಿದ್ದಾರೆ. ಆದ್ದರಿಂದ ಹಾಸನ ಇಂಪ್ಲಿಮೆಂಟ್ ಫ್ಯಾಕ್ಟರಿಗೆ ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಒಂದು ಕೋಟಿ ರೂಪಾಯಿಗಳನ್ನು ಒದಗಿಸಿ ಟ್ರಾಕ್ಟರಿಗೆ ಬೇಕಾದಂಥ ಉಪಕರಣಗಳನ್ನು ಮತ್ತು ವ್ಯವಸಾಯಕ್ಕೆ ಬೇಕಾದಂಥ ಉಪಕರಣಗಳನ್ನು ಮಾಡುವ ವ್ಯವಸ್ಥೆಯನ್ನು ಕೂಡಲೇ ಸರ್ಕಾರದವರು ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಸೂಚಿಸಬಯಸುತ್ತೇನೆ.

ಇನ್ನು ಮೈಸೂರು ಸಂಸ್ಥಾನದಲ್ಲಿ ಭೂಸಂಪತ್ತು ಮತ್ತು ಖನಿಜಸಂಪತ್ತು ಅಪಾರವಾಗಿ ಇದೆ. ಭದ್ರಾವತಿಯಿಂದ ಹಿಡಿದು ನಾರ್ತ್ ಕರ್ನಾಟಕ ಮೇಲ್ಭಾಗದಲ್ಲಿ ಇರುವಂಥ ಕಬ್ಬಿಣದ ಅದುರು, ಬಾಕ್ಸೈಟ್ ಅದುರು, ಸುಣ್ಣದ ಕಲ್ಲು ಬೇಕಾದಷ್ಟು ದೊರೆಯುತ್ತದೆ. 1913ನೇ ಇಸವಿಯಲ್ಲಿ ಸರ್ ಎಂ ವಿಶ್ವೇಶ್ವರಯ್ಯನವರ ಕಾಲದಲ್ಲಿ ಒಂದು ನ್ಯಾಷನಲ್ ಸರ್ವೆ ಮಾಡಿದ್ದರು. ಅವರು ಒಂದು ಒಳ್ಳೆಯ ವರದಿಯನ್ನು ಕೊಟ್ಟಿದ್ದಾರೆ. ಅದಾದಮೇಲೆ ನ್ಯಾಷನಲ್ ಕೌನ್ಸಿಲ್ ಆಫ್ ಅಪ್ಲೈಡ್ ಇಕನಾಮಿಕ್ ರಿಸರ್ಚ್‌ನವರು ಡಾ|| ಲೋಗನಾಥನ್ ಅವರ ನೇತೃತ್ವದಲ್ಲಿ ಹೊಸ ಮೈಸೂರಿಗೆ ಸಂಬಂಧಪಟ್ಟಂತೆ ಒಂದು ಸರ್ವೆಮಾಡಿ ಒಂದು ವರದಿಯನ್ನು ಕೊಟ್ಟಿದ್ದಾರೆ. ಅದರ ಪ್ರಕಾರ ಫಾರೆಸ್ಟ್ ಬೇಸ್ಡ್ ಇಂಡಸ್ಟ್ರೀಸ್, ಹೆಚ್ಚಿಗೆ ಬೆಳೆಸುವುದಕ್ಕೆ ಅವಕಾಶವಿದೆ. ಪತ್ರಿಕೆಗೆ ಬೇಕಾದಂಥ ನ್ಯೂಸ್‌ಪ್ರಿಂಟ್ ಬಹಳ ಅಭಾವ ಇದೆ. ಅದು ಹೊರದೇಶಗಳಿಂದ ಬರುತ್ತಿದೆ. ನೇಪಾದಲ್ಲಿ ತಯಾರುಮಾಡುತ್ತಿದ್ದಾರೆ. ಅದಕ್ಕೆ ಬೇಕಾದಂಥ ಫಾರೆಸ್ಟ್ ರಿಸೋರ್ಸಸ್ ಇಟ್ಟುಕೊಂಡು ನ್ಯೂಸ್ ಪ್ರಿಂಟನ್ನು ಮೈಸೂರು ಸಂಸ್ಥಾನದಲ್ಲಿ ಡೆವಲಪ್ ಮಾಡಲಿಲ್ಲ. ಅದನ್ನು ಇಲ್ಲಿ ಮಾಡಬಹುದೆಂದು ಸಲಹೆ ಕೊಡುತ್ತೇನೆ. ಮಿನರಲ್ ಬೇಸ್ಡ್ ಇಂಡಸ್ಟ್ರೀಸ್ ಮತ್ತು ಸಿಮೆಂಟ್ ಇಂಡಸ್ಟ್ರೀಸ್‌ನಲ್ಲಿ 5–6 ಕಾರ್ಖಾನೆಗಳು ಕೆಲಸ ಮಾಡುತ್ತಿವೆ. ಅವು ಸಾಕಾಗುವುದಿಲ್ಲ. ಸ್ಮಾಲರ್ ಯೂನಿಟ್ಸ್‌ನಿಂದ ಸಿಮೆಂಟ್ ಫ್ಯಾಕ್ಟರಿ ಎಕ್ವಿಪ್‌ಮೆಂಟ್ಸ್ 35ರಿಂದ 40 ಟನ್ನುಗಳಷ್ಟು ಉತ್ಪತ್ತಿಮಾಡುವಂಥಾದ್ದನ್ನು ಸಣ್ಣ ಸಣ್ಣ ಕಾರ್ಖಾನೆಗಳಲ್ಲಿಯೂ ಮಾಡಬಹುದೆಂದು ಅವರು ಸೂಚಿಸಿದ್ದಾರೆ. ಅದೇ ರೀತಿಯಲ್ಲಿ ಕೆಮಿಕಲ್ ಇಂಡಸ್ಟ್ರೀಸ್, ಅಸಿಡ್ಸ್ ಮತ್ತು ಕಾಸ್ಟಿಕ್ ಸೋಡಾ ಬೆಳಗೊಳದಲ್ಲಿರುವ ಕಾರ್ಖಾನೆಯಲ್ಲಿ ತಯಾರಾಗುತ್ತದೆ. ಹೈಡ್ರೋಕ್ಲೋರಿಕ್ ಸಲ್ಫ್ಯೂರಿಕ್ ಆಸಿಡ್ ಫರ್ಟಿಲೈಜರ್ಸ್‌ಗೆ ಬೇಕಾಗಿರುವುದರಿಂದ ಅದನ್ನು ತಯಾರು ಮಾಡುವುದಕ್ಕೆ ಈಗ

(ಶ್ರೀ ಎಚ್. ಬಿ. ಜ್ವಾಲನಯ್ಯ)

ಅಲ್ಲಿ ವ್ಯವಸ್ಥೆ ಮಾಡಿದ್ದಾರೆ. ಅಲ್ಲಿನ ಸಿಬ್ಬಂದಿವರ್ಗವೇನಿದೆ ಅವರು ತಮ್ಮ ಅನುಭವದಿಂದಲೇ ದೊಡ್ಡ ದೊಡ್ಡ ಪ್ಲಾಂಟ್‌ಗಳನ್ನು ರಚಿಸುತ್ತಾ ಇದ್ದರೂ ಆ ಕಾರ್ಖಾನೆ ಕಣ್ಣಿಗೆ ಕಾಣದ ರೀತಿಯಲ್ಲಿ ಹಿಂದುಳಿದಿದೆಯೆಂದು ಹೇಳಿದರೆ ಅದು ತಪ್ಪಾಗಲಾರದು. ಕೈಗಾರಿಕೆ ನೀತಿಯ ಬಗ್ಗೆ ಹೀಗೆ ಮೈಸೂರು ಸರ್ಕಾರ ನಡೆಯುತ್ತಿದೆಯೆಂದು ನನಗೆ ಖೇದ ಉಂಟಾಗುತ್ತಿದೆ. ಇನ್ನು ಈಗ ಮೆಟಲರ್ಜಿಕಲ್ ಇಂಡಸ್ಟ್ರಿ ಹೋಗಿ ಅಲ್ಯೂಮಿನಿಯಂ ಇಂಡಸ್ಟ್ರಿ ಬಂದಿದೆ. ಕಬ್ಬಿಣದ ಯುಗ ಹೋಯಿತು. ಅಲ್ಯೂಮಿನಿಯಂ ಯುಗ ಮತ್ತು ಪ್ಲಾಸ್ಟಿಕ್ ಯುಗ ಈಗ ಬಂದಿದೆ. ಅಲ್ಯೂಮಿನಿಯಂ ವೈರ್, ರಾಡ್ಸ್ ಮತ್ತು ಷೀಟ್ಸನ್ನು ಉತ್ತಮ ರೀತಿಯಲ್ಲಿ ತಯಾರು ಮಾಡುವುದಕ್ಕೆ ಸೌಕರ್ಯಗಳು ಮೈಸೂರು ಸಂಸ್ಥಾನದ ಬೆಳಗಾಂನಲ್ಲಿ ಬೇಕಾದಷ್ಟು ಇದೆಯೆಂದು ತಿಳಿದು ಬಂದಿದೆ. ಅದನ್ನು ಕೂಡಲೇ ಅಲ್ಲಿ ಮಾಡಬೇಕೆಂದು ನಾನು ಸೂಚಿಸಬಯಸುತ್ತೇನೆ. ಅದರ ಜೊತೆಗೆ ಸರ್ಕಾರದವರು ಇಷ್ಟು ಕೋಟ್ಯಾಂತರ ರೂಪಾಯಿಗಳನ್ನು ಕೈಗಾರಿಕೆಗಳ ಮೇಲೆ ಹಾಕಿ ನಷ್ಟ ಮಾಡುವುದಕ್ಕೆ ಬದಲಾಗಿ ರೆವಿನ್ಯೂ ಬರುವಂಥ ಕೈಗಾರಿಕೆ ಅಂದರೆ, ಕಾಳೀ ನದಿ ಪ್ರಾಜೆಕ್ಟ್‌ಗೆ ಹಾಕಿದರೆ ಒಳ್ಳೆಯದು. ಶರಾವತಿ ಪ್ರಾಜೆಕ್ಟ್‌ನಿಂದ 8ಕೋಟಿ ರೂಪಾಯಿಗಳಷ್ಟು ಪವರ್ ಸೇಲ್ ಮಾಡಿದ್ದರಿಂದ ಬಂದಿದೆ. ಇನ್ನೂ ಹೆಚ್ಚು ಪವರ್ ಉತ್ಪಾದನೆಮಾಡುವುದಕ್ಕೆ ಅವಕಾಶವಿದೆ. ಕಾಳೀನದಿ ಪ್ರಾಜೆಕ್ಟ್‌ನ್ನು ಇಂಡಸ್ಟ್ರಿಯಲ್ ಬೇಸಿಸ್ ಮೇಲೆ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. ಅದನ್ನು ಮಾಡುತ್ತಾ ಹೋದರ, ಬಹುಮುಖ್ಯವಾಗಿ ವಿದ್ಯುಚ್ಛಕ್ತಿಯನ್ನು ಹೆಚ್ಚಿನ ರೀತಿಯಲ್ಲಿ ಪಡೆಯುವುದಕ್ಕೆ ಯಾವುದೇ ಸಂಶಯವಿಲ್ಲವೆಂದು ನಾನು ಹೇಳುತ್ತೇನೆ.

ಇದರ ಜೊತೆಗೆ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ Development of small scale industries under the Constitution is the State's responsibility. ಇದು ರಾಜ್ಯಾಂಗದಲ್ಲಿ ಹೇಳಲ್ಪಟ್ಟಿದೆ, ಆದರೆ ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ, ಮೈಸೂರು ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳ ಬಗ್ಗೆ ಯಾವ ರೀತಿಯಲ್ಲೂ ಸರಿಯಾದಂತಹ ವ್ಯವಸ್ಥೆ ಮಾಡಿಲ್ಲವೆಂದು ಹೇಳಿದರೆ ತಪ್ಪಾಗಲಾರದು. ಬೆಂಗಳೂರು, ಬೆಳಗಾಂ, ಹುಬ್ಬಳ್ಳಿ, ದಾವಣಗೆರೆ ಮತ್ತು ಮಂಗಳೂರು ಪ್ರದೇಶಗಳಲ್ಲಿ ಬೆಳೆದಿರತಕ್ಕಂತಹ ಕೈಗಾರಿಕೆಗಳು, ಅವು ಸರ್ಕಾರದ ಸಹಾಯದಿಂದ ಬೆಳೆದಿಲ್ಲ, ಅದು ಸಾರ್ವಜನಿಕರ ಶ್ರಮದಿಂದ ಬೆಳೆದುದು. ನಮ್ಮ ಕೈಗಾರಿಕೆಯ ಉಪಮಂತ್ರಿಯವರು ಪಂಜಾಬಿಗೆ ಹೋಗಿ ಬಂದಿದ್ದಾರೆ. ಅಲ್ಲಿ ಯಾವ ರೀತಿ ಕೈಗಾರಿಕೆಗಳು ಬೆಳೆದಿದೆ ಎಂಬುದನ್ನು ನೋಡಿದ್ದಾರೆ. ಆದರೆ ಅದೇ ರೀತಿ ಮೈಸೂರಿನಲ್ಲಿಯೂ ಇಲ್ಲಿಯವರೆಗೆ ಸಾಕಷ್ಟು ಸಹಾಯವನ್ನು ಕೊಟ್ಟಿಲ್ಲ. ಈಗಿರುವಂತಹ ಕ್ರೆಡಿಟ್ ಫೆಸಿಲಿಟಿ ವ್ಯವಸ್ಥೆ ಏನಿದೆ ಅದು ಸಾಕಷ್ಟು ಇಲ್ಲ. ಈಗ ಫೈನಾನ್ಸಿಯಲ್ ಕಾರ್ಪೊರೇಶನ್, ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಕಾರ್ಪೊರೇಶನ್ ಮತ್ತು ಸ್ಟೇಟ್ ಏಯಿಡ್ ಟು ಇಂಡಸ್ಟ್ರೀಸ್, ಇದರ ಮೂಲಕ ಹಣಸಹಾಯ ಕೊಡುತ್ತಿದ್ದಾರೆ ಮತ್ತು ಕೋ-ಆಪರೇಟಿವ್ ಸೆಕ್ಟರಿನಲ್ಲಿ ಮೈಸೂರು ಸ್ಟೇಟ್ ಕೋ-ಆಪರೇಟಿವ್ ಬ್ಯಾಂಕ್ ಮುಖಾಂತರ ಕೊಡುತ್ತಿದ್ದಾರೆ. ಈ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಯಲ್ ಕಾರ್ಪರೇಶನ್ ಏನಿದೆ, ಅದಕ್ಕೆ ನಾನಾ ಕೆಲಸಗಳನ್ನು ವಹಿಸಿಕೊಟ್ಟಿದ್ದಾರೆ. ಆದರೆ ಹಣ ಮಾತ್ರ ಸಾಕಷ್ಟು ಇಲ್ಲ. ಅದೇ ರೀತಿ ಸ್ಟೇಟ್ ಎಯಿಡ್ ಟು ಇಂಡಸ್ಟ್ರೀಸ್. ಈ ರೀತಿ ನೀವು ಒದಗಿಸಿರುವಂತಹ ಹಣ ಯಾವುದಕ್ಕೂ ಸಾಲದಾಗಿದೆ. ಎರಡು ಸಾವಿರ ರೂಪಾಯಿ, 10 ಸಾವಿರ ರೂಪಾಯಿ ಮಂಜೂರು ಮಾಡತಕ್ಕ ಅಧಿಕಾರ ಸಂಬಂಧಪಟ್ಟ ಅಧಿಕಾರಿಗಳಿಗೆ ಕೊಟ್ಟಿದ್ದೀರಿ. ಒಂದು ಯಂತ್ರವನ್ನು ಕೊಂಡುಕೊಳ್ಳಬೇಕಾದರೆ, ಒಂದು ಕಟ್ಟಡವನ್ನು ಕಟ್ಟಬೇಕಾದರೆ, ಅದು ಎಲ್ಲಿ ಸಾಕಾಗುತ್ತದೆ? ನೀವು ಅಸಿಸ್ಟೆಂಟ್ ಡೈರೆಕ್ಟರ್ ಮುಖಾಂತರ ಎರಡು ಸಾವಿರ ರೂಪಾಯಿ ಕೊಡುತ್ತೀರಿ ಅದು ಏನೂ ಸಾಲದು. ಅದನ್ನು ಹೆಚ್ಚು ಮಾಡಬೇಕು. ಡೈರೆಕ್ಟರ್ ಆಫ್ ಇಂಡಸ್ಟ್ರೀಸ್‌ಗೆ ಹಣ ಮಂಜೂರು ಮಾಡತಕ್ಕ ಪರಿಮಿತಿ 50 ಸಾವಿರ ರೂಪಾಯಿ ಮಾಡಬೇಕು, ಜಾಯಿಂಟ್ ಡೈರೆಕ್ಟರ್ ಆಫ್ ಇಂಡಸ್ಟ್ರೀಗೆ 25 ಸಾವಿರ ರೂಪಾಯಿ ಮಾಡಬೇಕು, ಮತ್ತು ಅಸಿಸ್ಟೆಂಟ್ ಡೈರೆಕ್ಟರ್ ಆಫ್ ಇಂಡಸ್ಟ್ರೀಸ್‌ಗೆ 5 ಸಾವಿರ ರೂಪಾಯಿ ಮಾಡಬೇಕು. ಇಷ್ಟನ್ನು ಕೊಡದಿದ್ದರೆ, ಸ್ಟೇಟ್ ಎಯಿಡ್ ಟು ಇಂಡಸ್ಟ್ರೀಸ್‌ಗೆ ಯಾವ ರೀತಿಯಲ್ಲೂ ಸಹಾಯವಾಗಲಾರದು ಎಂದು ನನ್ನ ಅಭಿಪ್ರಾಯ. ಈ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಕಾರ್ಪೊರೇಶನ್ ಏನಿದೆ, ಅದಕ್ಕೆ ಸಾಕಷ್ಟು ಹಣವನ್ನು ಕೊಟ್ಟಿಲ್ಲ. ಇದರ ಜೊತೆಗೆ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್‌ಗೆ ಮಾರ್ಕೆಟಿಂಗ್ ಸಮಸ್ಯೆ. ಸೆಂಟ್ರಲ್ ಸರ್ಕಾರದ ರೈಲ್ವೇಸ್ 200 ಕೋಟಿ ರೂಪಾಯಿಗಳಷ್ಟು ಸಾಮಾನು ಗಳನ್ನು ಸಣ್ಣ ಕೈಗಾರಿಕೆಗಳಿಂದ ಕೊಂಡುಕೊಳ್ಳುವುದಕ್ಕೆ ಅವಕಾಶ ಇದೆ. ಅದೇ ರೀತಿ

ರಾಜ್ಯದಲ್ಲೂ ಸುಮಾರು 10 ಕೋಟಿ ರೂಪಾಯಿಗಳಷ್ಟು ಸಾಮಗ್ರಿಗಳನ್ನು ಕೊಂಡುಕೊಳ್ಳುವುದಕ್ಕೆ, ರಿಸರ್ವ್ ಮಾಡುವುದಕ್ಕೆ ಅವಕಾಶ ಇದೆ. ಇವತ್ತು ಈ ಸ್ಟೋರ್ಸ್ ಪರ್ಚೇಸ್ ಕಮಿಟಿ ಏನಿದೆ, ಅದನ್ನು ತೆಗೆದು, ಅದರ ಕೆಲಸಕಾರ್ಯಗಳನ್ನು ಜಾಯಿಂಟ್ ಡೈರೆಕ್ಟರ್ ಆಫ್ ಇಂಡಸ್ಟ್ರೀಸ್, ಇವರಿಗೆ ವಹಿಸಿಕೊಡಬೇಕು. ಇವತ್ತು ಸಣ್ಣ ಕೈಗಾರಿಕೆಗಳು ಉದ್ಧಾರವಾಗಬೇಕಾದರೆ, ಈ ಸ್ಟೋರ್ಸ್ ಪರ್ಚೇಸ್ ಕಮಿಟಿಯನ್ನು ತೆಗೆಯಬೇಕು. ಅಲ್ಲಿ ನಾನಾ ರೀತಿಯ ಅವ್ಯವಹಾರಗಳು ನಡೆಯುತ್ತಿವೆ. ಎಲ್ಲಿಯವರೆಗೆ ಇದನ್ನು ತೆಗೆದುಹಾಕುವುದಿಲ್ಲವೋ ಅಲ್ಲಿಯವರೆಗೆ ಈ ಸಣ್ಣ ಕೈಗಾರಿಕೆಗಳು ಯಾವ ರೀತಿಯಲ್ಲೂ ಉದ್ಧಾರವಾಗುವುದಿಲ್ಲ. ಇನ್ನು ಮೈಸೂರು ಸ್ಟೇಟ್ ಇಂಡಸ್ಟ್ರೀಯಲ್ ಕೋ-ಆಪರೇಟಿವ್ ಬ್ಯಾಂಕ್ ಕಳೆದ ಸಲ ಸ್ವಲ್ಪ ಹಣ ಕೊಟ್ಟಿದ್ದಾರೆ. ಈ ಸಲ ಏನೂಕೊಟ್ಟಿಲ್ಲ. ಇವರು 3 ಟೈಯರ್ ಇಂಟ್ರಡ್ಯೂಸ್ ಮಾಡಬೇಕೆಂದು ಹೇಳುತ್ತಿದ್ದಾರೆ. ತಾಲ್ಲೂಕುಗಳಲ್ಲಿ ಕೋ-ಆಪರೇಟಿವ್ ಸೊಸೈಟಿ ಬಲಪಡಿಸಬೇಕೆಂದು ಹೇಳುತ್ತಿದ್ದಾರೆ. ಇದನ್ನು ಬಲಪಡಿಸಬೇಕಾದರೆ ಬರೇ ಎರಡು ಲಕ್ಷ ರೂಪಾಯಿ ಒಂದು ಸೊಸೈಟಿಗೆ ಬೇಕಾಗುತ್ತದೆ. ಅದರ ಪ್ರಕಾರ ಒಟ್ಟು ಎರಡು ಕೋಟಿ ಬೇಕಾಗುತ್ತದೆ. ಇದರಲ್ಲಿ ನಿಜವಾಗಿಯೂ ನಿಮಗೆ ಆಸಕ್ತಿ ಇದ್ದರೆ, ಅದಕ್ಕೆ ಹಣ ಕೊಡಿ. ಇದರ ಜೊತೆಗೆ ಇಂಡಸ್ಟ್ರಿಯಲ್ ಕೋ-ಆಪರೇಟಿವ್ ಸೊಸೈಟೀಸ್ ಇದು ಒಂದು ರೀತಿಯ ತಾಂತ್ರಿಕ ಸೊಸೈಟಿಗಳು. ಈಗ ಇರುವಂತಹ ಕೋ-ಆಪರೇಟಿವ್ ಇಲಾಖೆಯಲ್ಲಿನ ಅಧಿಕಾರಿಗಳಿಗೆ ಕೈಗಾರಿಕೆಯ ಬಗ್ಗೆ ಏನೂ ಗೊತ್ತಿಲ್ಲ. ಆದ್ದರಿಂದ ಅದು ನೇರವಾಗಿ ಡೈರೆಕ್ಟರ್ ಆಫ್ ಇಂಡಸ್ಟ್ರೀಸ್ ಅಂಡ್ ಕಾಮರ್ಸ್, ಆ ಇಲಾಖೆಗೆ ಬರಬೇಕು. ನಾವು ಅನೇಕ ಇಂಡಸ್ಟ್ರಿಯಲ್ ಕೋ-ಆಪರೇಟಿವ್ ಸೊಸೈಟಿಗಳನ್ನು ನೋಡಿದ್ದೇವೆ. ಅದರಲ್ಲಿ ಕೋ-ಆಪರೇಟಿವ್ ಇಲಾಖೆಯ ಅಧಿಕಾರಿಗಳು, ಕೈಗಾರಿಕೆಯನ್ನು ಅಭಿವೃದ್ಧಿ ಮಾಡಬೇಕೆಂಬ ಒಂದು ಉದ್ದೇಶದಿಂದ ಮಾಡುತ್ತಾ ಇಲ್ಲ. ಕೋ-ಆಪರೇಟಿವ್ ಡಿಪಾರ್ಟ್‌ಮೆಂಟ್ ಈಸ್ ದಿ ವೋರ್ಸ್ಟ್ ನಾನ್ ಕೋ-ಆಪರೇಟಿವ್ ಡಿಪಾರ್ಟ್‌ಮೆಂಟ್ ಆಗಿದೆ. ಕೈಗಾರಿಕೆಯ ಬಗ್ಗೆ ಯಾವ ರೀತಿಯಲ್ಲೂ ಒಳ್ಳೆಯ ಮಾರ್ಗವನ್ನು ಅವರು ಅನುಸರಿಸುತ್ತಾ ಇಲ್ಲ. ಇವತ್ತು ಯಾವ ಕೈಗಾರಿಕೆಗಳಿಂದ ಸರ್ಕಾರಕ್ಕೆ ನಷ್ಟವಾಗುತ್ತಿದೆ, ಅದರಲ್ಲಿ ಹಾಕಿದ ಬಂಡವಾಳ ಹಿಂದಿರುಗಿ ಬರುವುದಾದರೆ, ಯಾರು ಅದನ್ನು ಕೊಳ್ಳಲು ಮುಂದು ಬರುತ್ತಾರೆ, ಅವರಿಗೆ ಕೊಟ್ಟುಬಿಡಿ. ಮತ್ತು ಅಂಥ ದುಡ್ಡನ್ನು ಕಾಳೀ ನದಿಯಂತಾದ ಯೋಜನೆಗಳಿಗೆ ಉಪಯೋಗಿಸಬೇಕು. ಅದೇ ರೀತಿ ಇಂಡಸ್ಟ್ರೀಸ್ ಅಂಡ್ ಕಾಮರ್ಸ್ ಇಲಾಖೆಯಲ್ಲಿರುವ ಸ್ಟಾಫ್ ಪ್ಯಾಟರ್ನ್ ಸರಿಯಾದ ರೀತಿಯಲ್ಲಿಲ್ಲ. ಏಕೆಂದರೆ, ಆ ಇಲಾಖೆ ಒಳ್ಳೆಯ ತಜ್ಞರಿಂದ ನಡೆಸಲ್ಪಡಬೇಕಾದ ಇಲಾಖೆ. ಮದ್ರಾಸಿನಲ್ಲಿಯೂ ಅದೇ ರೀತಿ ಇದೆ. ಅಲ್ಲಿ ಜಾಯಿಂಟ್ ಡೈರೆಕ್ಟರ್, ಡೈರೆಕ್ಟರ್ ಮತ್ತು ಅಸಿಸ್ಟೆಂಟ್ ಡೈರೆಕ್ಟರ್ ಎಲ್ಲಾ ಕ್ವಾಲಿಫೈಡ್ ಆಗಿರಲೇಬೇಕು. ಇವತ್ತು ಇಲ್ಲಿ ರೆವೆನ್ಯೂ ಇಲಾಖೆಯಿಂದ ಅಧಿಕಾರಿಗಳನ್ನು ತಂದು ಅಲ್ಲಿ ಹಾಕುತ್ತಿದ್ದಾರೆ. ಅದು ಸರಿಯಲ್ಲ. ಆದ್ದರಿಂದ ಆ ಇಲಾಖೆಯ ಅಧಿಕಾರಿವರ್ಗವು ತಜ್ಞರಿಂದ ಕೂಡಿರಬೇಕು. ಆಗ ಮಾತ್ರ ನಮ್ಮ ಕೈಗಾರಿಕೆಗಳಲ್ಲಿ ಪ್ರಗತಿಯಾಗುತ್ತದೆ. ಈ ಮೇಲ್ಕಂಡ ಕಾರಣಗಳಿಂದ ನಾನು ಈ ಡಿಮ್ಯಾಂಡನ್ನು ಒಪ್ಪುವುದಕ್ಕಾಗುವುದಿಲ್ಲ; ವಿರೋಧ ಮಾಡುತ್ತೇನೆ. ಇಷ್ಟು ಹೇಳಿ ಮಾತನಾಡಲು ಅವಕಾಶ ಕೊಟ್ಟಂತಹ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಡಿ. ಎಂ. ಸಿದ್ದಯ್ಯ (ಬಳಿಗೆರೆ).—ಮಾನ್ಯ ಅಧ್ಯಕ್ಷರೇ, ಕೈಗಾರಿಕಾ ಸಚಿವರು ಮಂಡಿಸಿರತಕ್ಕ ಬೇಡಿಕೆಗಳನ್ನು ನಾನು ಸಂಪೂರ್ಣವಾಗಿ ಬೆಂಬಲಿಸುತ್ತಾ ನಾಲ್ಕು ಮಾತುಗಳನ್ನು ಹೇಳಬಯಸುತ್ತೇನೆ. ಇಂಡಿಯಾ ದೇಶದಲ್ಲಿ ನಮ್ಮ ಮೈಸೂರು ರಾಜ್ಯವು ಒಂದಾನೊಂದು ಕಾಲದಲ್ಲಿ ಕೈಗಾರಿಕೆಯಲ್ಲಿ ಬಹಳ ಕೀರ್ತಿ ಪಡೆದಂತಹ ರಾಜ್ಯವಾಗಿತ್ತು. ಇಲ್ಲಿ ಸರ್ ಎಂ. ವಿಶ್ವೇಶ್ವರಯ್ಯನವರ ಹೆಸರನ್ನು ನಾವು ಸ್ಮರಿಸಿಕೊಳ್ಳಬಹುದು. ಬಹುಶಃ ಮೈಸೂರು ರಾಜ್ಯ ಮಾದರಿ ರಾಜ್ಯವೆಂದು ಎನಿಸಿಕೊಳ್ಳಬೇಕಾದರೆ, ಅವರು ಹಾಕಿದಂತಹ ಯೋಜನೆಗಳು ಮತ್ತು ಅವರ ನಿಸ್ಪೃಹತೆಯಿಂದ, ದೇಶಾಭಿಮಾನದಿಂದ ಮಾಡಿದ ಕೆಲಸ ಮತ್ತು ಅವರ ಮುಂದೆ ಬಂದಂತಹ ಸರ್ ಮಿರ್ಜಾರವರು ಅವರ ಸ್ಕೀಂಮುಗಳನ್ನು ಅನುಷ್ಠಾನಕ್ಕೆ ತಂದು ಮೈಸೂರು ಪ್ರಪಂಚದಲ್ಲೇ ಅತಿ ಶ್ರೇಷ್ಠವಾದ ರಾಜ್ಯವೆಂಬ ಕೀರ್ತಿಯನ್ನು ತಂದರು. ಆದರೆ ಸ್ವಾತಂತ್ರ್ಯ ಬಂದಮೇಲೆ 1948ನೇ ಇಸವಿಯಲ್ಲಿ ನೆಹರೂರವರು ಪ್ರಧಾನಿಯಾಗಿದ್ದಾಗ, ದೇಶದಲ್ಲಿ ಕೈಗಾರಿಕೆಯನ್ನು ಯಾವ ರೀತಿಯಲ್ಲಿ ನಡೆಸಬೇಕು, ನಮ್ಮ ದೇಶಕ್ಕನುಗುಣವಾಗಿ ನಾವು ನಮ್ಮ ಕೈಗಾರಿಕೆಗಳನ್ನು ನಡೆಸಿ, ದೇಶವನ್ನು ಸಂಪತ್‌ಭರಿತವಾದ ರಾಷ್ಟ್ರವನ್ನಾಗಿ ಮಾಡಬೇಕಾದರೆ, ಕೈಗಾರಿಕೆಗಳು ಪಬ್ಲಿಕ್ ಸೆಕ್ಟರಿನಲ್ಲಿ ನಡೆಯಬೇಕೆಂಬುದನ್ನು ಹೇಳಿ ಬಹಳ ಪ್ರಾಮುಖ್ಯವಾದಂಥ ತೀರ್ಮಾನವನ್ನು ತೆಗೆದುಕೊಂಡರು. ಅದರಿಂದ ಕಳೆದ 20 ವರ್ಷಗಳಿಂದ ನಾವು ಎಷ್ಟು ಮಟ್ಟಿಗೆ ಪ್ರಗತಿಯನ್ನು ಸಾಧಿಸಿದ್ದೇವೆ ಎನ್ನತಕ್ಕಂತದ್ದು ಬಹಳ ಮುಖ್ಯವಾದ ವಿಚಾರ. ನಮ್ಮ ರಾಜ್ಯಕ್ಕೆ ಅನ್ವಯಿಸುವ ಹಾಗೆ ನಮ್ಮ

(ಶ್ರೀ ಡಿ. ಎಂ. ಸಿದ್ದಯ್ಯ)

ರಾಜ್ಯದ ಹಣಕಾಸಿನ ಸಚಿವರು ಕೊಟ್ಟರತಕ್ಕಂತಹ ಅವರ ಭಾಷಣದಲ್ಲಿ, ನಾವು ನಮ್ಮ ಹಣವನ್ನು ಕೈಗಾರಿಕೆಗಳಲ್ಲಿ ಹಾಕಿದ್ದೇವೆ, ಆದರೆ ನಮಗೆ ಸಾಕಾದಷ್ಟು ಲಾಭ ಬರುತ್ತಾ ಇಲ್ಲ, ಅದರ ದೆಸೆಯಿಂದ ನಮ್ಮ ಧೋರಣೆಯನ್ನು ಏಕೆ ಬದಲಾಯಿಸಬಾರದು ಎಂಬ ಮಾತನ್ನು ಅವರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ.

"An important factor that would arise for consideration is whether Government should go on supporting public sector undertakings indefinitely even at the cost of other sectors of the economy. It is seen that huge investments are locked up in the public sector undertakings in the country. Out of a total investment of about Rs. 2,841 crores at the end of 1966-67 nearly 40 per cent was attributed to Steel Industry. While a few have earned profits, others have accumulated heavy losses for various reasons. Apart from loans, small savings and taxation, one of the major resources for financing development programmes in the country is contribution from public enterprises by way of reserves, depreciation, profits, etc. The working of public sector undertakings have come in for severe criticisms both on public platforms and Houses of Legislature. While monopoly in Private Sector has to be depreciated it should be our policy, in the best interest of rapid economic growth, to allow both Private and Public Sectors to function side by side.

In our own State the Government investment in industrial undertakings is very heavy as compared to other States. I feel that a time has come to review our policy in this regard and decide whether in view of the top-most priority given to irrigation and agricultural development the limited resources of the Government should not be exclusively earmarkad in favour of irrigation projects and leave the industrial development to private enterprise as done in Madras and other States. The Government has to act as a catalytic agent of economic development. Since the last two years Government have taken series of steps to improve the working of public sector undertakings in the State. If it is found that any undertaking cannot be made to run on profit, Government will not hesitate to come to some arrangement with private entrepreneurs in the interest of industry and public finances. I am glad that the Legislature will have a separate committee on public undertakings, which I hope, will give timely advice for getting over lapses and make them function efficiently."

3-30 P.M.

ಈ ಎರಡು ಪ್ಯಾರಗಳಲ್ಲಿ ಮಾನ್ಯ ಹಣಕಾಸಿನ ಸಚಿವರು ಹೇಳಿರತಕ್ಕ ಮಾತುಗಳನ್ನು ಸ್ವಲ್ಪ ಸೂಕ್ಷ್ಮವಾಗಿ ಅವಲೋಕಿಸಿದರೆ ನಮ್ಮ ಸರ್ಕಾರದವರು ನಮ್ಮ ಮೂಲ ಉದ್ದೇಶಕ್ಕೆ ವಿರೋಧವಾದಂತಹ ರೀತಿಯಲ್ಲಿ ಕೈಗಾರಿಕಾ ನೀತಿಯನ್ನು ಬದಲಾಯಿಸಿಕೊಂಡು ಹೋಗಬೇಕಾದಂತಹ

ತೀರ್ಮಾನ ಮಾಡಿರುವುದನ್ನು ಇದರಲ್ಲಿ ಸ್ಪಷ್ಟವಾಗಿ ಸೂಚಿಸಿದ್ದಾರೆ. ಮುಖ್ಯವಾಗಿ ನಮ್ಮ ರಾಜ್ಯದಲ್ಲಿ ನಾವು ಪ್ರಜಾಪ್ರಭುತ್ವವನ್ನು ಪಡೆದ ಮೇಲೆ ನಮ್ಮ ಮುಂದಿನ ಧ್ಯೇಯವಾದರೂ ಕೂಡ ಡೆಮಾಕ್ರಸಿ ಆಫ್ ಸೋಷಿಯಾಲಿಜಮನ್ನು ಸಾಮಾನ್ಯವಾಗಿ ದೇಶದಲ್ಲಿ ಜಾರಿಗೆ ತರಬೇಕು ಎನ್ನುವ ಒಂದು ಸಿದ್ಧಾಂತವನ್ನು ಮಾಡಿಕೊಂಡು ಅದರಂತೆ ನಮ್ಮ ದೇಶದಲ್ಲಿರತಕ್ಕ ಸಂಪನ್ಮೂಲಗಳನ್ನು ಉಪಯೋಗಿಸಿಕೊಂಡು ಈ ದೇಶವನ್ನು ಸಕಲ ದೃಷ್ಟಿಯಿಂದಲೂ ಅಭಿವೃದ್ಧಿ ಮಾಡುವುದಕ್ಕೆ ನಾವು ಹೊರಟ್ಟಿದ್ದೇವೆ. ಈ ಹೊತ್ತಿನ ದಿವಸ ಪಬ್ಲಿಕ್ ಸೆಕ್ಟಾರ್ ಕೈಗಾರಿಕೆಗಳು ನಮಗೆ ಲಾಭದಾಯಕವಲ್ಲ ಎನ್ನುವ ಒಂದು ಕಾರಣದಿಂದ, ಕೈಗಾರಿಕೆಗಳನ್ನು ನಡೆಸುವುದು ಕಷ್ಟವಾಗಿದೆ ಎನ್ನುವ ನೆಪದಿಂದ ಇದನ್ನು ನಾವು ಪ್ರೈವೇಟ್ ಏಜೆನ್ಸಿಗಳಿಗೆ ಕೊಡುವುದಾದರೆ ನಮ್ಮ ದೇಶದ ಸ್ಥಿತಿ ಏನಾಗುತ್ತದೆಯೋ ಎಂದು ನನಗೆ ಭಯವಾಗುತ್ತದೆ. ಈಗಾಗಲೇ ಈ ಕೈಗಾರಿಕೆಯ ವಿಷಯದಲ್ಲಿ ಪಾರ್ಲಿಮೆಂಟಿನಲ್ಲಿ ಚರ್ಚೆಯಾದಂಥಾದ್ದು ತಮ್ಮೆಲ್ಲರ ಗಮನಕ್ಕೂ ಬಂದಿರಬಹುದು ಎಂದು ಕಾಣುತ್ತದೆ. ಕೈಗಾರಿಕೋದ್ಯಮಿಗಳಾದ ಬಿರ್ಲಾ ಅವರ ಬಗ್ಗೆ ಕೆಲವೊಂದು ಆಪಾದನೆಗಳನ್ನು ಮಾಡಿದ್ದಾರೆ. ಇಡೀ ದೇಶದ ವ್ಯಾಪಾರ ಮತ್ತು ಕೈಗಾರಿಕೋದ್ಯಮಗಳಿಂದ ಬಿರ್ಲಾ ಅವರ ನಿವ್ವಳ ಬಂಡವಾಳ 150—200 ಕೋಟಿ ರೂಪಾಯಿಗಳು ಇದ್ದದ್ದು ದ್ವಿಗುಣವಾಗಿ ಇವೊತ್ತಿನ ದಿವಸ ಸಾರ್ವಜನಿಕ ಕ್ಷೇತ್ರದಲ್ಲಿ ಯಾವ ಕೈಗಾರಿಕೆಯು ಬೆಳೆಯುವುದಕ್ಕೆ ಅವಕಾಶವಿಲ್ಲದಂತೆ ಆಗಿದೆ. ಮೊನ್ನೆ ತಾನೆ ಕೇಂದ್ರ ಸರ್ಕಾರದ ಕೈಗಾರಿಕಾ ಸಚಿವರು ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ ಕೈಗಾರಿಗೆ ಸಂಬಂಧಪಟ್ಟ ಹಾಗೆ ತಮ್ಮ ತತ್ವಗಳನ್ನು ನಿರೂಪಣೆ ಮಾಡತಕ್ಕ ವಿಷಯದಲ್ಲಿ ಚರ್ಚೆ ಮಾಡಿ ಅದಕ್ಕೆ ಒಂದು ಕ್ಯಾಬಿನೆಟ್ ಸಬ್ ಕಮಿಟಿ ಮಾಡಿ ಈ ಕೈಗಾರಿಕಾ ಪಾಲಿಸಿಯ ಮೂಲ ಉದ್ದೇಶವನ್ನು ಬದಲಾವಣೆ ಮಾಡತಕ್ಕ ಕಾರ್ಯದಲ್ಲಿ ತೊಡಗಿದ್ದಾರೆ ಎನ್ನುವ ಮಾತನ್ನು ನಾನು ಮಾನ್ಯ ಮಂತ್ರಿಗಳ ಗಮನಕ್ಕೆ ತರುವುದಕ್ಕೆ ಇಚ್ಛಿಸುತ್ತೇನೆ. ಇವೊತ್ತಿನ ದಿವಸ ಕೇಂದ್ರ ಸರ್ಕಾರದ ಹಣಕಾಸಿನ ಸಚಿವರು ತಮ್ಮ ಭಾಷಣ ಮಾಡತಕ್ಕ ಕಾಲದಲ್ಲಿ ಹಣಕಾಸಿನ ಪತ್ರಿಕೆಯ ಜೊತೆಗೆ ಒಂದು ಮೇಮೋರಾಂಡಮ್ ಕೂಡ ಪಾರ್ಲಿಮೆಂಟಿನಲ್ಲಿ ಮಂಡಿಸಿದ್ದಾರೆ. ಆ ಮೆಮೋರಾಂಡಂನಲ್ಲಿ ಸಾರ್ವಜನಿಕ ಕ್ಷೇತ್ರದ ಕೈಗಾರಿಕಾ ವಿಚಾರವನ್ನು ಅವರು ಸವಿಸ್ತಾರವಾಗಿ ವಿವರಿಸಿ ನಮ್ಮ ದೇಶದಲ್ಲಿರತಕ್ಕ 70—80 ದೊಡ್ಡ ಕೈಗಾರಿಕೆಗಳಲ್ಲಿ ಸುಮಾರು 3,200 ಕೋಟಿ ರೂಪಾಯಿಗಳ ಬಂಡವಾಳ ಸಾರ್ವಜನಿಕ ಕ್ಷೇತ್ರದಲ್ಲಿ ಇವೆ, ಅವುಗಳಲ್ಲಿ ಸುಮಾರು 31 ಕೈಗಾರಿಕೆಗಳಲ್ಲಿ 45 ಕೋಟಿ ರೂಪಾಯಿಗಳು ಲಾಭಬಂದಿದೆ, 24 ಕೈಗಾರಿಕೆಗಳಲ್ಲಿ 83 ಕೋಟಿ ರೂಪಾಯಿಗಳು ನಷ್ಟವಾಗಿದೆ, ಎಲ್ಲವನ್ನೂ ಒಟ್ಟಿಗೆ ಸೇರಿಸಿದರೆ 35 ಕೋಟಿ ರೂಪಾಯಿಗಳು ನಷ್ಟವಾಗಿದೆ ಎನ್ನುವ ಮಾತನ್ನು ಹೇಳಿದ್ದಾರೆ. ಈ ರೀತಿ ನಷ್ಟ ಆಗಬೇಕಾದರೆ ಕಾರಣ ಏನು ಎನ್ನತಕ್ಕಂಥಾದ್ದನ್ನು ಮೇಮೋರಾಂಡಂನಲ್ಲಿ ಪ್ರಸ್ತಾಪ ಮಾಡಿದ್ದಾರೆ. ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳು ಸರಿಯಾಗಿ ನಡೆಯುತ್ತಾ ಇಲ್ಲ. ಪ್ರೈವೇಟ್ ಕೈಗಾರಿಕೆಗಳವರು ಯಾವರೀತಿ ಅಕೌಂಟ್ಸ್ ಮೇನ್‌ಟೇನ್ ಮಾಡುತ್ತಾರೆಯೋ, ಯಾವರೀತಿ ಅಕೌಂಟ್ಸ್ ಇಟ್ಟುಕೊಳ್ಳುತ್ತಾರೆಯೋ ಆ ರೀತಿ ಸಾರ್ವಜನಿಕ ಕ್ಷೇತ್ರದಲ್ಲಿರತಕ್ಕ ಕೈಗಾರಿಕೆಗಳವರು ಅಕೌಂಟ್ಸ್ ಮೇನ್‌ಟೇನ್ ಮಾಡುತ್ತಾ ಇಲ್ಲ, ಪ್ಲಾನು, ಎಸ್ಟಿಮೇಟುಗಳು ಮತ್ತು ಇತರ ಕೆಲಸಕಾರ್ಯಗಳನ್ನು ನಿಗಾ ತೆಗೆದುಕೊಂಡು ಮಾಡುತ್ತಿಲ್ಲ. ಮ್ಯಾನೇಜ್‌ಮೆಂಟಿನವರೂ ಸಹ ತಮ್ಮ ಕರ್ತವ್ಯವನ್ನು ಸರಿಯಾದ ರೀತಿಯಲ್ಲಿ ನಿರ್ವಹಿಸುತ್ತಿಲ್ಲ ಇತ್ಯಾದಿ ಲೋಪದೋಷಗಳು ಇವೆಯೆಂದೂ, ಇದರಿಂದಾಗಿ ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳು ನಷ್ಟವಾಗುವುದಕ್ಕೆ ಕಾರಣವಾಗಿದೆ ಎಂದು ಮೇಮೋರಾಂಡಂನಲ್ಲಿ ಅಪ್ಪಣೆ ಕೊಡಿಸಿದ್ದಾರೆ. ಇದರ ಜೊತೆಗೆ ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳಲ್ಲಿರತಕ್ಕ ಅಧಿಕಾರಿಗಳು ತಮ್ಮ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸದೇ ಇರುವುದರಿಂದ ಅವರು ತಮ್ಮ ಹುದ್ದೆಗಳಿಗೆ ರಾಜೀನಾಮೆಯನ್ನು ಕೊಡಬೇಕೆಂದು ಹೇಳಿದ್ದಾರೆ. ಇದಲ್ಲದೆ ನಮ್ಮ ಆಲ್ ಇಂಡಿಯಾ ರಿಫಾರಮ್ಸ್ ಕಮಿಟಿಯವರು ಈ ಬಗ್ಗೆ ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಆ ಸಲಹೆಗಳನ್ನು ಕೂಡ ಕೇಂದ್ರ ಸರ್ಕಾರದವರು ಒಪ್ಪಿಕೊಂಡಿದ್ದಾರೆ. ಸಾರ್ವಜನಿಕ ಕ್ಷೇತ್ರದಲ್ಲಿರತಕ್ಕ ಕೈಗಾರಿಕೆಗಳಲ್ಲಿ ನಮಗೆ ಈಗ ನಷ್ಟವಾಗುತ್ತಿದೆ. ಆ ಕೈಗಾರಿಕೆಗಳಿಗೆ ಹೆಚ್ಚು ಬಂಡವಾಳವನ್ನು ಹಾಕಿ ಅವುಗಳಲ್ಲಿ ಸಾಕಷ್ಟು ಉತ್ಪತ್ತಿ ಬಾರದಿದ್ದರೆ ಆ ಕೈಗಾರಿಕೆಗಳನ್ನು ಸರಿಯಾದ ರೀತಿಯಲ್ಲಿ ಕುದುರಿಸಿ ದೇಶದ ಸಂಪನ್ಮೂಲಗಳನ್ನು ಹೆಚ್ಚಿಸದಿದ್ದರೆ ಅದಕ್ಕೆ ಕಾರಣ ನಾವು. ಆ ಕೈಗಾರಿಕೆಗಳ ವಿಷಯದಲ್ಲಿ ಸಾಕಷ್ಟು ನಿಗಾ ತೆಗೆದುಕೊಳ್ಳದೇ ಇರುವುದು, ಸರಿಯಾದಂತಹ ಟೆಕ್ನಿಕಲ್ ಪರ್ಸನ್ಸ್ ಮತ್ತು ಪ್ರಾಮಾಣಿಕರಾದ ಸಿಬ್ಬಂದಿವರ್ಗದವರನ್ನು ಹಾಕದೇ ಇರತಕ್ಕದ್ದು ಆ ಕೈಗಾರಿಕೆಗಳಲ್ಲಿ ನಷ್ಟವಾಗುವುದಕ್ಕೆ ಕಾರಣವಾಗಿದೆ. ಇವೊತ್ತು ಸಾರ್ವಜನಿಕ ಕ್ಷೇತ್ರದಲ್ಲಿ ಕೈಗಾರಿಕೆಯನ್ನು ನಡೆಸತಕ್ಕ ಉದ್ದೇಶ ಏನು ಎಂದರೆ ಅದರಲ್ಲಿ ಬಹಳ ಜನ ಭಾಗವಹಿಸಬೇಕು, ಅಲ್ಲಿ ಬಂದಂಥ ಉತ್ಪತ್ತಿಯನ್ನು ದೇಶದ ಜನಗಳಿಗೆ ಹಂಚಬೇಕು ಎನ್ನುವುದು. ಇವೊತ್ತು ನಾವು ಸಮಾಜವಾದವನ್ನು ಮಾತನಾಡುತ್ತೇವೆ.

(ಶ್ರೀ ಡಿ. ಎಂ. ಸಿದ್ದಯ್ಯ)

ಸಮತಾವಾದ ಸಮಾಜವನ್ನು ಕಟ್ಟುವುದಕ್ಕೆ ನಾವು ಹೊರಟಿದ್ದೇವೆ. ಇವೊತ್ತು ಕೈಗಾರಿಕೆಗಳು ಸರಿಯಾದ ರೀತಿಯಲ್ಲಿ ನಡೆಯದೆ ಇರುವ ಸರಿಯಾದಂತಹ ಸಿಬ್ಬಂದಿಯನ್ನು ನೇಮಿಸಿ ಸರಿಯಾದ ರೀತಿಯಲ್ಲಿ ಕೈಗಾರಿಕೆಗಳನ್ನು ನಡೆಸುವಂಥಾ ಸಾಮರ್ಥ್ಯ ಸರ್ಕಾರಕ್ಕೆ ಇವೆ. ಈ ಸಾರ್ವಜನಿಕ ಕೈಗಾರಿಕೆಗಳಲ್ಲಿ ಆಗತಕ್ಕಂಥ ತಪ್ಪುಗಳನ್ನು ಸರಿಪಡಿಸಿ ಅವುಗಳನ್ನು ಸರಿಯಾಗಿ ನಡೆಸದೆ, ಸಾರ್ವಜನಿಕ ಕ್ಷೇತ್ರದಲ್ಲಿರತಕ್ಕ ಕೈಗಾರಿಕೆಗಳನ್ನು ಪ್ರೈವೇಟ್ ಏಜೆನ್ಸಿಗೆ ಕೊಟ್ಟರೆ ದೇಶದಲ್ಲಿ ಮರಿಬಿರ್ಲಾಗಳು ಉತ್ಪತ್ತಿಯಾಗಿ ಪ್ರಜಾಪ್ರಭುತ್ವ ಕುಂಠಿತವಾಗುತ್ತದೆ ಎಂದು ನಾನು ಕಳಕಳಿಯಿಂದ ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಇವೊತ್ತು ದೇಶದ ಪರಿಸ್ಥಿತಿಯನ್ನು ನೋಡುವುದಾದರೆ ರಾಜರುಗಳು ಕಾಂಗ್ರೆಸ್ ಸಂಸ್ಥೆಯನ್ನು ಸೇರುತ್ತಿದ್ದಾರೆ. ರಾಜಕೀಯಕ್ಕೆ ಇಳಿಯುತ್ತಿದ್ದಾರೆ. ಮತ್ತೊಂದು ಕಡೆ ಬಂಡವಾಳಷಾಹಿಗಳ ಉಪಟಳವಾಗಿದೆ. ಇದರಿಂದಾಗಿ ಪ್ರಜಾಪ್ರಭುತ್ವ ಇಕ್ಕಟ್ಟಿಗೆ ಸಿಕ್ಕಿಕೊಳ್ಳುತ್ತಿದೆ. ಒಂದು ಕಡೆ ರಾಜರುಗಳು ರಾಜಕಾರಿಣಿಗಳಾಗಿ ಬಂದಿರತಕ್ಕದ್ದು, ಮತ್ತೊಂದು ಕಡೆ ಬಂಡವಾಳಷಾಹಿಗಳ ಉಪಟಳ ಈ ಎರಡರ ಮಧ್ಯೆ ರಾಜಕೀಯ ಪಕ್ಷ ಸಿಕ್ಕಿಹಾಕಿಕೊಂಡು ತಳಮಳವಾಗುತ್ತಿದೆ.

ಈ ಒಂದು ಹಿನ್ನೆಲೆಯಲ್ಲಿ ನಾವು ದೇಶದ ಮುಂದಿನ ಭವಿಷ್ಯ ಹಾಗೂ ಪರಿಸ್ಥಿತಿ ಏನಾಗಬಹುದು ಎಂಬುದನ್ನು ದೀರ್ಘವಾಗಿ ಆಲೋಚಿಸಬೇಕಾಗಿದೆ. ನಾವು ಹಾಗೊಂದು ವೇಳೆ ಈ ಕೈಗಾರಿಕೆಗಳನ್ನು ಪ್ರೈವೇಟ್ ಏಜನ್ಸಿಗೆ ಒಪ್ಪಿಸುವುದಾದರೆ ಆಗ ಈ ದೇಶದ ಭವಿಷ್ಯ ಏನಾಗುತ್ತದೆ ಎಂಬುದನ್ನು ಹೇಳುವುದು ಕಷ್ಟ. ಅದರಿಂದ ಹಾವನ್ನು ಕೊಂದು ಹದ್ದಿಗೆ ಹಾಕಿದ ಹಾಗೆ ಆಗುತ್ತದೆ. ನಾವು ಈ ಹಿಂದೆ ದೇಶದಲ್ಲಿದ್ದ ಜನತೆಗೆ ಏನೊಂದು ಭರವಸೆಯನ್ನು ಕೊಟ್ಟಿದ್ದೆವೋ ಅದನ್ನು ನಾವು ಈಡೇರಿಸಿದಂತಾಗುವುದಿಲ್ಲ. ನಾವು ಹಿಂದೆ ಜನತೆಗೆ ಇದನ್ನು ಅಂದರೆ ನಮ್ಮ ರಾಜ್ಯವನ್ನು ಒಂದು ವೆಲಫೇರ್ ಸ್ಟೇಟನ್ನಾಗಿ ಮಾಡುತ್ತೇವೆ, ಸುಖೀರಾಜ್ಯವನ್ನಾಗಿ ಮಾಡುತ್ತೇವೆ, ಜನರಿಗೆಲ್ಲಾ ಅನ್ನ, ಬಟ್ಟೆ, ವಸತಿ ಸೌಕರ್ಯಗಳನ್ನು ಒದಗಿಸುತ್ತೇವೆಂದು ಕೊಟ್ಟಿದ್ದ ಮಾತುಗಳು ನಾವು ಕೈಗೂಡಿಸಿದಂತಾಗುವುದಿಲ್ಲ. ಕೊಟ್ಟ ಮಾತಿಗೆ ತಪ್ಪಿ ನಡೆಯಬೇಕಾಗುವುದು. ಜನರ ಆಸ್ತಿಕತೆಯನ್ನು ನಾವು ಗಮನದಲ್ಲಿಟ್ಟುಕೊಂಡು ಕೆಲಸ ಮಾಡದಿದ್ದರೆ ನಾವು ಬಹಳ ತಪ್ಪು ಹೆಜ್ಜೆಯನ್ನು ಇಟ್ಟಹಾಗೆ ಆಗುತ್ತದೆ. ಈ ವಿಚಾರವನ್ನು ಸರ್ಕಾರದವರು ಸಾವಧಾನವಾಗಿ ಪರಿಶೀಲಿಸಬೇಕೆಂದು ನಾನು ಅವರಲ್ಲಿ ಬಹಳ ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇದರ ಬಗ್ಗೆ ನಾನು ಸರ್ಕಾರಕ್ಕೆ ಪ್ರಾರ್ಥನೆ ಮಾಡಿಕೊಳ್ಳುತ್ತಾ ಅವರ ಗಮನಕ್ಕೆ ಒಂದೆರಡು ಮಾತುಗಳನ್ನು ತರಲಿಚ್ಛಿತ್ತೇನೆ. ನಮ್ಮ ಕೈಗಾರಿಕೆಗಳನ್ನು ನಡೆಸತಕ್ಕ ವಿಚಾರದಲ್ಲಿ ನಮ್ಮ ಧ್ಯೇಯ ಧೋರಣೆಗಳೇನು, ನಾವು ಯಾವ ಮೂಲ ಸೂತ್ರಗಳನ್ನು ಅನುಸರಿಸಿ ಇವುಗಳನ್ನು ನಡೆಸಿಕೊಂಡು ಹೋಗಬೇಕು ಎಂಬುದರ ಬಗ್ಗೆ ಒಬ್ಬ ಮಹನೀಯರು ಏನು ಹೇಳಿದ್ದಾರೆಂದರೆ ಅವರು ಹೀಗೆ ಉದ್ಧರಿಸಿದ್ದಾರೆ :

> "All economic and social policies would have to be directed towards the end of securing for everybody the national minimum basic necessities of life like food, clothing, shelter, education and health. That must be done in terms of families and areas. For every area, there should be a certain minimum. With all the resources that were available, the first charge on those resources was the raising and lifting of the underprivileged people and backward areas. That alone could bring greater solidarity among the people.
>
> No one can take exception to this way of looking at things. The elementary economic necessities of our people are so clear and overwhelming that there is hardly any scope for ideological controversies. The socialist pattern of society and the Welfare State are not alternative objectives for India. They are largely identical. Rigorous Marxian socialism which implies a complete and totalitarian state monopely of all Industry, trade and finance is ruled out by the democratic political

system which the Indian People have chosen. At the other end, uncontrolled capitalism is equally ruled out by the very fact that it has been superseded even in its own country of birth, namely, U. K. Barring these two extremes, all steps which may be taken for the economic development of India may satisfy equally the notions of democratic socialism as well as those of the Welfare State.

It may be contended that social justice, progressive reduction of the range of inequalities of income and wealth and prevention or regulation of concentration of economic power are particularly important from the point of view of socialism while rapid increase of national income, expansion of social services, raising minimum of wages and salaries and social security are the main things that matter for a Welfare State. In practice all these things are inter-linked and the general economic objective has to be largely pragmatic rather than doctrinaire. It is, therefore, desirable that public attention should be directed more towards immediate projects and their results than on verbal disputations...............

"Social services and social security depend on taxation direct or indirect. In all countries including the U. S. A. where distributive socialism is in effective operation, 30 to 40 per cent of national income is channelled through the public authorities providing the services and reliefs. In India, only a little more than 10 per cent is taken by the Central and State Governments and perhaps another 1 per cent by the local bodies. It is, therefore, highly regrettable that there should be so much outcry about excesive taxation even by persons who ought to be aware of the facts.

It would be amusing, if it were not tragic, to find these very persons crying for more education and other social services at the same time as they are demanding a reduction of taxation. The true test of statemanship during this and the coming decades is the education of the electorate regarding the intimate relation between the Welfare State and increasing taxation."

ಜಪಾನ್ ಇತ್ಯಾದಿ ಪರರಾಷ್ಟ್ರಗಳಲ್ಲಿ ಕೈಗಾರಿಕೆಗಳಿಂದ ಬರತಕ್ಕ ಲಾಭವನ್ನು ದೇಶವನ್ನು ಕಟ್ಟುತಕ್ಕ ಕೆಲಸಕ್ಕೆ ಉಪಯೋಗ ಮಾಡಲಾಗುತ್ತಿದೆ ಎಂದು ತಿಳಿಸಿದ್ದಾರೆ. ಅದೇ ರೀತಿಯಲ್ಲಿ ಈ ದಿವಸ ಇಲ್ಲಿ ನಮ್ಮ ಮಾನ್ಯ ಸಚಿವರು ಇದರ ಬಗ್ಗೆ ಸರ್ಕಾರದವರ ಒಂದು ನಿಗದಿಯಾದ ಧೋರಣೆಯೇನು ಎಂಬುದನ್ನು ದಯಮಾಡಿ ಹೇಳಬೇಕು. ಅಷ್ಟೇ ಅಲ್ಲದೆ ಸರ್ಕಾರದವರು ಈ ಸಾರ್ವಜನಿಕ ಕ್ಷೇತ್ರಗಳಲ್ಲಿ ಕೆಲಸಮಾಡತಕ್ಕ ಕೈಗಾರಿಕಗಳನ್ನು ಅಭಿವೃದ್ಧಿಪಡಿಸಲು ಒಂದು ಧೀರೋಧಾತ ನಿಲುವನ್ನು ತೆಗೆದುಕೊಳ್ಳವುದಾಗಿ ತಿಳಿಸಿದ್ದು ಈ ಹಾದಿಯಲ್ಲಿ ಕಳೆದ 2 ವರ್ಷಗಳಿಂದ ಸರ್ಕಾರದವರು ಬಹಳ ಶ್ರಮವಹಿಸಿ ದುಡಿದಿರುವುದಾಗಿ ತಿಳಿಸಲಾಗಿದೆ. ಹಾಗೆ ಈ ಕೈಗಾರಿಕೆಯನ್ನು ಉದ್ಧರಿಸುವುದಕ್ಕಾಗಿ ನಮ್ಮ ಸರ್ಕಾರ ಏನೇನು ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿತ್ತು ಏನೇನು ಸಾಧನೆಗಳನ್ನು ಮಾಡಲಾಗಿದೆ, ಇದನ್ನು ಎಷ್ಟರಮಟ್ಟಿಗೆ ಇತ್ತೀಚೆಗೆ ಉದ್ಧರಿಸಲಾಗಿದೆ ಎಂಬುದನ್ನು ಉತ್ತರ ಕೊಡತಕ್ಕ ಕಾಲದಲ್ಲಿ ಮಾನ್ಯ ಮಂತ್ರಿಗಳು ತಿಳಿಸಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

(ಶ್ರೀ ಡಿ. ಎಂ. ಸಿದ್ದಯ್ಯ)

ಇನ್ನು ನಾನು ಸಣ್ಣ ಕೈಗಾರಿಕೆಗಳ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ದಕ್ಷಿಣ ಭಾರತದಲ್ಲಿ ಎಷ್ಟು ಜನರು ಈ ರೇಷ್ಮೆ ವ್ಯವಸಾಯದಲ್ಲಿ ಇದನ್ನು ಒಂದು ಸಣ್ಣ ಗೃಹ ಕೈಗಾರಿಕೆಯನ್ನಾಗಿ ಇಟ್ಟುಕೊಂಡಿದ್ದಾರೆ ಎಂಬುದನ್ನು ಕಂಡುಹಿಡಿಯಬೇಕಾಗಿದೆ. ಇದು ವ್ಯವಸಾಯಗಾರರಿಗೆ ಬಹಳ ಲಗತ್ತಾದಂಥ ಒಂದು ಉಪಕಸಬು. ಇದರಿಂದ ರೈತರಿಗೆ ಬಹಳ ಅನುಕೂಲವಾಗುತ್ತದೆ. ಉದಾಹರಣೆಗೆ ಈ ದಿವಸ ನಮ್ಮಲ್ಲಿ ಕಾಯರ್ ಇಂಡಸ್ಟ್ರಿಯಲ್ಲಿ ತೊಡ ಗಿರತಕ್ಕ ಜನರು ಬಹಳ ಕಡಿಮೆ. ಅದನ್ನು ವೃಥಾ ಹಾಳುಮಾಡುತ್ತಿದ್ದಾರೆ. ಅದನ್ನು ಕೈಗಾರಿಕೆಗೆ ಉಪಯೋಗ ಮಾಡುವುದು ಬಹಳ ಕಡಿಮೆ. ಇದಕ್ಕೆ ಸರ್ಕಾರದವರು ಒಂದು ಬೇರೆ ವ್ಯವಸ್ಥೆಯನ್ನು ಮಾಡಬೇಕು. ಹಾಗೆ ಕದಲೆಕಾಯಿ ಹೊಟ್ಟನ್ನು ಈ ದಿವಸ ಜನರು ದನಗಳ ಮೇವಿಗಾಗಿ ಉಪ ಯೋಗ ಮಾಡುತ್ತಿದ್ದಾರೆ. ಆದರೆ ಜಪಾನ್ ದೇಶದಲ್ಲಿ ಇವುಗಳನ್ನೇ ಮುಖ್ಯ ಕಚ್ಚಾಮಾಲುಗಳನ್ನಾಗಿ ಮಾಡಿಕೊಂಡು ಅಲ್ಲಿ ಅನೇಕ ಕೈಗಾರಿಕೆಗಳು ನಡೆಯುತ್ತಿವೆ. ಆ ದೇಶ ಕೈಗಾರಿಕೆಯಲ್ಲಿ ಪಾಶ್ಚಿ ಮಾತ್ಯ ರಾಷ್ಟ್ರಗಳನ್ನು ಎದುರಿಸುತ್ತಿದೆ. ಆದರೆ ನಮ್ಮ ಮಾನ್ಯ ಮಂತ್ರಿಗಳು ಜಪಾನ್ ದೇಶಕ್ಕೆ ಇಟ್ಟುಕೊಂಡಿದ್ದ ತಮ್ಮ ಪ್ರವಾಸವನ್ನು ನಿಲ್ಲಿಸಿದ್ದಾರೆ. ಅದು ಸರಿಯಲ್ಲ. ಅವರು ಪರದೇಶಗಳಿಗೆ ಹೋಗಿ ಅಲ್ಲಿ ನಡೆಯತಕ್ಕದ್ದನ್ನೆಲ್ಲಾ ನೋಡಿಕೊಂಡು ಬರಬೇಕು. ಆದರೆ ಹಾಗೆ ಅವರು ಅಲ್ಲಿಂದ ಬಂದ ಮೇಲೆ ತಮ್ಮ ಪೋರ್ಟ್‌ಫೋಲಿಯೋವನ್ನು ಬೇರೆಯವರಿಗೆ ಬದಲಾವಣೆ ಮಾಡಬಾರದು. ಏಕೆಂದರೆ ಅವರು ಆ ಪ್ರವಾಸದಿಂದ ಗಳಿಸಿದಂಥ ಅನುಭವ ಜ್ಞಾನಾರ್ಜನೆ ಕೆಲಸಕ್ಕೆ ಬಾರದಂತಾ ಗುತ್ತದೆ. ಹಾಗಾಗಬಾರದು. ನಾನು ಇನ್ನು ನನ್ನ ಕ್ಷೇತ್ರದಲ್ಲಿ ಬಹಳ ಪ್ರಖ್ಯಾತಿ ಪಡೆದಿರತಕ್ಕ ರೇಷ್ಮೆ ವಿಚಾರದಲ್ಲಿ ಎರಡು ಮಾತುಗಳನ್ನಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಸ್ವಾಮಿ, ರೇಷ್ಮೆ ಉತ್ಪಾದನೆಗೆ ಇಡೀ ಭರತಖಂಡದಲ್ಲೇ ಒಂದು ಮಾದರಿಯಾದ ರಾಜ್ಯ ಎಂದರೆ ಅದು ನಮ್ಮ ಮೈಸೂರು ರಾಜ್ಯ. ಇಲ್ಲಿಯತನಕ ಈ ಉದ್ಯಮಕ್ಕೆ ಟಾರೀಫ್ ಕಮಿಷನ್ನಿನವರು ರಿಬೇಟನ್ನು ಕೊಡುತ್ತಿದ್ದರು. ಅದರಿಂದ ಈ ಉದ್ಯಮವನ್ನು ಇಲ್ಲಿಯವರೆಗೂ ನಡೆಸಿಕೊಂಡು ಬರಲಾಗಿದೆ. ಆದರೆ ಇತ್ತೀಚೆಗೆ ನಮ್ಮ ಕಡೆ ಜನರು ಟ್ಯಾರೀಫ್ ಬೋರ್ಡಿನವರು ಕೊಡುತ್ತಿದ್ದ ರಿಬೇಟನ್ನು ನಿಲ್ಲಿಸುತ್ತಾರೆಂಬ ವದಂತಿಯನ್ನು ಕೇಳಿ ಬಹಳ ಗಾಬರಿಯಾಗಿದ್ದಾರೆ. ರೈತರು ರೇಷ್ಮೆ ಗೂಡುಗಳನ್ನು ಖರೀದಿ ಮಾಡುವುದಕ್ಕೆ ಈಗ ಹಿಂದೆಗೆಯುತ್ತಿದ್ದಾರೆ. ಸೆಂಟರಿನವರು ಇದರ ಅಭಿವೃದ್ಧಿಯ ಬಗ್ಗೆ ಒಂದು ಕಾರ್ಪೊರೇಷನ್ನನ್ನು ಪ್ರಾರಂಭ ಮಾಡಿದರೆ ಈಗ ಇದರಲ್ಲಿ ಆಗುತ್ತಿರುವ ನಷ್ಟವನ್ನು ಸೇರಿಸಿಕೊಡುವುದಾಗಿ ಹೇಳುತ್ತಿದ್ದಾರೆ. ಆದರೆ ಏನೇ ಆಗಲಿ ನಮ್ಮ ಸರ್ಕಾರದವರು ನಮ್ಮ ರಾಜ್ಯದಲ್ಲಿ ತಯಾರಾಗತಕ್ಕ ರೇಷ್ಮೆ ಲೋಕಪ್ರಖ್ಯಾತಿ ಆದ ರೇಷ್ಮೆಯಾಗಿರುವುದರಿಂದ ಈ ಉದ್ಯಮವನ್ನು ಸಾಯುವುದಕ್ಕೆ ಬಿಡಬಾರದೆಂದೂ ಇದರಲ್ಲಿ ಆಗತಕ್ಕ ನಷ್ಟವನ್ನು ಭರ್ತಿಮಾಡಿ ಕೊಡದಿದ್ದರೆ ಇದರ ಅಭಿವೃದ್ಧಿ ಬಹಳ ಕುಂಠಿತವಾಗುತ್ತದೆಂದೂ ಸರ್ಕಾರದವರಲ್ಲಿ ಮನವಿಮಾಡಿ ಕೊಳ್ಳುತ್ತೇನೆ. ಮತ್ತು ಸರ್ಕಾರದವರು ಇದರ ವಿಚಾರವಲ್ಲಿ ಏನೇ ಕಷ್ಟ ಬರಲಿ ತಮ್ಮ ಏನೊಂದು ನೀತಿ ಇದೆ ಅದನ್ನು ಯಾವ ಕಾರಣದಿಂದಲೂ ಬದಲಾಯಿಸಬಾರದೆಂದು ಹೇಳುತ್ತೇನೆ. ನಾವು ಜನತೆಗೆ ಕೊಟ್ಟಿರತಕ್ಕ ಭರವಸೆಯನ್ನು ಕಾಪಾಡಿಕೊಂಡು ಬರಬೇಕು ಎನ್ನತಕ್ಕ ಒಂದು ಧೀರೋ ದ್ದಾತ ನಿಲುವನ್ನು ಸರ್ಕಾರ ತಾಳಬೇಕು. ಅವನ್ನು ಮರೆತರೆ ದೇಶಕ್ಕೆ ದೊಡ್ಡ ಧಕ್ಕೆ ಉಂಟಾಗ ಬಹುದು. ನಾವು ಒಂದಾನೊಂದು ಕಾಲದಲ್ಲಿ ಈ ಕೈಗಾರಿಕೆಗಳ ವಿಚಾರದಲ್ಲಿ ಆದರ್ಶವಾಗಿದ್ದೆವು. ನಮ್ಮಲ್ಲಿ ಬೇಕಾದಷ್ಟು ವಿದ್ಯುಚ್ಛಕ್ತಿ ಮತ್ತು ಅದಕ್ಕೆ ಬೇಕಾದ ನೀರಿನ ಸೌಕರ್ಯ ಇದೆ. ಮತ್ತು ನಮ್ಮ ಹಿಂದೂಸ್ತಾನದಲ್ಲಿ ಮೈಸೂರು ರಾಜ್ಯದಲ್ಲಿರತಕ್ಕಂತಹ ನೈಸರ್ಗಿಕ ಸೌಂದರ್ಯ ಬೇರಾವ ಕಡೆಗಳಲ್ಲೂ ಇಲ್ಲ. ಇದನ್ನು ಎಲ್ಲ ದೃಷ್ಟಿಯಿಂದಲೂ ಉಪಯೋಗ ಮಾಡಿಕೊಳ್ಳಬೇಕಾದುದು ನಮ್ಮ ಕರ್ತವ್ಯ. ಮತ್ತು ಹಿಂದೆ ನಮ್ಮ ಮೈಸೂರು ರಾಜ್ಯ ಯಾವ ಹೆಸರಿಗೆ ಪ್ರಸಿದ್ಧವಾಗಿತ್ತೋ ಅದನ್ನುಳಿಸಿಕೊಂಡು ಬರಬೇಕು ; ಸಾರ್ವಜನಿಕ ಕ್ಷೇತ್ರಗಳಲ್ಲಿರುವ ಕೈಗಾರಿಕೆಗಳನ್ನು ಕೈಬಿಡ ಕೂಡದು ಮತ್ತು ಸಾರ್ವಜನಿಕ ಕ್ಷೇತ್ರಗಳ ಕೈಗಾರಿಕೆಗಳು ಚೆನ್ನಾಗಿ ಮುಂದುವರಿಯುವಂತೆ ಮಾಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಸ್ವಾಮಿ, ಕೇಂದ್ರ ಸರಕಾರದ ಪಕ್ಷಪಾತದ ನೀತಿಯಿಂದಲೋ ಅಥವಾ ನಮ್ಮ ಸರಕಾರದ ದೌರ್ಬಲ್ಯದ ಆಡಳಿತದಿಂದಲೋ ನಮ್ಮ ದೇಶದಲ್ಲಿರುವ ಸಂಪನ್ಮೂಲ ಗಳು ನಿಜವಾಗಿಯೂ ಉಪಯೋಗವಾಗುತ್ತಿಲ್ಲ. ದೇಶದಲ್ಲಿರುವ ನಿರುದ್ಯೋಗದ ಸಮಸ್ಯೆ ಪರಿಹಾರ ವಾಗುವುದಕ್ಕೆ ಬದಲಾಗಿ ಜಾಸ್ತಿಯಾಗುತ್ತಾ ಬರುತ್ತಿದೆ. ಮೂರು ಯೋಜನೆಗಳನ್ನು ಮಾಡಿದರೂ ಏನು ಸಾಧನೆಗಳನ್ನು ಸಾಧಿಸಿದ್ದೀರಿ ಎಂದು ನಾನು ಇಲ್ಲಿ ಈಗ ಕೇಳಬೇಕಾಗಿದೆ. ಮೈಸೂರು

ಪ್ರಾಂತ ಕೈಗಾರಿಕಾ ಕ್ಷೇತ್ರದಲ್ಲಿ ನಮ್ಮ ಇಡೀ ಭಾರತದಲ್ಲಿ ಬಹಳ ಮುಂದುವರಿದಂತಹ ಪ್ರಾಂತವಾಗಿತ್ತು. ಆದರೆ ಇವೊತ್ತಿನ ದಿನ ನೋಡುವಾಗ ಇಂದು ಇದು ನಾಲ್ಕು ಅಥವ ಐದನೇ ಸ್ಥಾನಕ್ಕಿಂತ ಹಿಂದೆ ಇದೆ ಎಂದು ಭಾಸವಾಗುತ್ತಿದೆ. ಸಂಪನ್ಮೂಲಗಳು ಎಂದರೇನು ? ನಾವು ನಮ್ಮ ದೇಶದಲ್ಲಿ ಜಾಸ್ತಿಯಾಗಿ ಸಿಗುತ್ತಿರುವ ಕಬ್ಬಿಣದ ಅದಿರೇನು, ಅದರ ಸ್ವರೂಪವೇನು, ಅದಕ್ಕೆ ಸಿಗುವ ಬೆಲೆಯೇನು ಎನ್ನುವುದನ್ನು ಯಾವುದೂ ನೋಡದೆ ಇನ್ನೂ 18ನೇ ಶತಮಾನದಲ್ಲಿದ್ದೇವೆಂದು ಹೇಳಿದರೆ ಅದು ತಪ್ಪಾಗಲಾರದು. ಇವೊತ್ತಿನ ದಿನ ಕಬ್ಬಿಣದ ಅದಿರು ಟನ್ನಿಗೆ 5 ರೂಪಾಯಿ ಇದೆ. ಇದನ್ನೇ ಭದ್ರಾವತಿಯಲ್ಲಿ ಪಿಗ್ ಐರನ್ ಮಾಡಿ ಮಾರಿದರೆ ಟನ್ನಿಗೆ 300 ಆಗುತ್ತೆ. ಅನಂತರ ಮೈಲ್ಡ್ ಸ್ಟೀಲ್‌ನಂತೆ ಮಾಡಿದರೆ 700 ರಿಂದ ಸಾವಿರದ ವರೆಗೆ ಟನಗೆ ಬರುತ್ತದೆ. ಅನಂತರ ಅಲಾಯ್ಡ್ ಸ್ಟೀಲ್ ಆದರೆ 3000 ದಿಂದ 10 ಸಾವಿರದ ವರೆಗೆ ಟನ್‌ಗೆ ಬೆಲೆ ಬರುತ್ತದೆ. ಆಮೇಲೆ ಮೆಷೀನ್ ಟೂಲ್ ಸ್ಟೀಲ್ ಆದರೆ ಒಂದು ಟನ್ನಿಗೆ 30 ಸಾವಿರದವರೆಗೆ ಬರುತ್ತದೆ. ಹೀಗೆ ಒಂದೊಂದರಲ್ಲಿ ಒಂದೊಂದು ಸ್ವರೂಪಕ್ಕೆ ಬೆಲೆ ಬದಲಾವಣೆ ಆಗುತ್ತದೆ. ಹೀಗೆ ನಮ್ಮಲ್ಲಿರುವ ಸಂಪನ್ಮೂಲಗಳನ್ನು ಹೆಚ್ಚಾಗಿ ಉಪಯೋಗ ಮಾಡಿಕೊಂಡರೆ ದೇಶದ ಆದಾಯವೂ ಕೂಡ ಜಾಸ್ತಿಯಾಗುತ್ತದೆ. ಇವೊತ್ತಿನ ದಿವಸ ಏತಕ್ಕೋಸ್ಕರ ಕೇಂದ್ರ ಸರಕಾರದವರು ನಮ್ಮ ದೇಶದಲ್ಲಿರುವ ಉತ್ತಮವಾದ ಕಬ್ಬಿಣದ ಅದಿರು ಇದ್ದರೂ ಕೂಡ ಹೊಸಪೇಟೆಯಲ್ಲಿ ಒಂದು ಸ್ಟೀಲು ವರ್ಕ್ಸ್ ಮಾಡಲು ಒಪ್ಪದೇ ಬೇರೆ ಬೇರೆ ಕಡೆ ಏತಕ್ಕೆ ಕೇಂದ್ರ ಸರ್ಕಾರ ನೋಡಬೇಕು ? ನನಗೆ ಒಬ್ಬರು ಡೆಲ್ಲಿಯಿಂದ ಬಂದ ಅಧಿಕಾರಿಗಳು ಇದರ ಬಗ್ಗೆ ಕೇಳಿದಾಗ ಅವರು ಹೀಗೆ ಹೇಳಿದರು :

> "What is it that you have not got in Hospet ? You have got power ; you have got water you have got the best iron ore in the world ; you can produce the best steel in the world. Whereas in Vizag you have got a big sea—to drown yourself."

ಈ ಸರಕಾರದವರು ಇಂತಹ ಒಂದು ಕೇಸನ್ನು ಸರಿಯಾಗಿ ಪ್ರೆಸೆಂಟ್ ಮಾಡದೆ ಕೇಂದ್ರದಲ್ಲಿ ಸರಿಯಾದ ಪ್ರಭಾವ ಬೀರಲು ಅವಕಾಶವಾಗದೇ ಹೋದುದರಿಂದ ಇಂದು ಕೇಂದ್ರ ಸರಕಾರದವರು ಸ್ಟೀಲ್ ಪ್ಲಾಂಟನ್ನು ಸೇಲಂನಲ್ಲಿ, ಇಲ್ಲವೇ ವಿಶಾಖಪಟ್ಟಣದಲ್ಲಿ ಮಾಡಬೇಕೆಂದು ಹೇಳಲು ಅವಕಾಶವಾಗಿದೆ. ಇದು ನಮ್ಮ ಸರಕಾರದ ದೌರ್ಬಲ್ಯ ಎಂದು ನಾವು ಹೇಳಬಹುದು. ಅಲ್ಲದೆ ನಮ್ಮ ಸರಕಾರದ ದೌರ್ಬಲ್ಯದಿಂದಾಗಿ ಇಂದು ಮಂಗಳೂರು ಫರ್ಟಿಲೈಸರು ಫ್ಯಾಕ್ಟರಿ ಯಾವರೀತಿಯಾಗಿದೆ ಎನ್ನುವುದನ್ನು ನಾವು ಇಂದು ನೋಡಬಹುದು. ಮದ್ರಾಸಿನಲ್ಲಿ ಟುಟಿಕಾರಿನ್ ಫರ್ಟಿಲೈಸರ್ ಪ್ರಾಜೆಕ್ಟ್ ಎಂದು ಮಾಡಿ ಅಲ್ಲಿ ಒಂದು ವರ್ಷವಾಯಿತು. ಈಗಾಗಲೇ ಗ್ಲೋಬಲ್ ಟೆಂಡರ್ ಕರೆದಿದ್ದಾರೆ. ಸುಮಾರು ಎರಡು ಕೋಟಿ ರೂಪಾಯಿಯಷ್ಟು ಇದಕ್ಕೆ ಮದ್ರಾಸ್ ಸರಕಾರದ ಬಂಡವಾಳ ಹಾಕಿದ್ದಾರೆ. ನಮ್ಮಲ್ಲಿ ಕೇವಲ 20 ಲಕ್ಷ ರೂಪಾಯಿ ಖರ್ಚು ಮಾಡಿ ಒಂದು ಕೈಗಾರಿಕೆ ಮಾಡಬೇಕು ಎಂದರೆ ಅದಕ್ಕೆ ಕೇಂದ್ರ ಸರಕಾರದವರು ಅನುಮತಿ ಏಕೆ ಕೊಡುತ್ತಿಲ್ಲ ಎನ್ನುವುದು ಅರ್ಥವಾಗುತ್ತಿಲ್ಲ. ಇವೊತ್ತಿನ ದಿವಸ ನಮ್ಮ ರಾಜ್ಯದಲ್ಲಿದ್ದಂತಹ ಇಂಜನೀಯರುಗಳು ಹೊರದೇಶಗಳಲ್ಲಿ ಹೋಗಿ ವಿಶ್ವ ವಿಖ್ಯಾತರಾಗಿದ್ದಾರೆ. ಆದರೆ ಮೊನ್ನೆ ನಮ್ಮ ಎಜುಕೇಷನ್ ಮಿನಿಸ್ಟರು ಇಲ್ಲಿ ಒಂದು ಸಂದರ್ಭದಲ್ಲಿ ಹೇಳುವಾಗ ನಮ್ಮ ರಾಜ್ಯದಲ್ಲಿ ಪಾಸಾಗಿರುವ ಇಂಜನೀಯರುಗಳು ಹಾಗೂ ಡಿಪ್ಲೊಮಾ ಹೋಲ್ಡರುಗಳು ಬೇಕಾದಷ್ಟು ಇದ್ದಾರೆ. ಇವರಿಗೆಲ್ಲಾ ಕೆಲಸಗಳನ್ನು ಒದಗಿಸುವುದೇ ಕಷ್ಟವಾಗುತ್ತಿದೆ ಎಂದು ಹೇಳಿದರು. ಜಪಾನ್ ದೇಶವನ್ನು ಇಲ್ಲಿ ಉದಾಹರಣೆಯಾಗಿ ತೆಗೆದುಕೊಂಡರೆ ಅಲ್ಲಿ ಇಂಜನೀಯರುಗಳ ಅಭಾವ ಎಷ್ಟಿದೆ ಎನ್ನುವುದು ಗೊತ್ತಾಗುತ್ತದೆ. ಅಲ್ಲಿರುವ ಇಂಜನೀಯರುಗಳ ಸ್ಥಿತಿಗತಿಗಳೇನು ಎನ್ನುವುದನ್ನು ಸರಿಯಾಗಿ ಲೆಕ್ಕ ಹಾಕಿ ನೋಡಿದರೆ ನಾವು ಇಲ್ಲಿ ಬಹಳ ಹಿಂದೆ ಹೆಜ್ಜೆ ಇಡುತ್ತಾ ಹೋಗುತ್ತಿದ್ದೇವೆ ಎನ್ನುವುದು ಗೊತ್ತಾಗುತ್ತದೆ. ಮತ್ತು ಬೇರೆ ರಾಜ್ಯಗಳಲ್ಲಿ ಇಂಜನೀಯರುಗಳ ಅವಶ್ಯಕತೆ ಹೇಗಿದೆ ಎನ್ನುವುದಕ್ಕೆ ಯುನೈಟೆಡ್ ನೇಷನ್ ನವರು ಒಂದು ಚಾರ್ಟರನ್ನು ಹೊರಡಿಸಿದ್ದಾರೆ. ಇದರಲ್ಲಿ ಜಪಾನ್ ಬಗ್ಗೆ ಈ ರೀತಿ ಹೇಳುತ್ತಾರೆ :—

> "Rapid advance in industrialisation over the last two decades and extensive development of science and technology, industrial education has been an indispensable requirement in the educational programme of modern education".

ಅದೇ ರೀತಿ ಅಮೇರಿಕದಲ್ಲಿ ಪ್ರತಿವರುಷ ಒಂದು ಲಕ್ಷ ಜನ ಇಂಜನೀಯರ್‌ಗಳಿಗೆ ಉದ್ಯೋಗ ಒದಗಿಸುತ್ತಿದ್ದಾರೆ, ರಷ್ಯಾದಲ್ಲಿ ಇಂದು ಮೂವತ್ತು ಸಾವಿರ ಇಂಜನೀಯರುಗಳನ್ನು ಪ್ರತಿವರುಷ ಕೆಲಸಕ್ಕೆ

(ಶ್ರೀ ಸಿ. ಕೆ. ರಾಜಯ್ಯಶೆಟ್ಟಿ)

ತೆಗೆದುಕೊಳ್ಳುತ್ತಿದ್ದಾರೆ; ಬ್ರಿಟನ್‌ನಲ್ಲಿ ಸುಮಾರು ಹತ್ತು ಸಾವಿರ ಎಂಜನೀಯರುಗಳನ್ನು ತೆಗೆದುಕೊಳ್ಳುತ್ತಿದ್ದಾರೆ ಇದನ್ನೆಲ್ಲಾ ನೋಡಿದರೆ ನಮ್ಮ ರಾಜ್ಯದಲ್ಲಿರುವ ಇಂಜನೀಯರುಗಳಿಗೆ ಸರಿಯಾದ ಉದ್ಯೋಗಾವಕಾಶಗಳು ಸಿಗದೇ ಪರದೇಶಗಳಿಗೆ ಹೋಗುತ್ತಿದ್ದಾರೆ. ನಮ್ಮ ರಾಜ್ಯ ಯಾವ ಕೈಗಾರಿಕೆಯನ್ನೂ ಮಾಡದೆ ಹಿಂದೆ ಹೋಗುತ್ತಿದೆ ಎಂದು ಹೇಳಬೇಕಾಗಿದೆ. ಇದರಲ್ಲಿ ಕೇಂದ್ರ ಸರಕಾರವೂ ಪಕ್ಷಪಾತವೂ ಮಾಡುತ್ತಿದೆ. ಇದಕ್ಕೆ ಬೇಕಾದರೆ ಅಂಕಿ ಅಂಶಗಳನ್ನು ಹೇಳ ಬಹುದು. ನಮ್ಮ ರಾಜ್ಯದಲ್ಲಿ ಒಂದು ಸ್ಟೀಲ್ ಪ್ಲಾಂಟು ಹಾಗೂ ಒಂದು ಸ್ಮಾಲ್ ಕಾರ್ ಫ್ಯಾಕ್ಟರಿ ಆಗಬೇಕು ಎಂದು ಕೇಳುತ್ತಿದ್ದರೂ ಇದಕ್ಕೆ ಅವಕಾಶವನ್ನೇ ಇನ್ನೂ ಕೊಡಲಿಲ್ಲ. ಇದನ್ನು ಮಾಡಲು ಅವಕಾಶ ಕೊಟ್ಟಿದ್ದರೆ ಇಲ್ಲೇ ಸುಮಾರು ಹತ್ತಾರು ಸಾವಿರ ಇಂಜನೀಯರುಗಳಿಗೆ ಉದ್ಯೋಗ ಗಳನ್ನು ಒದಗಿಸಿಕೊಡಬಹುದಾಗಿತ್ತು. ಇದೇನು ದುರ್ಭಾಗ್ಯವೋ ನಮ್ಮ ದೇಶದ ಉತ್ಪತ್ತಿ ಕುಂಠಿತವಾಗುತ್ತಿದೆ. ಸುಮಾರು ಮೂರು ಯೋಜನೆಗಳಾದರೂ ಮತ್ತು ಕೈಗಾರಿಕೆಗಳಿಗಾಗಿ ಹತ್ತಾರು ಕೋಟಿ ರೂಪಾಯಿ ಖರ್ಚು ಮಾಡಿದರೂ ಇದರಿಂದ ಸಾಕಷ್ಟು ಪ್ರತಿಫಲ ಇನ್ನೂ ದೊರೆಯು ಲ್ಲಿಲ್ಲ ಎಂದು ಹೇಳಲು ಬಹಳ ದುಃಖವಾಗುತ್ತಿದೆ. ಇದಕ್ಕೆ ಕೇಂದ್ರ ಸರಕಾರದ ಒಂದು ನೀತಿಯೂ ಕಾರಣವಾಗಿದೆ. ಇವೊತ್ತು ನಮ್ಮ ಸರಕಾರದವರು ಹತ್ತಾರು ಕಾರ್ಖಾನೆಗಳನ್ನು ಮಾಡಿದ್ದಾರೆ. ಇದರಲ್ಲಿ ಸರಕಾರ ಬಂಡವಾಳವನ್ನೂ ಹಾಕಿದೆ. ಭದ್ರಾವತಿ ಐರನ್ ಅಂಡ್ ಸ್ಟೀಲ್ ವರ್ಕ್ಸ್‌ನಲ್ಲಿ ನಮ್ಮ ಸರಕಾರದವರು ಆಡಳಿತ ನಡೆಸಲು ಬರೀ ಐ.ಎ.ಎಸ್. ಅಧಿಕಾರಿಗಳನ್ನೇ ನೇಮಿಸುವುದು ಸ್ವಾಭಾವಿಕವಾಗಿದೆ. ಅವರಿಗೆ ಸಾಕಷ್ಟು ಅನುಭವವೇ ಇರುವುದಿಲ್ಲ. ಸುಮಾರು ನಲವತ್ತು ಕೋಟಿ ರೂಪಾಯಿಗಳಷ್ಟು ಬಂಡವಾಳ ಹಾಕಿರುವ ಆ ಕೈಗಾರಿಕೆಯಿಂದ ಸಾಕಷ್ಟು ಪ್ರತಿಫಲ ದೊರೆಯಬೇಕಾದರೆ ಸರಿಯಾದ ತಜ್ಞರನ್ನು ಹಾಗೂ ಅನುಭವವುಳ್ಳವರನ್ನು ಆ ಕೈಗಾರಿಕೆಯಲ್ಲಿ ಹಾಕಬೇಕು. ಇದನ್ನು ಮಾಡದೆ ಏಕೆ ಇಂತಹ ತಾರತಮ್ಯವನ್ನು ಮಾಡುತ್ತಾರೆ ಎಂದು ಕೇಳ ಬೇಕಾಗಿದೆ. ಇದನ್ನು ಯಾರೂ ಯೋಚನೆ ಮಾಡುತ್ತಿಲ್ಲ. ಇನ್ನು ಭದ್ರಾವತಿಯಲ್ಲಿ ಎಕ್ಸ್‌ಪ್ಯಾನ್ ಷನ್ ಸ್ಕೀಂ ಎಂದು ಮಾಡಿ ಇದರಲ್ಲಿ ಅಡ್ವೈಸರು ಎಂದು ಬೇರೆ ಮಾಡಿದ್ದಾರೆ. ಇದನ್ನೆಲ್ಲಾ ಬಿಟ್ಟು ದಕ್ಷತೆಯಿಂದ ಇಲ್ಲಿ ಕೆಲಸ ಮಾಡಿದ್ದ ಪಕ್ಷದಲ್ಲಿ ಸುಮಾರು ನಾಲ್ಕು ಕೋಟಿ ರೂಪಾಯಿಗಳಷ್ಟು ಹಣವನ್ನುಳಿಸಬಹುದಾಗಿತ್ತು. ಇದರಲ್ಲಿ ನಾಲ್ಕು ತರಹ ಶಕ್ತಿಗಳು ಕೆಲಸ ಮಾಡುತ್ತಿವೆ. ಒಂದನೇ ತರಹದ ಶಕ್ತಿ ಹೊರಗಿನಿಂದ ಬಂದ ಪರದೇಶದ ತಜ್ಞರು ಅವರಿಗೆ ದಿನ ಒಂದಕ್ಕೆ ಹತ್ತು ಸಾವಿರ ರೂಪಾಯಿ ಕೊಡುತ್ತಿದ್ದಾರೆ. ಅವರದೇ ಒಂದು ಲಿಸ್ಟು ನನ್ನಲ್ಲದೆ. ಸುಮಾರು 38 ಜನ ಅವರಿ ದ್ದಾರೆ ಅವರಲ್ಲಿ ಪ್ರತಿಯೊಬ್ಬರಿಗೂ ಒಂದು ದಿನಕ್ಕೆ 50 ರಿಂದ 280ರ ವರೆಗೆ ಸಂಬಳ ಹಾಗೂ ಕೆಲವರಿಗೆ 120 ರಿಂದ 200ರ ವರೆಗೆ ದಿನ ಭತ್ಯ ಇತ್ಯಾದಿ ಕೊಡುತ್ತಿದ್ದಾರೆ ಇವರ ಮೇಲೆ ಒಬ್ಬರು ಟೆಕ್ನಿಕಲ್ ಡೈರೆಕ್ಟರು ಎಂದು ಬೇರೆ ಇದ್ದಾರೆ. ಅವರಿಗೆ 11 ಸಾವಿರದಿಂದ 12 ಸಾವಿರದವರೆಗೆ ಸಂಬಳ ಕೊಡುತ್ತಿದ್ದಾರೆ. ಹೀಗೆ ಸರಕಾರದವರು ದುಂದು ಮಾಡುವುದಕ್ಕೆ ಬದಲಾಗಿ ನಮ್ಮ ರಾಜ್ಯದಲ್ಲಿರುವ ಇಂಜನೀಯರುಗಳಿಗೇ ತರಬೇತಿ ಕೊಟ್ಟು ಕೆಲಸ ಮಾಡಿದರೆ ಸರಕಾರಕ್ಕೆ ಎಷ್ಟು ಹಣ ಉಳಿತಾಯವಾಗುತ್ತದೆ ಎನ್ನುವುದನ್ನು ಯಾರೂ ವಿಚಾರ ಮಾಡಿದಂತೆ ಕಾಣುತ್ತಿಲ್ಲ. ಇನ್ನು ಇದರ ಮೇಲೆ ಕನ್‌ಸೋರ್ಟಿಯಂ ಬೇರೆ ಬಂತು ಇದಕ್ಕಾಗಿ ಸುಮಾರು 15,70,000 ರೂಪಾಯಿ ಖರ್ಚಾಗಿದೆ.

4-00 P.M.

ಭದ್ರಾವತಿ ಕಾರ್ಖಾನೆಯಲ್ಲಿ ಗೌರ್ನಮೆಂಟ್ ಷೆಡ್ಯೂಲ್ ಏನು ಇದೆಯೋ ಅದಕ್ಕಿಂತ 10 ಪರ್ಸೆಂಟು ಜಾಸ್ತಿ ಕನ್ಸಾರ್ಟಿಯಂ ಅಂದಾಜುಗಳಾಗಿ ಕಂಟ್ರಾಕ್ಟ್ ಕೆಲಸ ಮಾಡಿದ್ದಾರೆ. ಅದಲ್ಲದೆ ಅದನ್ನು ತೆಗೆದುಕೊಳ್ಳುವ ಮೊದಲು ಕಂಟ್ರಾಕ್ಟರ್ ಇವರಿಗೆ ಕ್ಯಾಷ್ ಕಟ್ಟಬೇಕು. ಅಲ್ಲದೆ ಅಂದಾಜ ಮೇಲೆ ನಮ್ಮ ಸರ್ಕಾರ ಅದಕ್ಕೆ 2–3 ಪರ್ಸೆಂಟು ಓವರ್ ಅಂಡ್ ಎಬವ್ ಕೊಡಬೇಕಾಗುತ್ತದೆ. ಇಷ್ಟು ಆದಮೇಲೂ ಕೂಡ ಕಂಟ್ರಾಕ್ಟರ್ 3 ಪರ್ಸೆಂಟು ಕಮೀಷನ್ ಬೇರೆ ಕೊಡಬೇಕು ಇದಕ್ಕೆ ಬೇಕಾದಷ್ಟು ಎಜೆನ್ಸಿ ಇದ್ದಾರೆ. ನಮ್ಮವರೇ ಅದ ಎಷ್ಟೋ ಇಂಜನೀಯರುಗಳು ಪರದೇಶಕ್ಕೆ ಹೋಗಿ ಪರಿಣತರಾಗಿ ವಾಪಸ್ಸು ಬಂದಿದ್ದಾರೆ. ಅದಲ್ಲದೆ ಟೆಕ್ನಿಕಲ್ ಅಡ್ವೈಸರ್ ಬೇರೆ ಇದ್ದಾರೆ. ಇದೆಲ್ಲಾ ಸೇರಿದರೆ ಅಲ್ಲಿಯ ಸಿಬ್ಬಂದಿವರ್ಗವೆಲ್ಲಾ ಅನಾವಶ್ಯಕವಾಗಿ ಹೆಚ್ಚು ಆಗುತ್ತಾರೆ. ಇದನ್ನೆಲ್ಲಾ ನೋಡಿದರೆ ಬೂಸ್ಟೆಡ್ ಎಸ್ಟಿಮೇಟ್‌ನಿಂದ ಕೆಲಸ ಮಾಡುತ್ತಾರೆ ಎಂದು ತಿಳಿಯಬಹುದು.

ಇನ್ನು ಅನೀಲಿಂಗ್ ಪ್ಲಾಂಟ್ ಎಂದು ಹೊಸದಾಗಿ ಒಂದು ರಚನೆಆಗುತ್ತಾ ಇದೆ. ಅಲ್ಲಿ ಒಂದು ಗೇಟ್ ತಯಾರು ಮಾಡಲು 600 ರೂಪಾಯಿ ಅಂದಾಜದಂತೆ ಖರ್ಚಾಗುತ್ತದೆ. ಅದನ್ನೆ

ಭದ್ರಾವತಿಯಲ್ಲೇ ತಯಾರು ಮಾಡಿಸಿ 120 ರೂಪಾಯಿನಲ್ಲಿ ಕೊಟ್ಟಿರುತ್ತಾರೆ. ಹೀಗೆ ಒಂದೊಂದು ಗೇಟು ಮಾಡುವುದಕ್ಕೆ 600 ರೂಪಾಯಿ ಆಗುತ್ತದೆ ಎಂದು ಎಸ್ಟಿಮೇಟ್ ಮಾಡಿ ಕನ್ಸಾರ್ಟಿಯಮ್ ಡೈರೆಕ್ಟರ್ ಅಳಿಯನಾದ ಒಬ್ಬರಿಗೆ ಕಂಟ್ರಾಕ್ಟರ್‌ಗೆ ಕೊಟ್ಟು ಕೆಲಸ ಮಾಡಿಸುತ್ತಾ ಇದ್ದಾರೆ. ಈ ರೀತಿ ಮಾಡಿದರೆ ಇವರ ಜವಾಬ್ದಾರಿ, ಇವರ ಪ್ರಾಮಾಣಿಕತೆ ಏನು ಇದೆ ಎಂದು ತಿಳಿಯಬೇಕಾಗುತ್ತದೆ.

ಇನ್ನು ಪಿಗ್ ಕ್ಯಾಸ್ಟ್ ಮಿಲ್ ಇದೆ ಇದು ಯಾವ ತರಹ ಮಿಲ್, ಇದರ ಕೆಪಾಸಿಟಿ ಏನು, ಇದರ ನಿರ್ವಹಣೆ ಏನು, ಇದರ ಉತ್ಪಾದನೆ ಏನು ಎಂದು ತಿಳಿಯಬೇಕು ಅದಕ್ಕೆ ಅವರು 450 ಟನ್ ಕೆಪಾಸಿಟಿ ಆದರೆ ಸಾಕು ಎಂದು ಕಾನ್ಸೋರ್ಟಿಯಂ ತಮ್ಮ ಅಡ್ವೈಸ್ ಹೇಳಿದ್ದಾರೆ. ಇದಕ್ಕೆ ಟೆಕ್ನಿಕಲ್ ಅಡ್ವೈಸರ್ ಒಪ್ಪದೆ ಈ ಮಿಲ್‌ನ ಕೆಪಾಸಿಟಿ 650 ಟನ್ ಇರಬೇಕು ಎಂದು ಹೇಳಿದರು ಅವರು ಕಾನ್ಸೋರ್ಟಿಯಂ ತಮ್ಮ ಅಡ್ವೈಸರ್‌ಗೆ 10 ಸಾವಿರ ರೂಪಾಯಿ ಕೊಟ್ಟಿರುತ್ತಾರೆ. ಈ ರೀತಿ ಒಂದು ತಪ್ಪು ಅಡ್ವೈಸ್ ಹೇಳುವುದಕ್ಕೆ ದುಡ್ಡು ಕೊಡುತ್ತಿದ್ದಾರೆ. ಭದ್ರಾವತಿ ಕಾರ್ಖಾನೆ ಬಹಳ ವರ್ಷದಿಂದಲೂ ಇದೆ. ನಮ್ಮಲ್ಲಿ ತಜ್ಞರು ಇಲ್ಲವೇ? ಸರ್ಕಾರಿ ಆಡಳಿತದ ಎಲ್ಲಾ ಕಾರ್ಖಾನೆಯಲ್ಲೂ ಲೋಪದೋಷ ಇದ್ದೇ ಇದೆ.

ಈವೊತ್ತಿನ ದಿವಸ ಆಕ್ಸಿಜನ್ ಪ್ಲಾಂಟ್ ಇದೆ ಇದು ಎಷ್ಟು ವರ್ಷದಿಂದ ಇದೆ ನೋಡಿ. ಈವೊತ್ತು ಆ ಕಾರ್ಖಾನೆ 75 ಪರ್ಸೆಂಟು ಪ್ರೊಡಕ್ಷನ್ ಕೊಡುತ್ತಿದೆ. ಅದಕ್ಕೆ ಒಬ್ಬ ಸ್ವಿಡ್ಜರ್‌ಲೆಂಡ್‌ನ ಟೆಕ್ನಿಕಲ್ ಅಡ್ವೈಸರ್ ಒಬ್ಬರಿದ್ದಾರೆ. ಅದರ ಉತ್ಪತ್ತಿ ಎಲ್ಲೇ ಮುಟ್ಟಿಲ್ಲ ಈವೊತ್ತು ಭದ್ರಾವತಿ ಕಾರ್ಖಾನೆ ಐರಾವತ ಕಾರ್ಖಾನೆಯಾದಂತಾಗಿದೆ. ಇಂದ್ರ ಆನೆಯನ್ನು ಪೋಷಣೆ ಮಾಡಿದ ಹಾಗೆ ಭದ್ರಾವತಿ ಕಾರ್ಖಾನೆಯಲ್ಲಿ ಅನೇಕ ಶಕ್ತಿಗಳು ಕೆಲಸ ಮಾಡುತ್ತಾ ಇವೆ.

ಇನ್ನು ಎನ್.ಜಿ.ಇ.ಎಫ್. ಬಗ್ಗೆ ಹೇಳುವುದಾದರೆ ಇದು ಪ್ರಾರಂಭವಾದಾಗ ಗೌರ್ನಮೆಂಟ್ ಎಲಕ್ಟ್ರಿಕ್ ಫ್ಯಾಕ್ಟರಿಗೆ ತೊಂದರೆ ಆಗದೇ ಇದ್ದ ಹಾಗೆ ಉತ್ಪಾದನೆ ಮಾಡಿಕೊಂಡು ಒಂದಕ್ಕೊಂದಕ್ಕೆ ಪೈಪೋಟಿ ಇಲ್ಲದಂತೆ ಕೆಲಸ ನಡೆಸುತ್ತಾರೆ ಎಂದು ಮಾಡಿದಿರಿ. ಈವೊತ್ತು ಏನಾಗಿದೆ ಎಂದರೆ ಯಾವುದಾದರೂ ಟೆಂಡರನ್ನು ಜಿ.ಇ.ಎಫ್. ನವರು ಹಾಕಿದಾರೆ ಎನ್.ಜಿ.ಇ.ಎಫ್. ನವರೂ ಕೂಡ ಅದಕ್ಕೆ ಟೆಂಡರ್ ಕೊಡುವ ಪರಿಸ್ಥಿತಿಗೆ ಬಂದಿದ್ದಾರೆ. ಈರೀತಿ ಒಬ್ಬರಿಗೊಬ್ಬರಿಗೆ ಪೈಪೋಟಿ ಮಾಡಿಕೊಂಡು ಬಂದಿದ್ದಾರೆ. ಈ ಎನ್.ಜಿ.ಇ.ಎಫ್ ಇಲ್ಲದೇ ಇದ್ದ ಪಕ್ಷದಲ್ಲಿ ಇಷ್ಟು ಪೈಪೋಟಿ ಆಗುತ್ತಾ ಇರಲಿಲ್ಲ. ಇದೇ ಎನ್.ಜಿ.ಇ.ಎಫ್.ನ ಮ್ಯಾನೇಜಿಂಗ್ ಡೈರೆಕ್ಟರ್ ಡೆಲ್ಲಿಯಲ್ಲಿ 20–30 ಸಾವಿರ ರೂಪಾಯಿ ಖರ್ಚು ಮಾಡಿ ಒಂದು ಗೆಸ್ಟ್ ಹೌಸ್ ಕಟ್ಟಿದ್ದಾರೆ. ಅಲ್ಲಿ ಅದರ ಅವಶ್ಯಕತೆ ಏನು ಇತ್ತು ಎಂದು ಕೇಳುತ್ತೇನೆ. ಇದನ್ನೆಲ್ಲಾ ನಮ್ಮ ಮಂತ್ರಿಗಳು ತಿಳಿದುಕೊಳ್ಳಬೇಕು. ಒಬ್ಬ ಮ್ಯಾನೇಜಿಂಗ್ ಡೈರೆಕ್ಟರು ಏನು ಒಂದು ರಿಪೋರ್ಟ್ ಬರೆದು ಕಳುಹಿಸಿದರೂ ಅದಕ್ಕೆ ಸೈನ್ ಹಾಕುವುದೇ ಒಂದು ಕೆಲಸ ಎಂದು ತಿಳಿದುಕೊಂಡಿದ್ದರೆ ಈ ಪ್ರಜಾಪ್ರಭುತ್ವವನ್ನು ಬಯ್ಯುತ್ತೇನೆ. ಈರೀತಿ ಸರ್ಕಾರಿ ಕೈಗಾರಿಕೆಗಳಲ್ಲಿ ಅನ್ಯಾಯದ ಪರಂಪರೆಯು ನಡೆಯುತ್ತಾ ಇದೆ. ಇದು ಒಂದು ದೊಡ್ಡ ಕ್ಷೇತ್ರ. ಈ ಕಾರ್ಖಾಗಳಿಂದ ಕೋಟ್ಯಾಂತರ ರೂಪಾಯಿ ತೆರಿಗೆಯನ್ನು ಕೊಡುತ್ತಿದ್ದಾರೆ. ಆದುದರಿಂದ ಮಾನ್ಯ ಮಂತ್ರಿಗಳು ಇದರ ಬಗ್ಗೆ ಕೂಲಂಕಷವಾಗಿ ತಿಳಿದುಕೊಳ್ಳಬೇಕು. ಕೈಗಾರಿಕೆಗಳಲ್ಲಿ ಬಹಳ ನಷ್ಟವಾಗುತ್ತಿದೆ.

ಇನ್ನು ಕೈಗಾರಿಕೆ ಕ್ಷೇತ್ರದಲ್ಲಿ ಇನ್ನೊಂದು ರಂಗ ಖಾದಿ ಬೋರ್ಡ್ ಇದೆ. ಇದೂ ಕೂಡ ಭದ್ರಾವತಿಯಂತೆ ಬೆಳೆಯುತ್ತಾ ಇದೆ. ಇದಕ್ಕೆ 2½ ಕೋಟಿ ರೂಪಾಯಿ ಬಂಡವಾಳ ಹಾಕಿದ್ದೀರಿ. ಇದರಲ್ಲಿ ¼ ಭಾಗವಾದರೂ ವಾಪಸ್ಸು ಬರುತ್ತಾ ಇಲ್ಲ. ಇದು ಎಷ್ಟು ಮಟ್ಟಿಗೆ ನಡೆಯುತ್ತಾ ಇದೆ ಎಂದು ಹೇಳುವುದಕ್ಕಿಂತ ಮರೆಯುವುದು ಉತ್ತಮ ಎಂದು ನನಗೆ ಅನಿಸುತ್ತದೆ. ಇದರಲ್ಲಿ 4—6 ತರಹ ಸೊಸೈಟಿಗಳು ಇವೆ. ಅದು ಈ ರೀತಿ ನಡೆಯುತ್ತಾ ಇವೆ.—

ಮಂಡಲ ಸಾಧಿಸಿದ ಪ್ರಗತಿಯ ಸ್ಥೂಲ ಚಿತ್ರ ಈ ರೀತಿ ಇದೆ :—

1. 1968 ನೇ ಮಾರ್ಚಿ 31 ರ ವರೆಗೆ 46 ಸಹಕಾರ ಸಂಘಗಳು ಮತ್ತು 17 ದಾಖಲಾತಿ ಸಂಸ್ಥೆಗಳಿಗೆ ಮಂಡಲ ಆರ್ಥಿಕ ನೆರವು ನೀಡಿದೆ. ಈ ಸಹಕಾರ ಸಂಘಗಳ ವಿಧಾನ ಈ ರೀತಿ ಇವೆ.—

		ಸಹಕಾರ ಸಂಘಗಳು	ದಾಖಲಾತಿ ಸಂಸ್ಥೆಗಳು.
1	ದಕ್ಷ	13	3
2	ಮಧ್ಯಮ	7	3
3	ದುರ್ಬಲ	7	5
4	ಸತತ ನಡೆಯದಿರುವುದು	19	6
		46	17

(ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ)

ಒಟ್ಟು ಇದಕ್ಕೆ ಹಾಕಿರುವ ಬಂಡವಾಳ 1,30,638—53 ರೂಪಾಯಿಗಳು. ಖಾದಿಬೋರ್ಡ್ ಈ ವಿವರಗಳನ್ನು ಪ್ರಿಂಟ್ ಮಾಡಿ ಪ್ರತಿ ತಿಂಗಳು ಮ್ಯಾಕ್ಸೈನ್ ಹೊರಡಿಸುತ್ತಿದ್ದಾರೆ.

2. ಸಾಬೂನು ಕೈಗಾರಿಕೆ ವಿಷಯ. ಇದರಲ್ಲಿ 1968 ನೇ ಮಾರ್ಚ್ 31 ಕ್ಕೆ 36 ಸಹಕಾರ ಸಂಘಗಳು ಮತ್ತು 10 ರಿಜಿಸ್ಟರ್ಡ್ ಸಂಸ್ಥೆಗಳು ಇವೆ. ಈ ಸಹಕಾರ ಸಂಘಗಳು ಕೆಲಸ ಮಾಡುವ ವಿಧಾನ ಈ ರೀತಿ ಇದೆ :—

	ಸಹಕಾರ ಸಂಘಗಳು	ದಾಖಲಾತಿ ಸಂಸ್ಥೆಗಳು
1. ದಕ್ಷ	5	3
2. ಮಧ್ಯಮ	5	1
3. ದುರ್ಬಲ	2	2
4. ಸತತ ನಡೆಯುವಿರುವುದು	24	4
	36	10

ಇದರ ಬಂಡವಾಳ 2,28,6107—26 ರೂಪಾಯಿಗಳು.

3. ನೀರಾ. 1968 ನೇ ಮಾರ್ಚಿ 31 ರ ವರೆಗೂ 48 ಸಹಕಾರ ಸಂಘಗಳು ಮತ್ತು 10 ರಿಜಿಸ್ಟರ್ಡ್ ಸಂಸ್ಥೆಗಳಿಗೆ ಮಂಡಲ ಆರ್ಥಿಕ ನೆರವು ನೀಡಿದೆ. ಸಂಘ ಸಂಸ್ಥೆಗಳು ಕೆಲಸ ಮಾಡುವುದು ಈ ರೀತಿ ಇದೆ :—

	ಸಹಕಾರ ಸಂಸ್ಥೆಗಳು	ದಾಖಲಾತಿ ಸಂಸ್ಥೆಗಳು
1. ದಕ್ಷ	...	...
2. ಮಧ್ಯಮ	1	...
3. ದುರ್ಬಲ	...	...
4. ಸತತ ನಡೆಯುದಿರುವುದು	47	1
	48	1

ಇದಕ್ಕೆ ಹಾಕಿರುವ ಬಂಡವಾಳ 16,55,012—47 ರೂಪಾಯಿಗಳು.

4. ಇನ್ನು ಕಮ್ಮಾರಿಕೆ ಕೆಲಸ :—ಇದರಲ್ಲಿ 1968 ನೇ ಮಾರ್ಚಿ 31 ಕ್ಕೆ 51 ಸಹಕಾರ ಸಂಘಗಳಿಗೂ ಮತ್ತು 6 ದಾಕಲಾತಿ ಸಂಸ್ಥೆಗಳಿಗೂ ಮಂಡಲ ಆರ್ಥಿಕ ನೆರವು ನೀಡಿದೆ :—

	ಸಹಕಾರ ಸಂಸ್ಥೆಗಳು	ದಾಖಲಾತಿ ಸಂಸ್ಥೆಗಳು
1. ದಕ್ಷ	4	3
2. ಮಧ್ಯಮ	9	...
3. ದುರ್ಬಲ	12	2
4. ಸತತ ನಡೆಯುದಿರುವುದು	26	1
	51	6

ಇದಕ್ಕೆ ಹಾಕಿರುವ ಬಂಡವಾಳ 5,75,515—00 ರೂಪಾಯಿಗಳು.

ಇದನ್ನೆಲ್ಲಾ ನೋಡಿದ ಪಕ್ಷದಲ್ಲಿ ಈ ಖಾದಿ ಬೋರ್ಡ್ ಕೈಗಾರಿಕೆಯು ಚಿತ್ರ ಭದ್ರಾವತಿಯು ಕಾರ್ಖಾನೆ ಚಿತ್ರದಂತೆ ಇದೆ. ಇದರಲ್ಲಿ ಯಾವರೀತಿ ದಕ್ಷತೆ ಇದೆ ಎಂದು ತಿಳಿಯುವುದಾದರೆ ಸರ್ಕಾರ ಇದರಲ್ಲಿ ಕೈ ಹಾಕಿದ್ದೇ ತಪ್ಪು ಎಂದು ನನಗೆ ಭಾಸವಾಗುತ್ತದೆ. ಈ ಹಿಂದೆಯೇ ಒಂದು ಸೂಚನೆ ಮಾಡಿದ್ದೇನೆ ಏನೆಂದರೆ ಈ ಮನೆಯಲ್ಲಿರುವ ಸದಸ್ಯರು ಯಾರು ಈ ವಿಚಾರದಲ್ಲಿ ಅನುಭವ ಇರುತ್ತಾರ ಅಂಥಹವರ 4–6 ಜನರ ಒಂದು ಕಮಿಟಿ ಮಾಡಿದರೆ ಸರ್ಕಾರಿ ಆಡಳಿತದಲ್ಲಿರುವ ದೊಡ್ಡ

ಉದ್ದಿಮೆಗಳು ಏನು ಇವೆಯೋ ಅದರ ಕೆಲಸಗಳನ್ನು ಪರಿಶೀಲನೆ ಮಾಡುವುದಕ್ಕೆ ಅವಕಾಶವಾಗುತ್ತದೆ ಎಂದು. ಏತಕ್ಕೋಸ್ಕರ ನಿಧಾನ ಮಾಡುತ್ತಿದ್ದೀರೋ ಗೊತ್ತಿಲ್ಲ.

Sri K. PUTTASWAMY.—Just this morning I said that the Rules Committee has made a recommendation for the appointment of a committee of Legislature to consider matters relating to public undertakings. If the report of the rules committee is taken into consideration such a committee can be formed.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಮನುಷ್ಯ ಒಂದು ಸಾರಿ ತಪ್ಪು ಮಾಡಬಹುದು. ಪುನಃ ಆ ತಪ್ಪು ಆಗದಂತೆ ಸರ್ಕಾರ ಎಚ್ಚರಿಕೆಯಿಂದ ಇರಬೇಕು. ತಪ್ಪು ಮಾಡುವ ಮನುಷ್ಯ ಅವನು ಯಾವ ಕೆಲಸದಲ್ಲಿ ಇರುತ್ತಾನೆಯೋ ಆ ಕೆಲಸಕ್ಕೆ ನಾಲಾಯಖ್ ಇದ್ದರೆ ಬೇರೆ ಕೆಲಸಕ್ಕೆ ಹಾಕುತ್ತಾರೆ. ಬೋರ್ಡ್ ಆಫ್ ಮಿನರಲ್ ಡೆವಲಪ್‌ಮೆಂಟ್‌ನಲ್ಲಿ ಒಂದು ಕೋಟಿ ರೂಪಾಯಿ ನಷ್ಟವಾಯಿತು ಎಂದು ಹೇಳಿದರು. ಒಬ್ಬ ಪಾರ್ಟಿ ಹೈಕೋರ್ಟಿನಲ್ಲಿ 45 ಲಕ್ಷ ರೂಪಾಯಿಗಳಿಗೆ ಒಂದು ವ್ಯವಹಾರ ಹೂಡಿ ಅದು ನಡೆಯುತ್ತಿದೆ. ಇದನ್ನು ಲೆಕ್ಕ ಹಾಕಿದರೆ ಒಂದೂವರೆ ಕೋಟಿ ರೂಪಾಯಿ ನಷ್ಟವಾಗುತ್ತದೆ. ದಕ್ಷ ಆಡಳಿತವಿಲ್ಲದೆ, ಒಬ್ಬ ಐ. ಎ. ಎಸ್. ಅಧಿಕಾರಿಯ ಉಪಟಳದಿಂದ ಇಷ್ಟು ಹಣ ನಷ್ಟವಾಯಿತು. ಅದೇ ಮನುಷ್ಯನನ್ನು ಬೆಂಗಳೂರು ಡೈರಿಗೆ ಹಾಕಿದರು. ಅಲ್ಲಿಯೂ ಒಂದು ಕೋಟಿ ರೂಪಾಯಿ ನಷ್ಟವಾಗಿದೆ. ಒಬ್ಬ ಮನುಷ್ಯ ಯಾವ ಕೆಲಸವನ್ನೂ ಮಾಡುವುದಕ್ಕೆ ನಾಲಾಯಖ್ ಎಂದು ಗೊತ್ತಿದ್ದರೂ ಕೂಡ ಅವನಿಗೆ ಪ್ರಮೋಷನ್ ಕೊಟ್ಟು ಅದಕ್ಕಿಂತ ದೊಡ್ಡ ಕೆಲಸಕ್ಕೆ ಹಾಕುವುದರಲ್ಲಿ ಅರ್ಥವೇನು ಎನ್ನುವುದು ಗೊತ್ತಾಗುವುದಿಲ್ಲ.

ಕೇಂದ್ರ ಸರ್ಕಾರದವರು ಟೆಕ್ಸ್‌ಟೈಲ್ ಎಕ್ಸ್‌ಪರ್ಟ್ ಕಮಿಟಿ ಎಂದು ರಚಿಸಿದ್ದರು. ಲಾಭದಾಯಕವಲ್ಲದ ಟೆಕ್ಸ್‌ಟೈಲ್ ಮಿಲ್ಲುಗಳನ್ನು ಪರೀಕ್ಷೆ ಮಾಡಿ ಒಂದು ರಿಪೋರ್ಟ್ ಕೊಡಿ ಎಂದು ಕೇಂದ್ರ ಅದಕ್ಕೆ ಆದೇಶನೀಡಿತು. ಅವರು ಎಂ. ಎಸ್. ಕೆ. ಮಿಲ್ ಮತ್ತು ಹುಬ್ಬಳ್ಳಿ ಕರ್ನಾಟಕ್ ಸ್ಪಿನಿಂಗ್ ಮಿಲ್ ಎರಡರ ಸಂಬಂಧದಲ್ಲಿ ಆ ಕಾರ್ಖಾನೆಗಳಲ್ಲಿ ಟೈಂ ಬಾರ್ ಆದ ಯಂತ್ರಗಳಿವೆ, ಅದನ್ನು ಸ್ಕ್ರಾಪ್ ಮಾಡಬೇಕು ಎಂದು ಹೇಳಿದರು. ಆದರೂ ಕೂಡ ನಮ್ಮ ಸರ್ಕಾರ 50 ಲಕ್ಷ ರೂಪಾಯಿ, ಒಂದು ಕೋಟಿ ರೂಪಾಯಿಗಳನ್ನು ಅಲ್ಲಿ ಕೆಲಸ ಮಾಡುವ ಮೂರು ಸಾವಿರ ಕಾರ್ಮಿಕರಿಗೆ ಅನ್ಯಾಯವಾಗುತ್ತದೆ ಎಂದು ಕೊಟ್ಟಿದ್ದಾರೆ. ಹೀಗೆ ಮಾಡಿದರೆ ಅದಕ್ಕೆ ಅರ್ಥವೇನು ? ಒಂದು ತಜ್ಞರ ಸಮಿತಿ ಕೊಟ್ಟ ವರದಿಗೆ ಸರ್ಕಾರ ಮನ್ನಣೆಯನ್ನು ಕೊಡದೆ ಯಾವುದೋ ರಾಜಕೀಯ ದೃಷ್ಟಿಯಿಂದ ಕೈಗಾರಿಕೆಗಳನ್ನು ಬೆಳೆಸಬೇಕು ಎಂದು ದೇಶದ ಹಣವನ್ನು ಸೂರೆಮಾಡಲು ಕೊಟ್ಟಿದ್ದಾರೆ ಎಂದು ನಾವು ಅರ್ಥ ಮಾಡಬಹುದಾಗಿದೆ. ಮುಖ್ಯ ಮಂತ್ರಿಗಳು ಮತ್ತು ಕೈಗಾರಿಕಾ ಮಂತ್ರಿಗಳು ಎಲ್ಲ ದೇಶದ ಜನರೂ ಬಂದು ನಮ್ಮ ರಾಜ್ಯದಲ್ಲಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡಲಿ ಎಂದು ಹೇಳುತ್ತಿದ್ದಾರೆ. ಯಾವುದೇ ಕೈಗಾರಿಕೆಯನ್ನು ನಡೆಸಬೇಕಾಗಿದ್ದರೆ ಹತ್ತಿಪ್ಪತ್ತು ಕೋಟಿ ರೂಪಾಯಿ ಬೇಕಾಗಿದ್ದರೆ ಎರಡು ಮೂರು ಕೋಟಿ ರೂಪಾಯಿಗಳನ್ನು ಪೊಲಿಟಿಕಲ್ ಎಕ್ಸ್‌ಪೆಂಡಿಚರ್ ಎಂದು ಸೇರಿಸಿಕೊಳ್ಳಬೇಕಾಗುತ್ತದೆ. ಹಾಗೆ ಮಾಡಿದರೆ ಮಾತ್ರ ಕೈಗಾರಿಕೆ ಸಿಕ್ಕುತ್ತದೆ. ಬೆಂಗಳೂರು ದ್ರಾಕ್ಷಿ ಬೆಳೆಯುವುದಕ್ಕೆ ಬಹಳ ಉತ್ತಮವಾದ ಸ್ಥಳ. ಇಲ್ಲಿ ಬೆಳೆಯುವಂಥ ದ್ರಾಕ್ಷಿ ಇನ್ನೆಲ್ಲಿಯೂ ಬೆಳೆಯುವುದಿಲ್ಲ. ನನಗೆ ಗೊತ್ತಿದ್ದಹಾಗೆ ಫ್ರೂಟ್ ಕ್ಯಾನಿಂಗ್ ಫ್ಯಾಕ್ಟರಿ ಕೊಂಡಮೋಹನ್‌ರಿಗೆ ವೈನ್ ಮಾಡಲು ಲೈಸನ್ಸ್ ಕೊಡಲು ಅಭಯ ಕೊಟ್ಟರು. ಕೊನೆಗೆ ಲೈಸೆನ್ಸ್ ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದರು. ಒಂದು ಕಾರ್ಖಾನೆಯನ್ನು ಕೊಂಡುಕೊಂಡದ್ದಲ್ಲದೆ 10 ಲಕ್ಷ ರೂಪಾಯಿ ಹಣವನ್ನು ಹೂಡಿ ದ್ರಾಕ್ಷಿ ಬೆಳೆಸಲು ಒಂದು ಜಮೀನನ್ನೂ ತೆಗೆದುಕೊಂಡರು, ಅದಕ್ಕೆ ಬೇಕಾದ ಪ್ಲಾನ್ ಮಾಡಿಸಿ ಬೇಕಾದಷ್ಟು ಹಣವನ್ನು ಖರ್ಚು ಮಾಡಿದರು. ಆದರೂ ಕೂಡ ಅವರಿಗೆ ಕೊಟ್ಟ ವಚನವನ್ನು ಪಾಲಿಸಲಿಲ್ಲ. ಅವರು ಕೊನೆಗೆ ಬೊಂಬಾಯಿ ಪ್ರಾಂತಕ್ಕೆ ಹೋಗಿ ಅಲ್ಲಿ ವೈನ್ ಕಾರ್ಖಾನೆಯನ್ನು ಸ್ಥಾಪನೆ ಮಾಡಿದ್ದಾರೆ. ಅದೇ ರೀತಿಯಲ್ಲಿ ಷಾ ವಾಲೇಸ್ ಕಂಪೆನಿಯವರು ಒಂದು ಅರ್ಜಿಯನ್ನು ಹಾಕಿದರು. ಯಾರೋ ಒಬ್ಬ ಎಕ್ಸೈಸ್ ಕಂಟ್ರಾಕ್ಟರಿದ್ದಾರೆ, ಆತ ಏನು ಸಲಹೆ ಕೊಡುತ್ತಾನೆ ಅದರ ಪ್ರಕಾರ ಲೈಸೆನ್ಸ್ ಕೊಡಬೇಕು. ಇಂಥ ನೀತಿಯಿಂದಾಗಿ ದೇಶದ ಸಂಪನ್ಮೂಲಗಳು ಹೆಚ್ಚಾಗುವುದಕ್ಕೆ, ದೇಶದ ಐಶ್ವರ್ಯ ಹೆಚ್ಚಾಗುವುದಕ್ಕೆ ಅವಕಾಶವಿಲ್ಲ, ಅದನ್ನು ಹೆಚ್ಚು ಮಾಡಬೇಕೆಂಬ ಭಾವನೆಯೂ ಇಲ್ಲ. ಯಾರೋ ಎಕ್ಸೈಸ್ ಕಂಟ್ರಾಕ್ಟರಿಗೆ ಲೈಸೆನ್ಸ್ ಕೊಟ್ಟು ಅವರು ಕಾರ್ಖಾನೆಯನ್ನು ಸರಿಯಾಗಿ ತೆರೆಯಲಿಲ್ಲ. ಅದಕ್ಕೆ ಬೇರೆಯವರು ಬರಬಾರದೆಂಬುದೇ ಮುಖ್ಯ ಉದ್ದೇಶ. ತಾತಾ ಫಿನ್ಲೇ ಕಂಪೆನಿಯವರು ಎರಡು ಕೋಟಿ

(ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ)

ರೂಪಾಯಿ ಹಾಕಿ ಒಂದು ಟೀ ಕೆಂಪೆನಿ ಪ್ರಾರಂಭ ಮಾಡಿ, ಅದಕ್ಕೆ ಅಕ್ಟ್ರಾಯಿಯಿಂದ ವಿನಾಯಿತಿ ಕೊಡಿ, ಇಲ್ಲದೆ ಇದ್ದರೆ ಬ್ರೂಕ್ ಬಾಂಡ್ ಮತ್ತು ಇತರ ಕಂಪೆನಿಗಳೊಂದಿಗೆ ಪೈಪೋಟಿ ಮಾಡುವುದಕ್ಕಾಗುವುದಿಲ್ಲ ಎಂದು ಕೇಳಿದರು. ಎಷ್ಟು ಮನವಿ ಮಾಡಿದರೂ ಸರ್ಕಾರದ ಮನಸ್ಸಿಗೆ ಬರಲಿಲ್ಲ. ಅವರು ಆ ಕಾರ್ಖಾನೆಯನ್ನು ಮುಚ್ಚಿದರು. ಒಂದು ಕಡೆ ಕಾರ್ಖಾನೆಗಳನ್ನು ಸ್ಥಾಪನೆ ಮಾಡಿ ಎಂದು ಬೇರೆ ರಾಜ್ಯಗಳವರಿಗೆ ಆಹ್ವಾನ ನೀಡಿ ಮುಂದೆ ಬರುವವರಿಗೆ ಡಿಸ್‌ಕರೇಜ್ ಮಾಡಿ ಅವರು ಹಾಕಿರುವ ಬಂಡವಾಳ ಕಳೆದುಕೊಳ್ಳುವ ಪರಿಸ್ಥಿತಿ ಬಂದರೆ ಸರ್ಕಾರದ ನೀತಿ ಏನು ಎಂದು ಹೇಳುವುದಕ್ಕೆ ಆಗುತ್ತದೆ! ಕೈಗಾರಿಕೆಗಳು ಬೆಳೆಯಬೇಕಾಗಿದ್ದರೆ ಇಡೀ ಮೈಸೂರು ರಾಜ್ಯದಲ್ಲಿ ಸರ್ಕಾರಿ ಕ್ಷೇತ್ರದಲ್ಲಿ ಯಾವ ಯಾವ ಕೈಗಾರಿಕೆಗಳಿವೆ ಅವುಗಳ ಥರೋ ಇನ್‌ವೆಸ್ಟಿಗೇಷನ್ ಆಗಬೇಕು. ಪ್ರತಿಯೊಂದು ಕಡೆ ಕೂಡ ಮೋಸವಿದೆ. ಸರ್ಕಾರಕ್ಕೆ ಕೈಗಾರಿಕೆಗಳ ಬಗ್ಗೆ ಏನು ದೃಷ್ಟಿ ಇದೆ ಅದು ಬದಲಾಗಬೇಕು. ಕೇಂದ್ರ ಸರ್ಕಾರ ಕೆಲವು ವಿಚಾರಗಳಲ್ಲಿ ನಮ್ಮ ಕೈ ಬಿಟ್ಟಿದೆ. ಕೇಂದ್ರ ಸರ್ಕಾರ ತನ್ನ ಧೋರಣೆಯನ್ನು ನಿಜವಾಗಿಯೂ ಬದಲಾವಣೆ ಮಾಡಬೇಕು. ನಮ್ಮ ಸರ್ಕಾರ ಕೂಡ ತನ್ನ ದೃಢ ನಿಲುವನ್ನು ತೋರಿಸದೆ ಇದ್ದರೆ ಕೇಂದ್ರ ಸರ್ಕಾರ ಹಿಂದಿನಿಂದ ಒದ್ದ ಹಾಗೆ ಈಗಲೂ ಒದ್ದೀತು. 2,400 ಕೋಟಿ ರೂಪಾಯಿಗಳನ್ನು ಪಬ್ಲಿಕ್ ಸೆಕ್ಟಾರಿನಲ್ಲಿ ಬಂಡವಾಳವಾಗಿ ಹಾಕಿದರೂ ಕೂಡ ಮೈಸೂರು ದೇಶಕ್ಕೆ ಕೇವಲ 40 ಕೋಟಿ ರೂಪಾಯಿ ಮಾತ್ರ ಕೊಟ್ಟಿದ್ದಾರೆಂದರೆ ಕೇಂದ್ರ ಸರ್ಕಾರದ ನಿಲುವು ಏನು ಎಂದು ಕೇಳಬೇಕಾಗುತ್ತದೆ.

ಎಲ್ಲಕ್ಕಿಂತ ಮುಖ್ಯವಾದುದು ರೇಷ್ಮೆ ಉದ್ಯಮ. ಇದು ಮೈಸೂರು ದೇಶದಲ್ಲಿ ಮೊದಲಿನಿಂದಲೂ ಬೆಳೆದು ಬರುತ್ತಿದೆ. ಇಂಡಿಯಾ ದೇಶದಲ್ಲಿ ಉತ್ಪತ್ತಿಯಾಗುವ ರೇಷ್ಮೆಯಲ್ಲಿ ಸೇಕಡ 75 ಭಾಗ ಮೈಸೂರು ರಾಜ್ಯದಲ್ಲಿ ಉತ್ಪತ್ತಿಯಾಗುತ್ತದೆ. ರೇಷ್ಮೆ ಉದ್ಯಮಕ್ಕೆ ಅಗತ್ಯವಾಗಿ ಈವೊತ್ತು ಬೇಕಾಗಿರುವುದು ಸಂಶೋಧನೆ. ಸಂಶೋಧನೆಯಾಗದೆ ಇದ್ದರೆ ರೇಷ್ಮೆ ಉದ್ಯಮ ಅಷ್ಟು ಚೆನ್ನಾಗಿ ನಡೆಯುವುದಿಲ್ಲ. ಮೈಸೂರು ರಾಜ್ಯದಲ್ಲಿ ಪ್ರಾರಂಭ ಆಗಬೇಕಾಗಿದ್ದ ರೀಸರ್ಚ್ ಸೆಂಟರ್ ಬೇರೆ ಕಡೆಗೆ ಹೋಯಿತು. ಕೇಂದ್ರ ಸರ್ಕಾರ ಈ ವಿಚಾರದಲ್ಲಿ ಕೂಡ ನಮ್ಮ ಕೈ ಬಿಟ್ಟಿದೆ. ರೇಷ್ಮೆ ಉದ್ಯಮದ ಭವಿಷ್ಯ ಬಹಳ ಚೆನ್ನಾಗಿದೆ. ಜಪಾನ್ ದೇಶದಲ್ಲಿ ರೇಷ್ಮೆ ಉದ್ಯಮದ ಕೈ ಬಿಡುವವರಾಗಿದ್ದಾರೆ. ಅದಕ್ಕೆ ಕಾರಣವಾದರೂ ಇಷ್ಟೆ. ಜಪಾನ್ ದೇಶದಲ್ಲಿ ಕೊನೇ ಪಕ್ಷ ಪ್ರತಿಯೊಬ್ಬ ಕೂಲಿಗಾರರಿಗೆ ದಿನಕ್ಕೆ ಹತ್ತು ರೂಪಾಯಿ ಬರಬೇಕು ಇಲ್ಲದೆ ಇದ್ದರೆ ಅಂಥ ಉದ್ಯಮವನ್ನು ಮಾಡಬಾರದು ಎಂದು ಜಪಾನ್ ಸರ್ಕಾರ ನಿರ್ಧಾರ ಮಾಡಿದೆ. ಆ ನಿರ್ಧಾರದಿಂದ ಮೈಸೂರಿನ ರೇಷ್ಮೆ ಉದ್ಯಮಕ್ಕೆ ಬಹಳ ಉತ್ತಮ ಭವಿಷ್ಯವಿದೆ. ಹಿಂದೆ ಉಪಮಂತ್ರಿಯವರಾಗಿದ್ದ ದಯಾನಂದ ಸಾಗರ್ ಅವರು ಬಜೆಟ್ ಮೇಲಿನ ಚರ್ಚೆಗೆ ಉತ್ತರ ಕೊಡುತ್ತ, 50 ಕೋಟಿ ರೂಪಾಯಿಗಳ ಯೋಜನೆಯೊಂದನ್ನು ಕೇಂದ್ರ ಸರ್ಕಾರಕ್ಕೆ ಕಳಿಸಿರುವುದಾಗಿಯೂ ಅದರಲ್ಲಿ ಹೊಸ ಹೊಸ ಯೋಜನೆಗಳನ್ನು ಅಳವಡಿಸಿರುವುದಾಗಿಯೂ ಹೇಳಿದ್ದರು. ಕೇಂದ್ರ ಸರ್ಕಾರದವರು ಅದಕ್ಕೆ ಒಗ್ಗೆಗೆ ಕೊಡಬಹುದು ಎನ್ನುವ ಭಾವನೆಯಿಂದ ಹೇಳುತ್ತೇನೆ, ನಮ್ಮ ಸರ್ಕಾರದವರು ಕೇಂದ್ರ ಸರ್ಕಾರಕ್ಕೆ ಕಳಿಸಿರುವ 50 ಕೋಟಿ ರೂಪಾಯಿಗಳ ಯೋಜನೆಗೆ ಮಂಜೂರಾತಿಯನ್ನು ದೊರಕಿಸಿಕೊಂಡು ಕಾರ್ಯಾರಂಭ ಮಾಡುತ್ತಾರೆಂದು ನಂಬಿದ್ದೇನೆ. ಅಧ್ಯಕ್ಷರು ಕೊಟ್ಟ ಕೆಲವು ಕಾಲಕ್ಕೋಸ್ಕರ ನಾನು ಅವರಿಗೆ ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

[MR. SPEAKER in the Chair]

† ಶ್ರೀ ಡಿ. ದೇವರಾಜ ಅರಸ್ (ಹುಣಸೂರು).—ಸ್ವಾಮಿ, ಈಗತಾನೇ ಶ್ರೀಮಾನ್ ರಾಜಯ್ಯ ಶೆಟ್ಟರು ಹೇಳಿದ ಮಾತನ್ನು ಕೇಳಿದೆ. ನಮ್ಮ ಮಾನ್ಯ ಕೈಗಾರಿಕಾ ಸಚಿವರು ಇಟ್ಟಿರತಕ್ಕ ಬೇಡಿಕೆಗಳನ್ನು ಅವರು ವಿರೋಧಿಸಿ ಮೈಸೂರು ದೇಶದಲ್ಲಿ ಕೈಗಾರಿಕೆಗಳೊಂದೂ ಸರಿಯಾಗಿ ನಡೆಯುತ್ತಿಲ್ಲ ಎನ್ನುವ ರೀತಿಯಲ್ಲಿ ಮಾತನಾಡಿದರು. ಕೆಲವು ದೃಷ್ಟಾಂತಗಳನ್ನು ಕೊಟ್ಟು ಭದ್ರಾವತಿ ಕಾರ್ಖಾನೆ ವಿಚಾರ, ನ್ಯೂ ಗವರ್ನ್ಮೆಂಟ್ ಎಲೆಕ್ಟ್ರಿಕ್ ಫ್ಯಾಕ್ಟರಿ ವಿಚಾರ ಇನ್ನೂ ಕೆಲವು ಕೈಗಾರಿಕೆಗಳ ವಿಚಾರ ಇದನ್ನೆಲ್ಲ ಹೇಳಿ ಅದರ ಬಗ್ಗೆ ಆ ಕಾರ್ಖಾನೆಗಳು ಸರಿಯಾಗಿ ನಡೆಯುತ್ತಿಲ್ಲ, ಲಾಭ ಬರುತ್ತಿಲ್ಲ, ಅಲ್ಲಿ ಕೆಲವು ಅನೀತಿ ಅಕ್ರಮಗಳು ನಡೆಯುತ್ತಿವೆ ಎನ್ನುವ ವಿಷಯಗಳನ್ನೆಲ್ಲ ಪ್ರಸ್ತಾಪ ಮಾಡಿದರು. ಅವರು ಹೇಳಿದಂತಹ ಕೆಲವು ಮಾತುಗಳಲ್ಲಿ ಸ್ವಲ್ಪಮಟ್ಟಿಗೆ ಗಮನಿಸಬೇಕಾದಂಥ ಅಂಶಗಳಿರಬಹುದು. ಆದರೆ ಅವರು ಮಾಡಿದಂಥ ವಾದದಲ್ಲಿ ಪ್ರತಿಯೊಂದು ಕೈಗಾರಿಕೆಯ ವಿಚಾರ ಸಂಪೂರ್ಣವಾಗಿ ತಿಳಿದು ಅವರು ವಿಷಯಗಳನ್ನು ಇಲ್ಲಿ ಇಟ್ಟಿಲ್ಲ ಎಂದು ನನಗನ್ನಿಸುತ್ತದೆ. ನಮ್ಮ ಮೈಸೂರು

ದೇಶದಲ್ಲಿ ಸರ್ಕಾರದವರು ನೇರವಾಗಿ ಇಲಾಖೆಯ ಮುಖೇನ ನಡೆಸತಕ್ಕ ಕೆಲವು ಕೈಗಾರಿಕೆಗಳಿವೆ, ಸರ್ಕಾರದವರು ಸಹಾಯ ಮಾಡಿ ನಡೆಸತಕ್ಕ ಕೈಗಾರಿಕೆಗಳಿವೆ ಸ್ಟೇಟ್ ಏಡೆಡ್ ಇಂಡಸ್ಟ್ರೀಸ್, ಮತ್ತೆ ಪಬ್ಲಿಕ್ ಸೆಕ್ಟಾರ್ ಇಂಡಸ್ಟ್ರೀಸ್, ಕಾರ್ಪೊರೇಷನ್, ಕಂಪೆನಿ ಇಂಥದ್ದನ್ನು ಮಾಡಿ ಸಂಪೂರ್ಣ ಬಂಡವಾಳವನ್ನು ಹಾಕಿ ಅದಕ್ಕೆ ಸಂಪೂರ್ಣ ಸ್ವಯಂಮಾಧಿಕಾರ ಕೊಟ್ಟು ನಡೆಸತಕ್ಕ ಕೆಲವು ಕೈಗಾರಿಕೆಗಳಿವೆ. ಸರಕಾರಿ ಬಂಡವಾಳ ಒಂದು ಭಾಗವಿದ್ದರೆ ಖಾಸಗಿಯವರದೊಂದು ಭಾಗ ಹಾಕುವುದು, ಹೀಗೆ ಸ್ಟೇಟ್ ಏಡ್ ಇಂಡಸ್ಟ್ರೀಸ್‌ನಲ್ಲಿ ಎರಡು ಭಾಗ ಮಾಡಬಹುದು. ಸೇಕಡ 50ಕ್ಕಿಂತ ಹೆಚ್ಚು ಸರಕಾರ ಬಂಡವಾಳ ಹಾಕಿ ತನ್ನ ಮೇಲ್ವಿಚಾರಣೆಯಲ್ಲಿ, ಹತೋಟಿಯಲ್ಲಿ ತನ್ನ ಕೈಕೆಳಗೆ ಇಟ್ಟುಕೊಂಡಿರುವುದಕ್ಕೆ ರೆಂಕೋ ಒಂದು ಉದಾಹರಣೆ. ಮತ್ತು ಸೇಕಡ 50 ಕ್ಕಿಂತ ಕಡಮೆ ಬಂಡವಾಳ ಹಾಕಿರುವುದೂ ಕೆಲವು ಇದೆ. ಹೀಗೆ ಮುಖ್ಯವಾಗಿ ಮೂರು ರೀತಿಯ ಉದ್ಯಮಗಳಿವೆ. ಸರಕಾರ ನೇರವಾಗಿ ನಡೆಸುವ ಕೈಗಾರಿಕೆಗಳಲ್ಲಿ ಸರಕಾರ ಕೊಟ್ಟಿರುವ ಮಾಹಿತಿ ಪ್ರಕಾರ, ರಿವ್ಯೂ ಆಫ್ ವರ್ಕ್ಸ್ ಆಫ್ ಗವರ್ನಮೆಂಟ್ ಡಿಪಾರ್ಟ್‌ಮೆಂಟ್ಸ್ ಎಂಬ ಪುಸ್ತಕದಲ್ಲಿ ಸರಕಾರಿ ಎಲೆಕ್ಟ್ರಿಕ್ ಫ್ಯಾಕ್ಟರಿ ನಷ್ಟದಲ್ಲಿ ಕೆಲಸ ಮಾಡುತ್ತಿದೆ, ಹಾಸನದಲ್ಲಿರುವ ಮೈಸೂರು ಇಂಪ್ಲಿಮೆಂಟ್ಸ್ ಫ್ಯಾಕ್ಟರಿಯಲ್ಲಿ 67-68ರಲ್ಲಿ ನಷ್ಟವಾಗಿದೆ, ಭದ್ರಾವತಿ ಕಾರ್ಖಾನೆಯಲ್ಲಿ ನಷ್ಟವಾಗಿಲ್ಲ. ಗವರ್ನಮೆಂಟ್ ನ್ಯೂ ಎಲೆಕ್ಟ್ರಿಕ್ ಫ್ಯಾಕ್ಟರಿ ಈಗಾಗಲೆ ಪ್ರಾರಂಭವಾಗಿದೆ. ಅದರ ಬಗ್ಗೆ ರಾಜಯ್ಯ ಶೆಟ್ಟರು ಬಹಳವಾಗಿ ಟೀಕೆ ಮಾಡಿದ್ದಾರೆ. ಅದರ ಬಗ್ಗೆ ಹೆಚ್ಚು ಮಾಹಿತಿ ಪಡೆದು ಅದರ ಆಗುಹೋಗುಗಳನ್ನು ಚೆನ್ನಾಗಿ ವಿಚಾರ ಮಾಡಿ ಆಮೇಲೆ ಅದರ ವಿದ್ಯಮಾನಗಳ ಬಗ್ಗೆ ಟೀಕೆ ಮಾಡುವುದು ಒಳ್ಳೆಯದು ಎಂದು ಅವರಲ್ಲಿ ನಾನು ವಿನಂತಿ ಮಾಡುತ್ತೇನೆ. ನನಗೆ ತಿಳಿದಹಾಗೆ ಗವರ್ನಮೆಂಟ್ ನ್ಯೂ ಎಲೆಕ್ಟ್ರಿಕ್ ಫ್ಯಾಕ್ಟರಿ ಬಹಳ ಬೇಗ ಕಾರ್ಯರೂಪಕ್ಕೆ ಬಂದಿದೆ ಮತ್ತು ಅದಕ್ಕೆ ಬೇಕಾಗಿರುವ ಕಟ್ಟಡಗಳೂ ಕೂಡ ಕಡಮೆ ವೆಚ್ಚದಲ್ಲಿ ಆಗಿವೆ. ಹಾಗೆಯೇ ಹೊರದೇಶಕ್ಕೆ ಈ ಹೊಸ ಕಾರ್ಖಾನೆಯಲ್ಲಿ ಉತ್ಪತ್ತಿಯಾಗಿರುವ ಸಾಮಾನುಗಳು ಹೋಗುವುದಕ್ಕೆ ಪ್ರಾರಂಭವಾಗಿದೆ. ಇಂಡಿಯಾ ದೇಶದಲ್ಲಿ ಇಂಥ ದೊಡ್ಡ ಪ್ರಮಾಣದ ಎಲೆಕ್ಟ್ರಿಕ್ ಫ್ಯಾಕ್ಟರಿಗಳು ಎರಡಿವೆ, ಒಂದು ಭೂಪಾಲ್‌ನಲ್ಲಿದೆ, ಇನ್ನೊಂದು ಮೈಸೂರಿನಲ್ಲಿದೆ. ಈ ಎರಡನ್ನೂ ಹೋಲಿಕೆ ಮಾಡಿದರೆ, ಇವಕ್ಕೆ ಹಾಕಿರುವ ಬಂಡವಾಳ ನೋಡಿದರೆ ಭೂಪಾಲ್‌ನಲ್ಲಿರುವುದಕ್ಕಿಂತ ನಮ್ಮದು ಎಲ್ಲಾ ವಿಧದಲ್ಲೂ ಉತ್ತಮವಾಗಿ ಕೆಲಸ ಮಾಡುತ್ತಿದೆ ಎಂದು ತಿಳಿದುಬಂದಿದೆ. ಯಾವುದೇ ಒಂದು ಹೊಸ ಕಾರ್ಖಾನೆ ಅಸ್ತಿತ್ವಕ್ಕೆ ಬಂದಾಗ ಅದರಿಂದ ಲಾಭ ಬರಬೇಕೆಂದು ಹೇಳುವ ಮಾತು ಒಪ್ಪತಕ್ಕದ್ದಲ್ಲ. ಪ್ರಾರಂಭದಲ್ಲಿ ಕೊಂಡ ಮೆಷೀನರಿ, ಕಟ್ಟಡಗಳು ಮತ್ತು ಟ್ರಾನ್ಸ್‌ಪೋರ್ಟ್ ಮುಂತಾದುವುಗಳಮೇಲೆ ಡಿಪ್ರೀಸಿಯೇಷನ್ ಮತ್ತು ರಿಬೇಟ್ ಕಳೆಯಬೇಕು. ಇದನ್ನು ಕಳೆದು ಏಕ ಕಾಲದಲ್ಲಿ ಉತ್ಪತ್ತಿಯಾಗುವ ಸಾಮಾನುಗಳಿಂದ ಲಾಭ ಬರಬೇಕೆಂದರೆ ಕಷ್ಟವಾಗುತ್ತದೆ. ಭದ್ರಾವತಿ ಕಾರ್ಖಾನೆಗೆ ದೊಡ್ಡ ಪ್ರಮಾಣದಲ್ಲಿ ಸುಮಾರು 50 ಕೋಟಿ ಬಂಡವಾಳ ಹಾಕಿದೆ. ಅದನ್ನು ವ್ಯಾಪಕವಾಗಿ ವಿಸ್ತರಿಸುತ್ತಿದ್ದಾಗ ಅದರಿಂದ ಲಾಭ ಏಕ ಕಾಲದಲ್ಲಿ ನಾವು ನಿರೀಕ್ಷೆ ಮಾಡುವುದು ಸರಿಯಲ್ಲ. ಹಳೆಯ ಕಾರ್ಖಾನೆಯೇನಿದೆ ಗವರ್ನಮೆಂಟ್ ಎಲೆಕ್ಟ್ರಿಕ್ ಫ್ಯಾಕ್ಟರಿ ಬೆಂಗಳೂರು ಅದು 66-67 ರವರೆಗೆ ಲಾಭದಾಯಕವಾಗಿ ನಡೆಯುತ್ತಿತ್ತು. 67-68ರಲ್ಲಿ ಅದರಲ್ಲಿ 22ಲಕ್ಷ ನಷ್ಟವಾಗಿದೆ, ಮಂತ್ರಿಗಳು 19 ಲಕ್ಷ ಎಂದು ಹೇಳುತ್ತಿದ್ದಾರೆ. ರೆಂಕೋದಲ್ಲಿ ಕೂಡ ನಷ್ಟವಾಗುತ್ತಿದೆ, ಅದರಲ್ಲಿ ಸೇಕಡ 60 ಕ್ಕಿಂತ ಹೆಚ್ಚು ಬಂಡವಾಳ ಸರಕಾರದ್ದೇ ಇದೆ. ಅದರಮೇಲೆ ಸರಕಾರದ ಹತೋಟಿಯಿದೆ. ಹಾಸನದ ಇಂಪ್ಲಿಮೆಂಟ್ಸ್ ಫ್ಯಾಕ್ಟರಿಯಲ್ಲಿ ನಷ್ಟವಾಗುವುದಕ್ಕೆ ಕಾರಣವೇನು? ಗವರ್ನಮೆಂಟ್ ಎಲೆಕ್ಟ್ರಿಕ್ ಫ್ಯಾಕ್ಟರಿಯಲ್ಲಿ, ರೆಂಕೋದಲ್ಲಿ ನಷ್ಟವಾಗುವುದಕ್ಕೆ ಕಾರಣವನ್ನು ನಾನು ವಿಚಾರ ಮಾಡಿದ್ದೇನೆ. ಕಾರಣ ಕಂಡುಹಿಡಿಯುವುದು ಸರಕಾರದ ಕರ್ತವ್ಯ. ರೆಂಕೋದಲ್ಲಿ ನಷ್ಟವಾಗುವುದಕ್ಕೆ ಕಾರಣ ಅದರಲ್ಲಿ ಉತ್ಪತ್ತಿಯಾಗುವ ಸಾಮಾನುಗಳನ್ನು ಬಿರ್ಲಾ ಕಂಪೆನಿಯಲ್ಲೂ ಉತ್ಪತ್ತಿಮಾಡಲು ಪ್ರಾರಂಭಿಸಿದ್ದಾರೆ, ಅವರ ಕಾಂಪಿಟಿಷನ್ ತಡೆಯುವುದಕ್ಕೆ ಸಾಧ್ಯವಿಲ್ಲವಾಗಿದೆ, ರೆಂಕೋದವರ ಕಾಸ್ಟ್ ಆಫ್ ಪ್ರೊಡಕ್ಷನ್ ಜಾಸ್ತಿಯಾಗಿದೆ, ಬಿರ್ಲಾ ಕಂಪೆನಿಯ ಕಾಸ್ಟ್ ಆಫ್ ಪ್ರೊಡಕ್ಷನ್ ಕಡಮೆಯಾಗಿದೆ. ಇದೊಂದು ಮುಖ್ಯ ಕಾರಣ. ಬಿರ್ಲಾ ಕಂಪೆನಿಗೆ ಇದೇ ಸಾಮಾನುಗಳನ್ನು ಮಾಡುವುದಕ್ಕೆ ಲೈಸೆನ್ಸ್ ಕೊಟ್ಟಿರುವುದು ಕೇಂದ್ರ ಸರಕಾರ.

ಶ್ರೀ ಎಚ್. ಎನ್. ನಂಜೇಗೌಡ.—ನೀವೂ ಉತ್ಪತ್ತಿಯ ಖರ್ಚನ್ನು ಕಡಮೆ ಮಾಡಿ.

ಶ್ರೀ ಡಿ. ದೇವರಾಜ ಅರಸ್.—ನಾನು ಅದನ್ನು ಆಳವಾಗಿ ಅಭ್ಯಾಸ ಮಾಡಿಲ್ಲ, ಮಂತ್ರಿಗಳಿಗೆ ಅದು ಸಂಬಂಧಪಟ್ಟಿದೆ, ಅವರು ಉತ್ತರ ಹೇಳಬಹುದು. ಕಾಸ್ಟ್ ಆಫ್ ಪ್ರೊಡಕ್ಷನ್ ಹೇಗಿರಬೇಕೆಂಬುದು ಅದೊಂದು ದೊಡ್ಡ ಸಮಸ್ಯೆ. ಅದನ್ನು ಇಲ್ಲಿ ಹೇಳುವುದಕ್ಕೆ ಸಾಧ್ಯವಿಲ್ಲ. ಇದಕ್ಕೆ ನಾನಾ ವಿಷಯಗಳನ್ನು ಪರಿಶೀಲಿಸಬೇಕು. ಒಟ್ಟಿನಲ್ಲಿ ಬೇರೆ ಕಡೆಯ ಕಾಂಪಿಟಿಷನ್ ನಷ್ಟಕ್ಕೆ

(ಶ್ರೀ ಡಿ. ದೇವರಾಜ ಅರಸ್)

ಮುಖ್ಯ ಕಾರಣ ಎಂದು ನಾನು ಹೇಳಿದೆ. ಇದೊಂದೇ ಕಾರಣವೆಂದು ಹೇಳುವುದಕ್ಕಾಗುವುದಿಲ್ಲ. ಕೇಂದ್ರ ಸರಕಾರದ ಕೈಗಾರಿಕಾ ನೀತಿ, ಅದು ಲೈಸೆನ್ಸ್ ಕೊಡುವ ನೀತಿ ಇರುವ ಕೈಗಾರಿಕೆ ಬೆಳೆಯುವುದಕ್ಕೆ ಅಥವಾ ಕುಂಠಿತವಾಗುವುದಕ್ಕೆ ಬಹಳ ಮಟ್ಟಿಗೆ ಕಾರಣವಾಗಿದೆ. ಇದಕ್ಕೆ ರಾಜ್ಯ ಸರಕಾರ ಯಾವರೀತಿ ಕೇಂದ್ರ ಸರಕಾರದೊಡನೆ ವ್ಯವಹರಿಸಬೇಕು ಎಂಬುದನ್ನು ತೀವ್ರವಾಗಿ ಆಲೋಚಿಸಬೇಕಾಗಿದೆ. ಗವರ್ನಮೆಂಟ್ ಎಲೆಕ್ಟ್ರಿಕ್ ಫ್ಯಾಕ್ಟರಿಯಲ್ಲಿ ನಷ್ಟವಾಗುತ್ತಿದೆ, ಇದಕ್ಕೇನು ಮಾಡಬೇಕೆಂಬುದನ್ನು ಯೋಚನೆ ಮಾಡಬೇಕಾಗಿದೆ. ಸಿದ್ದಯ್ಯನವರು ಮಾತನಾಡುತ್ತಾ ಮೈಸೂರು ಸರಕಾರದ ಕೈಗಾರಿಕಾ ನೀತಿ ಏನೆಂಬುದನ್ನು ಹಣಕಾಸಿನ ಸಚಿವರ ಭಾಷಣದಲ್ಲಿ ನಮೂದಿಸಿರುವುದನ್ನು ಹೇಳಿ ವಿವರಿಸಿದ್ದಾರೆ, ಅದನ್ನು ಪೂರ್ತಿಯಾಗಿ ಅವರು ಓದಿರುವುದರಿಂದ ಪುನಃ ಹೇಳಬೇಕಾಗಿಲ್ಲ. ಇಲ್ಲಿ ಎಲ್ಲಾರೂ ಕೈಗಾರಿಕೆಗಳಲ್ಲಿ ನಷ್ಟವಾಗುತ್ತಿದೆ, ಅವನ್ನು ಖಾಸಗಿ ಬಂಡವಾಳ ಗಾರರಿಗೆ ವಹಿಸಿ ಅವರಿಗೆ ಉತ್ತೇಜನ ಕೊಡಬೇಕು, ಸಹಾಯ ಮಾಡಬೇಕೆಂದು ಹೇಳಿದ್ದಾರೆ. ಇದು ದೊಡ್ಡ ನೀತಿಯ ಪ್ರಶ್ನೆ, ಕೇಂದ್ರದ ಪಾರ್ಲಿಮೆಂಟಿನಲ್ಲಿ ಕೈಗಾರಿಕಾ ನೀತಿ ಏನೆಂಬುದನ್ನು 56 ರಲ್ಲೇ ಒಂದು ಠರಾವಿನ ಮೂಲಕ ವಿವರಿಸಿದ್ದಾರೆ. ಯಾವ ಕೈಗಾರಿಕೆಗಳನ್ನು ಸರಕಾರದವರು ನೇರವಾಗಿ ಸೋಷಿಯಲೈಜ್ ಮಾಡಿ ನಡೆಸಬೇಕು, ಯಾವ ಕೈಗಾರಿಕೆಗಳನ್ನು ಬಂಡವಾಳಗಾರರು, ಖಾಸಗಿಯವರು ಮತ್ತು ಸರಕಾರದವರು ಸೇರಿ ನಡೆಸಬೇಕು, ಯಾವ ಕೈಗಾರಿಕೆಯನ್ನು ಖಾಸಗಿ ಯವರಿಗೆ ಬಿಡಬೇಕು ಎಂದು ಆ ಠರಾವಿನಲ್ಲಿ ಮೂರು ಭಾಗ ಮಾಡಿ, ಒಂದು ಷೆಡ್ಯೂಲನಲ್ಲಿ ಎ. ಬಿ. ಸಿ ಎಂದು ವಿಂಗಡಿಸಿ ಯಾವ ಕ್ಷೇತ್ರದಲ್ಲಿ ಯಾರು ಕೆಲಸ ಮಾಡಬೇಕು ಎಂಬುದನ್ನು ಹೇಳಿದ್ದಾರೆ. ಠರಾವು ಎಷ್ಟು ಪಾಸ್ ಮಾಡಿದರೂ ಆ ಠರಾವು ಯಾವ ರೀತಿ ಇದೆ ಎಂಬುದನ್ನು ರಾಜ್ಯ ಸರಕಾರದವರೂ ನೋಡುತ್ತಿಲ್ಲ, ಕೇಂದ್ರ ಸರಕಾರದವರೂ ನೋಡುತ್ತಿಲ್ಲ. ಇದರ ಗಮನವನ್ನು ನಾವು ಸದಾ ಕಾಲದಲ್ಲೂ ಇಟ್ಟುಕೊಳ್ಳದೆ ನಮ್ಮ ಗುರಿ ಏನು, ನಮ್ಮ ಆರ್ಥಿಕ ನೀತಿ ಏನು ಯಾವ ರೀತಿ ಗುರಿಸಾಧನೆಗೆ ಹೊರಟಿದ್ದೇವೆ ಎಂಬ ವಿಷಯಗಳನ್ನೆಲ್ಲಾ ಗಮನದಲ್ಲಿಟ್ಟು ಕೊಳ್ಳದೆ ಒಂದು ಸಾರಿ ಕಷ್ಟ ಬಂದಾಗ ತಾತ್ಕಾಲಿಕವಾಗಿ ತಪ್ಪಿಸಿಕೊಳ್ಳುವುದಕ್ಕೆ ಏನೋ ಒಂದು ಠರಾವು ಮಾಡಿ ಅನಂತರ ಮರೆತುಹೋಗತಕ್ಕ ಸಂದರ್ಭ ಇರುತ್ತದೆ. ಠರಾವಿನ ದೃಷ್ಟಿ ಏನು; ನಮ್ಮ ಕೈಗಾರಿಕೆಗಳ ನೀತಿ ಏನು ಇಟ್ಟುಕೊಳ್ಳಬೇಕೆಂಬುದನ್ನು ಸರ್ಕಾರದವರು ತೀವ್ರವಾಗಿ ಪರ್ಯಾಲೋಚನೆ ಮಾಡಬೇಕಾಗುತ್ತದೆ. ಮಾನ್ಯ ಮಂತ್ರಿಗಳು ಕಾಷನ್ ಆಗಿ ಒಂದು ಮಾತು ಹೇಳಿದ್ದಾರೆ. ಅದೇನೆಂದರೆ :

> "If it is found that any undertaking cannot be made to run on profit, Government will not hesitate to come to some arrangement with private entrepreneurs in the interest of industry and public finances" ಎಂದು.

4-30 P.M.

ಆಯಿತು, ಮನಾಪಲಿಸ್ಟ್ ಟೆಂಡೆನ್ಸಿ ಡೆವೆಲಪ್ ಆಗದಹಾಗೆ ನೋಡಿಕೊಳ್ಳುವುದರ ಜೊತೆಗೆ ಈ ವ್ಯವಹಾರ ಏನು ಮಾಡುತ್ತೇವೆ ಎಂದು ಹೇಳಿದ್ದಾರೆ—ಒಬ್ಬರಿಗೆ ಇದರ ಬಗ್ಗೆ ಸಂಪೂರ್ಣ ಅಧಿಕಾರ ಸಿಕ್ಕದ ಹಾಗೆ ನೋಡಿಕೊಳ್ಳುತ್ತಾರೆಯೋ ಇಲ್ಲವೋ ಇಲ್ಲೇನೋ ನಮೂದು ಮಾಡಿದ್ದಾರೆ ಇದನ್ನು ಕಾರ್ಯದಲ್ಲಿ ಹೇಗೆ ಮಾಡುತ್ತಾರೆ ಎಂಬುದನ್ನು ನಾವು ನೋಡಿಯೇ ಯೋಚನೆ ಮಾಡ ಬೇಕಾಗಿ ಬರುತ್ತದೆ. ಇನ್ನೊಂದು ಮಾತು ಏನು ಹೇಳಿದ್ದಾರೆ ಎಂದರೆ :

> "I am glad to know that the Legislature will have a separate Committee on Public Undertakings which I hope will give timely advice for correcting lapses and getting over them."

ಈ ಒಂದು ಲೆಜಿಸ್ಲೇಚರ್‌ನಿಂದ ಪಬ್ಲಿಕ್ ಅಂಡರ್‌ಟೇಕಿಂಗ್ಸ್ ಬಗ್ಗೆ ಮಾಹಿತಿ ತಿಳಿದು ವ್ಯವಸ್ಥೆ ಮಾಡುವುದಕ್ಕೆ ಒಂದು ಸಮಿತಿ ನೇಮಕ ಮಾಡಬೇಕೆಂಬ ನೀತಿಯನ್ನು ಒಪ್ಪಿದ್ದೇವೆ ಎಂದು ಹೇಳಿ ದ್ದಾರೆ, ಸಂತೋಷ. ನಾನು ಈ ಸಂದರ್ಭದಲ್ಲಿ ಹೆಚ್ಚಾಗಿ ಈ ಕೈಗಾರಿಕಾ ನೀತಿ ಹೇಗಿರಬೇಕೆಂಬ ಬಗ್ಗೆ ವ್ಯಾಖ್ಯಾನ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಪಾರ್ಲಿಮೆಂಟಿನ ಒಂದು ನಿರ್ದೇಶನ ಬಂದಿರು ವಾಗ ವ್ಯಾಖ್ಯಾನ ಮಾಡಬೇಕಾದ ಅಗತ್ಯ ಇಲ್ಲ.

ಶ್ರೀ ಡಿ. ಎಂ. ಸಿದ್ದಯ್ಯ.—ಪಾರ್ಲಿಮೆಂಟಿನ ವ್ಯಾಖ್ಯಾನವಾಗಿದ್ದರೂ ಕೂಡ ಅಲ್ಲೂ ಅಭಿಪ್ರಾಯ ಭಿನ್ನತೆ ಇದೆ. ಅಲ್ಲೂ ಕೂಡ ಪಬ್ಲಿಕ್ ಸೆಕ್ಟರ್ ಬೇಡ ಅನ್ನತಕ್ಕ ಕದೀಮರು ಇದ್ದಾರೆ.

ಶ್ರೀ ಡಿ. ದೇವರಾಜ ಅರಸ್.—ಶ್ರೀಮಾನ್ ಸಿದ್ದಯ್ಯನವರು ಸೋಸಿಯಲಿಸ್ಟಿಕ್ ಆಬ್ಜೆಕ್ಟೀವ್ಸ್ ಈಚೆಗೆ ಗಮನ ಇರತಕ್ಕವರು ಅದರಲ್ಲಿ ನಂಬಿಕೆ ಇರತಕ್ಕವರು, ಎಲ್ಲರಿಗಿಂತ ತಮಗೆ ಚೆನ್ನಾಗಿ ಗೊತ್ತಿದೆ.

ಶ್ರೀ ಎಮ್. ಎಸ್. ಕೃಷ್ಣನ್.—ತಮ್ಮ ನಂಬಿಕೆ ಏನು ಎಂಬುದನ್ನು ಹೇಳಿ.

ಶ್ರೀ ಡಿ. ದೇವರಾಜ ಅರಸ್.—ನೀವು ಹೇಳಿದ ಹಾಗೆ ಕೇಳಬೇಕೆಂದೇನೂ ಇಲ್ಲ, ನಾವು ಯಾವುದಾದರೂ ಒಂದು ನಂಬಿಕೆ ಇಟ್ಟುಕೊಂಡಿದ್ದರೆ, ನಾನು ಯಾವ ಪಾರ್ಟಿಗೆ ಸೇರಿದ್ದೇನೆಯೋ ಅದರ ಪಾಲಿಸಿ, ಆಬ್ಜೆಕ್ಟೀವ್ಸ್ ಏನಿದೆ ಅದಕ್ಕನುಗುಣವಾಗಿಯೇ ಇರಬೇಕು, ನೀವು ಕಮ್ಯೂನಿಸ್ಟ್ ಪಾರ್ಟಿಗೆ ಸೇರಿದವರು, ನಿಮ್ಮ ಪಾರ್ಟಿ ಆಬ್ಜೆಕ್ಟೀವ್ಸ್‌ನಲ್ಲಿ ನಿಮಗೆ ನಂಬಿಕೆ ಇದೆ ಅಂತ ಹೇಳುವುದಾದರೆ ನಾನು ಹೇಳುವ ಮಾತನ್ನು ನಂಬಿ. ನನ್ನ ಹಾಗೆ ಸಂಪೂರ್ಣವಾಗಿ ನಂಬಿಕೆ ಇರುವವರು ಇರಬಹುದು, ಇಲ್ಲದೇ ಇರುವವರೂ ಇರಬಹುದು.

ಶ್ರೀ ಎಂ. ಎಸ್. ಕೃಷ್ಣನ್.—ನಿಮಗೆ ಯಾವುದರಲ್ಲಿ ನಂಬಿಕೆ ಇದೆ ಎಂಬುದನ್ನು ಹೇಳಿ.

Sri S. SIVAPPA.—Is there an industrial policy for the Congress ?

ಶ್ರೀ ಡಿ. ದೇವರಾಜ ಅರಸ್.—ಶ್ರೀಮಾನ್ ಶಿವಪ್ಪನವರು ಪಿ. ಎಸ್. ಪಿ.ಗೆ ಸೇರಿದವರು, ಅವರಿಗೆ ಇದ್ದಂತೆಯೇ ನಮಗೂ ನೀತಿ ಇದ್ದೇ ಇದೆ. ಆದ್ದರಿಂದ ಅವರು ಕಾಂಗ್ರೆಸ್‌ಗೆ ನೀತಿ ಇದೆಯೇ ಎಂದರೆ ಈ ನೀತಿ ಒಂದಲ್ಲ ಒಂದು ವಿಧವಾಗಿ ಎಲ್ಲರಿಗೂ ಇದ್ದೇ ಇರುತ್ತದೆ. ನೀತಿಯನ್ನು ಪರಿಪಾಲನೆ ಮಾಡುವಾಗ ಕೆಲವು ನಂಬಿಕೆಗಳಿಂದ ಅದು ಕುಂಠಿತವಾಗತಕ್ಕ ಕೆಲಸಗಳನ್ನು ಮಾಡುತ್ತಾರೆ, ಹಾಗೆ ಮಾಡಿದರೆ ಅದು ಕಾಂಗ್ರೆಸ್ ಪಕ್ಷದ ನೀತಿ ಅಲ್ಲ ಎಂದು ಹೇಳುವ ಮಾತನ್ನು ಅವರು ಒಪ್ಪಿಕೊಳ್ಳಬೇಕು. ತಮ್ಮ ಪಕ್ಷಕ್ಕೆ ಹೇಗೆ ನೀತಿ ಇದೆಯೋ ಅದೇ ರೀತಿ ನಮಗೂ ಇದೆ. ಮಾನ್ಯ ಸಚಿವರು ಇಲ್ಲಿ ಒಂದು ಮಾತನ್ನು ಹೇಳುತ್ತಾ ಇರುವುದನ್ನು ನೋಡಿದರೆ ಸರ್ಕಾರ ಗವರ್ನ್ಮೆಂಟ್ ಲೆಕ್ಟ್ರಿಕ್ ಫ್ಯಾಕ್ಟರಿ ಆಗಲಿ ಯಾವುದೇ ಆಗಲಿ ತಮ್ಮ ನೇರವಾದ ಹತೋಟಿಯಲ್ಲಿರತಕ್ಕ ಯಾವುದೇ ಉದ್ಯಮವಾಗಲಿ ಅದು ಏಕೆ ನಷ್ಟವಾಗುತ್ತಾ ಇದೆ ಎಂಬುದನ್ನು ಸಂಪೂರ್ಣವಾಗಿ ಮನನ ಮಾಡಿ ಅಲ್ಲಿ ನಷ್ಟವನ್ನು ತುಂಬಿಸುವುದಕ್ಕೆ ಸಾಧ್ಯವೇ ಇಲ್ಲ ಎಂದರೆ ಮುಂದೆ ಏನು ಮಾಡಬೇಕೆಂಬುದನ್ನು ಯೋಚನೆ ಮಾಡಬೇಕೇ ಹೊರತು ಹಾಗಲ್ಲದೇ ಪ್ರೈವೇಟ್ ಸೆಕ್ಟರಿಗೋ ಅಥವಾ ಇನ್ನಾರಿಗೋ ಕೊಡಲು ಯೋಚನೆ ಮಾಡುತ್ತೇವೆ ಎಂದು ಆತುರ ಆತುರವಾಗಿ ನಿರ್ಣಯಕ್ಕೆ ಬರುವುದು ಸರಿಯಾದ ಮಾತಲ್ಲ. ಮಾನ್ಯ ಫೈನಾನ್ಸ್ ಮಿನಿಸ್ಟರು ಅವರ ಭಾಷಣದಲ್ಲಿ ಕಮಿಟಿ ಮಾಡುತ್ತೇವೆ ಎಂಬ ಮಾತನ್ನು ಹೇಳಿದ್ದಾರೆ. ಒಂದು ಕಮಿಟಿ ಮಾಡಲಿ. ಯಾವ ಕೈಗಾರಿಕೆ ನಷ್ಟದಲ್ಲಿ ನಡೆಯುತ್ತಿದೆ ಅದಕ್ಕೆ ವರ್ಕಿಂಗ್ ಕ್ಯಾಪಿಟಲ್ ಪ್ರೊವೈಡ್ ಮಾಡುವುದಕ್ಕೆ ಸಾಧ್ಯವಿದೆಯೇ ಇಲ್ಲವೇ, ಅದಕ್ಕೆ ಏನು ಅಡಚಣೆ ಇವೆ, ಅದನ್ನು ಯಾವ ರೀತಿ ಬಗೆಹರಿಸಬೇಕು ಎಂಬುದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಆಮೇಲೆ ಅದನ್ನು ಪ್ರೈವೇಟ್ ಸೆಕ್ಟರ್‌ಗೆ ಕೊಡುವುದೇ ಬಿಡುವುದೇ ಎಂಬುದನ್ನು ಯೋಚನೆ ಮಾಡಿ. ಬೇರೆಯವರಿಗೆ ಕೊಡಬೇಕೆಂದು ಹೇಳತಕ್ಕ ಕಾಲದಲ್ಲಿ ಮನಾಪಲಿಸ್ಟಿಕ್ ಟೆಂಡೆನ್ಸಿ ಬರದ ಹಾಗೆ ನೋಡಿಕೊಳ್ಳಬೇಕೆಂದು ಹೇಳಿದ್ದಾರೆ. ಆದರೆ ಕಾರ್ಯತಃ ಈ ರೀತಿ ಮಾಡುವುದಕ್ಕೆ ಆಗುತ್ತದೆಯೇ ಎಂಬ ಸಂಶಯ ಇದೆ. ಈಗಿನ ಪರಿಸ್ಥಿತಿ ನೋಡಿದರೆ ಇದನ್ನು ಬೆಳೆಯುವುದಕ್ಕೆ ಅವಕಾಶ ಕೊಡುತ್ತಾ ಇದ್ದೇವೆ ಎಂದು ಶಂಕೆ ಬರುತ್ತದೆ. ಈಗ ರೆಂಕೋ ವಿಚಾರ ಹೇಳಿದೆ. ಬಿರ್ಲಾ ಕಂಪೆನಿಯವರಿಗೆ ಲೈಸೆನ್ಸ್ ಕೊಟ್ಟಿರುವುದರಿಂದ ತೊಂದರೆಯುಂಟಾಗಿದೆ. ಮೊನ್ನೆ ತಾನೆ ರೆಯಾನ್ ಫ್ಯಾಕ್ಟರಿ ಹರಿಹರದ ಹತ್ತಿರ ಸ್ಥಾಪನೆಯಾಗಿದೆ. ಅಥವಾ ಸ್ಥಾಪನೆಯಾಗುವುದು ಇದೆ. ಕೃಷ್ಣರಾಜೇಂದ್ರ ಮಿಲ್ ಬಿರ್ಲಾ ಅವರದೇನೇ, ಕಪಿಲಾ ಟೆಕ್ಸ್‌ಟೈಲ್ಸ್ ಅಂತ ಇದೆ ಅದೂ ಕೂಡ ಒಂದಲ್ಲ ಒಂದು ರೀತಿಯಲ್ಲಿ ಬಿರ್ಲಾ ಹೌಸ್‌ಗೆ ಸಂಬಂಧಪಟ್ಟದ್ದೇ. ಅಮ್ಮಸಂದ್ರ ಸಿಮೆಂಟ್ ಫ್ಯಾಕ್ಟರಿಯನ್ನೂ ಕೂಡ ಅವರೇ ತೆಗೆದುಕೊಂಡಿದ್ದಾರೆ. ಇದನ್ನು ನೋಡಿದರೆ ಮನಾಪಲಿಸ್ಟಿಕ್ ಟೆಂಡೆನ್ಸಿ ಉತ್ತರ ದೇಶದಿಂದ ದಕ್ಷಿಣ ದೇಶಕ್ಕೆ ಹರಡುವಂತೆ ಕಾಣುತ್ತಾ ಇದೆ. ಇದನ್ನು ಸ್ವಲ್ಪ ಸೂಕ್ಷ್ಮವಾಗಿ ಯೋಚನೆ ಮಾಡಬೇಕಾಗುತ್ತದೆ. ಪಾಕೀಸ್ಥಾನದಲ್ಲಿ ಮೊನ್ನೆ ನಡೆದ ಗಲಾಟೆಗೆ ಕಾರಣವೇನು ಎಂದರೆ ಇಡೀ ಕೈಗಾರಿಕಾ ಕ್ಷೇತ್ರವೆಲ್ಲಾ 20—25 ಜನರ ಕೈಯಲ್ಲಿ ಸೇರಿದೆ ಎಂದು ಇದನ್ನು ಪತ್ರಿಕೆಯಲ್ಲಿ ಓದಿದ್ದೇನೆ. ಮಹಾಲಣೋಬಿಸ್ ರಿಪೋರ್ಟನ್ನು ನೆಹರೂರವರ ಕಾಲದಲ್ಲಿ ತರಿಸಿಕೊಂಡರು, ಅದರ ಪ್ರಕಾರ ಇಂಡಿಯಾ ದೇಶದ ಬಂಡವಾಳವೆಲ್ಲಾ ಕೇವಲ 75 ಫ್ಯಾಮಿಲೀಸ್ ಅವರ ಕೈಕೆಳಗೆ ಇದೆ ಎಂಬ ಮಾತನ್ನು ಅವರು ಅವರ ವರದಿಯನ್ನು ನಮೂದು ಮಾಡಿದ್ದಾರೆ.

(ಶ್ರೀ ಡಿ. ದೇವರಾಜ ಅರಸ್)

ನಮ್ಮ ದೇಶದ ಮುಂದೆ ಇರತಕ್ಕ ಗುರಿ ಸೋಷಿಯಲಿಸಂ. ಇದನ್ನು ಸಾಧನೆ ಮಾಡಬೇಕೆಂದು ಹೊರಟಿರುವಾಗ 75—100 —200 ಜನರ ಕೈಯಲ್ಲಿ ಅವರ ಹತೋಟಿಯಲ್ಲಿ ಇಡೀ ದೇಶದ ಆರ್ಥಿಕ ನೀತಿ ಇದೆ ಎಂಬುದು ಇನ್‌ವಿಸಿಬಲ್ ಆಗಿ ಕಾಣುತ್ತದೆ. ಇದನ್ನು ಬಹಳ ಎಚ್ಚರಿಕೆಯಿಂದ ನೋಡ ಬೇಕು. ಕೈಗಾರಿಕಾ ನೀತಿಯನ್ನು ರೂಪಿಸುವಾಗ ಸರ್ಕಾರ ತುಂಬಾ ಎಚ್ಚರಿಕೆಯಿಂದ ಏನು ಧ್ಯೇಯ ಇಟ್ಟುಕೊಂಡಿದ್ದೇವೆ, ಆರ್ಥಿಕ ಧ್ಯೇಯ ಏನಿದೆ, ಸಾಮಾಜಿಕ ಧ್ಯೇಯ ಏನಿದೆ ಅದರ ಕಡೆಗೆ ಗಮನ ಕೊಡುತ್ತಾ ಇದ್ದೇವೆಯೋ ಇಲ್ಲವೇ ಎಂಬುದನ್ನು ಗಮನದಲ್ಲಿಟ್ಟುಕೊಂಡು ಯೋಚನೆ ಮಾಡ ಬೇಕಾಗುತ್ತದೆ ಎಂದು ಮಾನ್ಯ ಮಂತ್ರಿಗಳಿಗೆ ಸೂಚನೆ ಮಾಡಬಯಸುತ್ತೇನೆ.

ಸಿರಿಕಲ್ಚರ್ ವಿಚಾರ. ನಮ್ಮ ದೇಶದಲ್ಲಿ ಬಹಳ ವರ್ಷಗಳಿಂದ ಈ ಫಿಲೇಚರ್ಸ್‌ನಲ್ಲಿ ನಷ್ಟ ವಾಗುತ್ತಾ ಇದೆ. ಸುಮಾರು ಎರಡೂವರೆ ಕೋಟಿ ರೂಪಾಯಿಗಳಷ್ಟು ಎರಡು ಮೂರು ಫಿಲೇಚರ್ಸ್ ಇಂದ ನಷ್ಟವಾಗುತ್ತಿದೆ ಎಂದು ಗೊತ್ತಾಗಿದೆ. ಈ ವರ್ಷ ಕೂಡ 40 ಲಕ್ಷ ರೂಪಾಯಿ ನಷ್ಟವಾಗಿದೆ. ರೇಷ್ಮೆ ಕೈಗಾರಿಕೆಯಲ್ಲಿ ನಷ್ಟ ಆದ್ದರಿಂದ ಇದನ್ನು ಮುಚ್ಚಬೇಕೇ ಅಥವಾ ಯಾವ ರೀತಿ ಮುಂದುವರಿಸಬೇಕೆಂಬ ವಿಚಾರ ಮಾಡುವಾಗ, ನಷ್ಟವಾದರೆ ಮುಚ್ಚಿಬಿಡಿ, ಇದರಿಂದ ಪ್ರಯೋಜನವೇನು ಎಂದು ಅಷ್ಟು ಸುಲಭವಾಗಿ ಹೇಳತಕ್ಕ ಮಾತು ಇದು ಆಗುವುದಿಲ್ಲ. ಶ್ರೀ ಸಿ. ಕೆ. ರಾಜಯ್ಯಶೆಟ್ಟರೂ ಕೂಡ ಇಡೀ ಇಂಡಿಯಾ ದೇಶದಲ್ಲಿ ಇರತಕ್ಕ ಅಂದರೆ ರೇಷ್ಮೆ ವ್ಯವಸಾಯದಲ್ಲಿ ನಿರತರಾಗಿರತಕ್ಕ ಜನರಲ್ಲಿ ನೂರಕ್ಕೆ 75 ಜನರು ಮೈಸೂರಿನವರು ಎಂಬುದಾಗಿ ಹೇಳಿದ್ದಾರೆ. ಅವರೆ ನಮ್ಮ ರಾಜ್ಯದಲ್ಲಿ ಅಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಜನರು ಇದರಲ್ಲಿ ತೊಡಗಿದ್ದರೂ ಇದರ ಉತ್ಪತ್ತಿಯನ್ನು ಹೆಚ್ಚಿಸಲು ಸರ್ಕಾರದವರು ಸಾಕಷ್ಟು ಗಮನ ಕೊಡುತ್ತಿಲ್ಲ. ಇತ್ತೀಚೆಗೆ ಎಲ್ಲೆಲ್ಲಿಯೂ ರೇಷ್ಮೆ ಬಟ್ಟೆ ಉಡತಕ್ಕ ಜನಸಂಖ್ಯೆ ಜಾಸ್ತಿಯಾಗುತ್ತಿದೆ. ಆದ್ದರಿಂದ ಹೊರಗಡೆಯಲ್ಲಿ ಇದಕ್ಕೆ ಮಾರ್ಕೆಟ್ ಹೆಚ್ಚು ಪ್ರಮಾಣದಲ್ಲಿ ದೊರೆಯತಕ್ಕ ಲಕ್ಷಣಗಳಿವೆ. ಆದ್ದರಿಂದ ಇನ್ನಾದರೂ ಈ ಕೈಗಾರಿಕೆಯನ್ನು ಮುಂದುವರಿಸಿ ಇದನ್ನು ಅಭಿವೃದ್ಧಿಪಡಿಸುವುದಕ್ಕೆ ಸಾಧ್ಯವಿದೆಯೋ ಅನ್ನುವುದನ್ನು ತೀವ್ರವಾಗಿ ಪರ್ಯಾಲೋಚಿಸತಕ್ಕ ಕಾಲ ಸನ್ನಿಹಿತವಾಗಿದೆ. ಆ ಕೇಂದ್ರ ಸರ್ಕಾರದವರು ಇದರಲ್ಲಿ ಆಗತಕ್ಕ ನಷ್ಟದಲ್ಲಿ ಒಂದು ಪರ್ಸೆಂಟನ್ನು ಅವರು ತುಂಬಿ ಕೊಡುವುದಾಗಿ ಹೇಳುತ್ತಿದ್ದರು. ಆದರೆ ಇತ್ತೀಚೆಗೆ ಮಾನ್ಯ ಮಂತ್ರಿಗಳಾದ ಶ್ರೀ ಬಿ. ರಾಚಯ್ಯನವರು ಕೇಂದ್ರದವರು ಅದನ್ನು ಈಗ ಕೊಡುವುದಕ್ಕಾಗುವುದಿಲ್ಲ ಎಂದು ಹೇಳುತ್ತಿದ್ದಾರೆಂದು ಹೇಳುತ್ತಾರೆ. ಆ ಕೇಂದ್ರದವರ ಮಾತಿ ನಂತೆ ರಾಜ್ಯ ಸರ್ಕಾರದವರು ನೂರಕ್ಕೆ 49 ಭಾಗ ಹಾಕಿದರೆ ಕೇಂದ್ರದವರು ಇನ್ನುಳಿದ 51 ಭಾಗ ಕೊಡುತ್ತೇವೆಂದು ಹೇಳುತ್ತಿದ್ದಾರೆಂದು ಹೇಳಲಾಗುತ್ತಿದೆ. ಆದರೆ ಅದಕ್ಕಾಗಿ ಒಂದು ಕಾರ್ಪೊ ರೇಷನ್ನನ್ನು ಮಾಡಬೇಕಾಗಿದೆ. ಈ ವ್ಯವಹಾರವನ್ನು ಅದಕ್ಕೆ ವಹಿಸಿದರೆ ಆಗ ಕೇಂದ್ರದವರು ಅದರ ಪೂರ್ಣ ವಹಿವಾಟನ್ನು ನೋಡಲು ಆ ಕಾರ್ಪೊರೇಷನ್ನಿಗೆ ತಿಳಿಸುವುದಾಗಿ ಹೇಳುತ್ತಿದ್ದಾರೆ. ಆದರೆ ಇದು ಅಂಥ ಒಂದು ಒಳ್ಳೆಯ ಮಾರ್ಗವಾಗಿದ್ದರೆ ಮಾಡಲಿ. ಆದರೆ ಆ ನಷ್ಟವೊಂದನ್ನು ತುಂಬಿ ಕೊಡುವುದು ಒಂದರಿಂದಲೇ ಇದರ ಭವಿಷ್ಯ ಬಹಳ ಉತ್ತಮವಾಗುತ್ತದೆ ಎಂದು ತಿಳಿದಿದ್ದರೆ ಅದು ಬಹಳ ತಪ್ಪಾಗುತ್ತದೆ. ನನ್ನ ಅಭಿಪ್ರಾಯದಲ್ಲಿ ಇದು ಬೆಳೆಯಬೇಕಾಗಿದ್ದರೆ ಇದರ ಬಗ್ಗೆ ಹೆಚ್ಚಿನ ರಿಸರ್ಚ್‌ಗಳು ನಡೆಯಬೇಕು. ಒಳ್ಳೇ ಬಿತ್ತನೆ ಬೀಜಗಳು ಬೇಕು. ಇದರ ಬಗ್ಗೆ ಚೆನ್ನಾಗಿ ರಿಸರ್ಚ್ ನಡೆಸಿರತಕ್ಕ ಕಡೆಗಳಲ್ಲಿ—ಹೊರ ರಾಷ್ಟ್ರಗಳಲ್ಲಿ ಒಂದು ಕಕೂನಿಗೆ 800 ರಿಂದ 1200 ಗಜ ರೇಷ್ಮೆ ಬರುತ್ತದೆಂದು ತಿಳಿದುಬಂದಿದೆ. ಆದರೆ ನಾವಿಲ್ಲಿ ಉತ್ಪತ್ತಿ ಮಾಡುತ್ತಿರುವ ಕಕೂನಿನಲ್ಲಿ 300 ಗಜ ಮಾತ್ರ ತೆಗೆಯಬಹುದು. ಅಂಥ ಕಕೂನುಗಳನ್ನು ನಾವಿಲ್ಲಿ ತಯಾರು ಮಾಡುತ್ತಿದ್ದೇವೆ. ಅದರಿಂದ ನಮಗೆ ಇಲ್ಲಿ ಬಹಳ ನಷ್ಟವಾಗುತ್ತಿದೆ. ರೈತರಿಗೆ ಇದರಿಂದ ಅಷ್ಟು ಹೆಚ್ಚಿನ ಲಾಭವಿಲ್ಲ. ನಾವು ಇಲ್ಲಿ ಒಂದು ಕಕೂನಿಗೆ 300 ಗಜಕ್ಕೆ ಬದಲಾಗಿ 1200 ಗಜ ರೇಷ್ಮೆ ಬರತಕ್ಕ ಕಕೂನುಗಳನ್ನು ಉತ್ಪನ್ನ ಮಾಡಿದರೆ ಎಷ್ಟು ಲಾಭದಾಯಕ ಅನ್ನುವುದನ್ನು ಒತ್ತಿ ಹೇಳಬೇಕಾದ್ದಿಲ್ಲ. ಅದಕ್ಕಾಗಿ ನಾವು ಇಲ್ಲಿ ಆಧುನಿಕ ಯಂತ್ರೋಪಕರಣಗಳನ್ನು ನಮ್ಮ ಸಣ್ಣ ಸಣ್ಣ ಪ್ರಮಾಣದ ಕಕೂನಿಗೆ ಬಳಸು ವುದಕ್ಕಾಗುವುದಿಲ್ಲ. ನಾನು ಬೈರೂಟಿಗೆ ಹೋಗಿದ್ದಾಗ ಅಲ್ಲಿ ಅದನ್ನೆಲ್ಲಾ ನೋಡಿಕೊಂಡು ಬಂದಿದ್ದೇನೆ. ಅಲ್ಲಿ ಉತ್ಪತ್ತಿ ಮಾಡತಕ್ಕ ಕಕೂನು ನಮ್ಮದರ ಎರಡರಷ್ಟು ದಪ್ಪ ಇರುತ್ತದೆ. ಈ ಬಗ್ಗೆ ಮಾನ್ಯ ಮಂತ್ರಿಗಳೂ ಕೂಡ ಸಾಕಷ್ಟು ಪ್ರಯತ್ನಗಳನ್ನು ನಡೆಸುತ್ತಿರಬಹುದು. ಇಲ್ಲಿಗೆ ಸ್ವಿಟ್‌ಜರ್ಲೆಂಡಿನಿಂದ ಒಬ್ಬ ಪ್ರಖ್ಯಾತ ರೇಷ್ಮೆ ವ್ಯಾಪಾರಿಗಳು ಬಂದಿದ್ದರು. ನಾನು ಹಿಂದೆ ಮಂತ್ರಿ ಯಾಗಿದ್ದಾಗ ಅವರು ಇಲ್ಲಿಗೆ ಎರಡಾವರ್ತಿ ಬಂದಿದ್ದರು, ಅವರ ಹೆಸರು ಟ್ರೂಡರ್ ಎಂದು. ಅವರು ಇಲ್ಲಿ ಈ ರೇಷ್ಮೆ ಉದ್ಯಮವನ್ನು ಉತ್ತಮಗೊಳಿಸುವುದಕ್ಕಾಗಿ ಅವರ ರಾಷ್ಟ್ರದಿಂದ 30 ಕೋಟಿ ರೂಪಾಯಿಗಳನ್ನು ಒದಗಿಸುವುದಾಗಿ ಭರವಸೆಯನ್ನು ಕೊಟ್ಟಿದ್ದರು. ಅವರ ಒಂದು ಷರತ್ತು ಏನಿತ್ತು

ಎಂದರೆ ಇಲ್ಲಿ ರೇಷ್ಮೆ ಕೈಗಾರಿಕೆಯಲ್ಲಿ ಬರತಕ್ಕ ವೇಸ್ಟ್ ರೇಷ್ಮೆಯಲ್ಲಿ ಶೇ : 50 ರಷ್ಟನ್ನು ಅವರಿಗೆ ಅವರ ದೇಶಕ್ಕೆ ತೆಗೆದುಕೊಂಡು ಹೋಗುವುದಕ್ಕೆ ಒಪ್ಪುವುದಾದರೆ ಹಣವನ್ನು ಹಾಕುವುದಾಗಿ ಹೇಳುತ್ತಿದ್ದರು. ಅವರಿಗೆ ಅ ಒಂದು ಮನಾಪಲಿ ಬೇಕಾಗಿತ್ತು. ಆ ವಿಚಾರವನ್ನು ನಾನು ಆಗ ಕೇಂದ್ರದಲ್ಲಿ ಮಂತ್ರಿಗಳಾಗಿದ್ದ ಶ್ರೀ ದಿನೇಶಸಿಂಗರಲ್ಲಿ ಮಾತನಾಡಿದ್ದೆ. ಆದರೆ ಆ ದಿವಸ ಹಾಗೆ ಪ್ರಸ್ತಾಪ ಮಾಡಿದ್ದ ವಿಷಯ ಇತ್ತೀಚೆಗೇನಾಯಿತೋ ತಿಳಿಯಲಿಲ್ಲ. ಈಗಲೂ ಕೂಡ ಆ ಕೇಂದ್ರದವರು ಆ 30 ಕೋಟಿ ಬಂಡವಾಳವನ್ನು ಹಾಕಬೇಕು ಇಲ್ಲವೇ ಪರದೇಶದವರು ಇಲ್ಲಿ ಬಂದು ಬಂಡವಾಳ ಹಾಕುವುದಕ್ಕೆ ಅವರು ಅವಕಾಶ ಕೊಡಬೇಕು. ಮುಖ್ಯವಾಗಿ ರೇಷ್ಮೆ ಬೆಳೆಯ ಬಗ್ಗೆ ರಿಸರ್ಚ್ ನಡೆಯಬೇಕು. ಅಲ್ಲದೆ ಇದನ್ನು ಬೆಳೆಸುವುದಕ್ಕೆ ಮಳೆ ನೀರನ್ನು ನಂಬಿದರೆ ಸಾಧ್ಯವಿಲ್ಲ. ಇದಕ್ಕೆ ಬಾವಿಗಳನ್ನು ತೋಡಿಸಲು ಸಾಕಷ್ಟು ಹಣವನ್ನು ಒದಗಿಸಬೇಕು. ಇಲ್ಲವಾದರೆ ಇದು ಅಷ್ಟು ಎಕನಾಮಿಕಲ್ ಆಗುವುದಿಲ್ಲ.

ಇನ್ನು ಕೈಗಾರಿಕಾ ಇಲಾಖೆಗೆ ಸೇರಿದ ಹಾಗೆ 22 ರೂರಲ್ ಅರ್ಟಿಜಾನ್ ಸೆಂಟರುಗಳಿವೆ. ಇವು ಟ್ರೈನಿಂಗ್ ಸೆಂಟರುಗಳು. ಇವುಗಳ ಆಡಳಿತವನ್ನು ಎಂಪ್ಲಾಯಿಮೆಂಟ್ ಅಂಡ್ ಟ್ರೈನಿಂಗ್ ಡೈರೆಕ್ಟರೇಟ್‌ರವರಿಗೆ ವಹಿಸಬೇಕೆಂಬ ಅಭಿಪ್ರಾಯ ಬಹಳ ದಿನಗಳಿಂದಲೂ ಇತ್ತು. ಆದರೆ ಅವುಗಳನ್ನು ಅವರಿಗೆ ಇನ್ನೂ ವಹಿಸಿದಂತೆ ಕಂಡುಬರುತ್ತಿಲ್ಲ. ಅವುಗಳನ್ನು ಕೂಡಲೆ ಅವರ ಆಡಳಿತಕ್ಕೆ ಒಳಪಡಿಸಬೇಕು. ಇಲ್ಲವಾದರೆ ಅವು ಸರಿಯಾಗಿ ಕೆಲಸವನ್ನೂ ಮಾಡುವುದಿಲ್ಲ, ಅಲ್ಲಿಗೆ ಹೋಗತಕ್ಕವರಿಗೆ ಸರಿಯಾದ ಶಿಕ್ಷಣವೂ ಸಿಕ್ಕುವುದಿಲ್ಲ. ಆದ್ದರಿಂದ ಇವುಗಳನ್ನು ಕೂಡಲೆ ಆ ಲೇಬರ ಎಂಪ್ಲಾಯಿಮೆಂಟ್ ಡೈರೆಕ್ಟರಿಗೆ ವಹಿಸಿದರೆ, ಕೇಂದ್ರದಿಂದ ಇವಕ್ಕೆ ಧನ ಸಹಾಯವೂ ದೊರೆಯುತ್ತದೆಂದು ಸಲಹೆ ಮಾಡಿ ಮಾನ್ಯ ಸಚಿವರು ಸಭೆಯ ಮುಂದೆ ಮಂಡಿಸಿರತಕ್ಕ ಬೇಡಿಕೆಗಳನ್ನು ನಾನು ಹೃತ್ಪೂರ್ವಕವಾಗಿ ಸಮರ್ಥಿಸುತ್ತೇನೆ.

Mr. SPEAKER.—We have been rising daily very late at 8-00 P.M., 9-00 P.M. and so on. Most of the members have expressed that they are tired. It is for the House to consider whether we should extend the time. I feel that it is better we close by 7-00 P.M. as usual. Let us try to close the general debate by 5-30 P.M.

Sri B. BHASKARA SHETTY (Kaup.)—Sir, on this side, we have got four members desirous of participating in the debate.

Mr. SPEAKER.—Sriyuths Jwalaniah and C. K. Rajaiah Setty have taken more time. I shall find out from the record the time taken by them and tell you. In the meanwhile, I call upon Sri S. Puttaswamy and request him to be very brief.

†**ಶ್ರೀ ಎಸ್. ಪುಟ್ಟಸ್ವಾಮಿ** (ಚಾಮರಾಜನಗರ).—ಸನ್ಮಾನ್ಯ ಅಧ್ಯಕ್ಷರೇ, ಕೈಗಾರಿಕೆಯ ಸಚಿವರು ನಮ್ಮ ಮುಂದೆ ಮಂಡಿಸಿರತಕ್ಕ ಈ ಡಿಮ್ಯಾಂಡ್‌ಗಳನ್ನು ವಿರೋಧ ಮಾಡುತ್ತಾ ನನಗೆ ತಿಳಿದ ಸಲಹೆಗಳನ್ನು ಕೊಡುವುದಕ್ಕೆ ಇಚ್ಛೆ ಪಡುತ್ತೇನೆ. 1956ರಲ್ಲಿ ಕೈಗಾರಿಕೆಯ ಅಭಿವೃದ್ಧಿ ಬಗ್ಗೆ ಇಡೀ ನಮ್ಮ ಭರತಖಂಡಕ್ಕೆ ಅನ್ವಯಿಸತಕ್ಕ ಯಾವ ಒಂದು ನಿಲುವನ್ನು, ಯಾವ ಒಂದು ನೀತಿಯನ್ನು ಅನುಸರಿಸಬೇಕೆಂದು ಕೇಂದ್ರ ಸರ್ಕಾರದವರು ಒಪ್ಪಿಕೊಂಡಿದ್ದರೋ, 1956ರಲ್ಲಿ ಇಂಡಸ್ಟ್ರಿಯಲ್ ಪಾಲಿಸಿ ನಿರ್ಣಯವನ್ನು ಒಪ್ಪಿಕೊಂಡಿದ್ದರೋ, ಅದೇ ರೀತಿಯಾಗಿ ಅವರು ಆ ನಿರ್ಣಯದಲ್ಲಿ ಅಡಕವಾಗಿರತಕ್ಕ ಅಂಶಗಳನ್ನು ಅನುಸರಿಸಿ ಕೈಗಾರಿಕೆಯ ಅಭಿವೃದ್ಧಿ ಬಗ್ಗೆ ಅವರ ನೀತಿಯನ್ನು ಅಳವಡಿಸಿಕೊಂಡಿದ್ದಾರೆ. ಅದಕ್ಕೆ ಅನುಗುಣವಾಗಿ ನಮ್ಮ ರಾಜ್ಯದಲ್ಲಿಯೂ ಕೂಡ ಕಳೆದ 14-15 ವರ್ಷಗಳಿಂದಲೂ ಇಂಡಸ್ಟ್ರಿಯಲ್ ಪಾಲಸಿಯಲ್ಲಿ ಅಡಕವಾಗಿರತಕ್ಕ ಅಂಶಗಳನ್ನು ಅನುಸರಿಸಿಕೊಂಡು ನಮ್ಮ ಸರ್ಕಾರದವರು ಒಂದು ಕೈಗಾರಿಕೆಯ ನೀತಿಯನ್ನು ಹಾಕಿಕೊಂಡಿದ್ದಾರೆ. ಆದರೆ ಕಳೆದ ಹತ್ತಾರು ವರ್ಷಗಳಿಂದಲೂ ನಮ್ಮಲ್ಲಿರತಕ್ಕ ಸಂಪನ್ಮೂಲಗಳನ್ನು ರೂಢಿಸಿ ಕೈಗಾರಿಕೆಯ ಅಭಿವೃದ್ಧಿಯಲ್ಲಿ ಮಾಡತಕ್ಕ ಕೆಲಸದಲ್ಲಿ ನಾವು ಖಂಡಿತವಾಗಿ ಅನೇಕ ಕೆಲಸಗಳನ್ನು ಮಾಡದೆ ನಿರಾಶೆಯಾಗಿ ಕುಳಿತಿದ್ದೇವೆ. ಕೈಗಾರಿಕೆಗಳ ಅಭಿವೃದ್ಧಿ ಹಾಗೂ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವ ನೀತಿಗೆ ಒಂದು ಬಾಲಗ್ರಹ ಇದ್ದ ಹಾಗೆ ಇದೆ. ಹೊರಗಡೆ ದೇಶಗಳಿಗೆ ಹೋಗಿ ಬಂದ ಪರಿಣತರ ಸರ್ವಿಸ್ಸನ್ನು ಉಪಯೋಗಿಸಿಕೊಳ್ಳುವುದರಲ್ಲಿ ನಮ್ಮ ಸರ್ಕಾರ ಅವರ ಕಾರ್ಯವನ್ನು ನಿರ್ವಹಿಸಿಲ್ಲ ಈ ಒಂದು ಕೆಲಸದ ಬಗ್ಗೆ ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡಿ ಹೊರಗಡೆ ಹೋದಂಥ ತಜ್ಞರ ಕೈಲಿ ಒಂದು

(ಶ್ರೀ ಎಸ್. ಪುಟ್ಟಸ್ವಾಮಿ)

ಇಲಾಖೆ ಇಷ್ಟು ಕೈಗಾರಿಕೆ ಸ್ಥಾಪನೆ ಮಾಡುವುದರಲ್ಲಿ ನಮ್ಮ ಸರ್ಕಾರ ವಿಫಲಗೊಂಡಿದೆ ಎಂದು ನಾನು ಹೇಳುತ್ತೇನೆ. ಇಂಡಸ್ಟ್ರಿಯಲ್ ಪಾಲಿಸಿ ರಿಜಲ್ಯೂಷನ್ನಿನಲ್ಲಿ ಅಡಕವಾಗಿರತಕ್ಕ ಕೆಲವು ಅಂಶಗಳನ್ನು ಬಳಸಿಕೊಂಡು ನಮ್ಮ ರಾಜ್ಯದಲ್ಲಿ ಕೈಗಾರಿಕೆಗಳನ್ನು ಸ್ಥಾಪನೆಮಾಡುವುದಕ್ಕೆ ರಾಜ್ಯ ಸರ್ಕಾರದವರು ಈಗಲೂ ಮನಸ್ಸುಮಾಡಲಿ ಎಂದು ನಾನು ಹೇಳುತ್ತೇನೆ. ನಮ್ಮ ಚಾಮರಾಜನಗರ ತಾಲ್ಲೂಕಿನಲ್ಲಿ ನಮ್ಮ ಸರ್ಕಾರದವರು ಕೇಂದ್ರ ಸರ್ಕಾರದಿಂದ ಟೆಕ್ಸ್‌ಟೈಲ್ ಇಂಡಸ್ಟ್ರಿಗೆ ಲೈಸನ್ಸನ್ನು ಮಂಜೂರು ಮಾಡಿಸಿದ್ದರು. ಆ ಟೆಕ್ಸ್‌ಟೈಲ್ ಮಿಲ್ ಇನ್ನೂ ಪ್ರಾರಂಭವಾಗಲಿಲ್ಲ. ಲೈಸೆನ್ಸ್ ಕ್ಯಾನ್ಸಲ್ ಆಗಿದೆಯೆಂದು ತಿಳಿದುಬಂದಿದೆ. ಇದಕ್ಕೆ ಕಾರಣ ಏನೆಂದು ತಿಳಿಯಲಿಲ್ಲ. ಪಡೆದಂಥ ಲೈಸೆನ್ಸ್ ಲ್ಯಾಪ್ಸ್ ಆಗುವ ಪರಿಸ್ಥಿತಿಗೆ ಸರ್ಕಾರದವರು ಏಕೆ ಅವಕಾಶಕೊಡುತ್ತಾರೆಂಬುದು ನನಗೆ ಅರ್ಥವಾಗುತ್ತಾ ಇಲ್ಲ. ಅದನ್ನು ಪರಿಶೀಲನೆಮಾಡಬೇಕೆಂಬುದಾಗಿ ನಾನು ಸಂಬಂಧಪಟ್ಟ ಇಲಾಖೆಯ ಮಂತ್ರಿಗಳಿಗೆ ಮನವಿಮಾಡುತ್ತೇನೆ. ಚಾಮರಾಜನಗರದಲ್ಲಿ ಗೃಹ ಕೈಗಾರಿಕೆಗಳನ್ನು ಬೆಳೆಸುವುದಕ್ಕೆ ಅವಕಾಶವಿದೆ. ನಮ್ಮಲ್ಲಿ ರೇಷ್ಮೆ ಕೈಗಾರಿಕೆಗೆ ಸಂಬಂಧಪಟ್ಟಂಥ ಸಿಲ್ಕ್ ಫಿಲೇಚರ್ಸ್—ಇಂತಹ ಸಣ್ಣ ಪುಟ್ಟ ಕೈಗಾರಿಕೆಗಳನ್ನು ಅಭಿವೃದ್ಧಿ ಮಾಡುವುದಕ್ಕೆ ನಮ್ಮಲ್ಲಿ ಸಾಕಷ್ಟು ಅವಕಾಶ ಇದೆ. ಅಲ್ಲಿ ಅಗ್ರಿಕಲ್ಚರಲ್ ಇಂಪ್ಲಿಮೆಂಟ್ಸ್ ಮಾಡುವುದಕ್ಕೆ ಸ್ವಲ್ಪ ಅವಕಾಶವಿರುವ ಪರಿಸ್ಥಿತಿ ಇರುವುದರಿಂದ ನಮ್ಮ ಚಾಮರಾಜನಗರದಲ್ಲಿ ಒಂದು ಕೈಗಾರಿಕೆ ಎಸ್ಟೇಟ್ ಮಾಡಿಕೊಡಿ ಎಂದು ಹೇಳಿದರೂ ಸರ್ಕಾರದವರು ಅದರ ಬಗ್ಗೆ ತೀರ್ಮಾನ ಮಾಡಲಿಲ್ಲ. ಆದ್ದರಿಂದ ದಯಮಾಡಿ ಚಾಮರಾಜನಗರ ತಾಲ್ಲೂಕಿಗೆ ಒಂದು ಕೈಗಾರಿಕೆಯ ಎಸ್ಟೇಟನ್ನು ಕೂಡಲೇ ಮಂಜೂರುಮಾಡಬೇಕೆಂದು ಸೂಚಿಸುತ್ತೇನೆ.

ಇನ್ನು ನಮ್ಮ ಭಾಗದಲ್ಲಿ ಹೆಚ್ಚಿಗೆ ಮೈಸೂರು ಜಿಲ್ಲೆಯಲ್ಲಿ, ಬಹಳ ಪ್ರಾಮುಖ್ಯತೆಯನ್ನು ಹೊಂದಿರತಕ್ಕ ಇಂಡಿಯಾದೇಶದಲ್ಲಿ, ಆರ್ಥಿಕ ವ್ಯವಸ್ಥೆಯಲ್ಲಿ ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆದಿರತಕ್ಕ ಈ ರೇಷ್ಮೆ ಕೈಗಾರಿಕೆಯ ಬಗ್ಗೆ ಒಂದು ಮಾತು ಹೇಳುತ್ತೇನೆ. ಕಳೆದ ಈ ಒಂದು ಬಡ್ಜೆಟ್ ಅಧಿವೇಶನದಲ್ಲಿ ರೇಷ್ಮೆ ಇಲಾಖೆಗೆ ಸಂಬಂಧಪಟ್ಟ ರಿಸರ್ಚ್ ಇನ್‌ಸ್ಟಿಟ್ಯೂಟ್ ಅವರು ರೇಷ್ಮೆ ಇಲಾಖೆಗೆ ಬೇಕಾದಂಥ ಹಿಪ್ಪನೇರಳೆ ಸೊಪ್ಪು ಬೆಳೆಯುವುದಕ್ಕೆ ಸಾಕಷ್ಟು ಪ್ರೋತ್ಸಾಹಕೊಟ್ಟು ಹೆಚ್ಚು ಹೆಚ್ಚು ತಳಿಗಳನ್ನು, ಬಿತ್ತನೆ ಬೀಜಗಳನ್ನು ಉತ್ಪತ್ತಿ ಮಾಡುವುದಕ್ಕೆ ಪ್ರಯತ್ನಪಡುತ್ತಾರೆಂದು ಮಾನ್ಯ ಶ್ರೀ ಅರಸ್ ಅವರು ಹೇಳುತ್ತಿದ್ದರು. ಹೊರಗಡೆ ದೇಶದಲ್ಲಿ ಒಂದು ರೇಷ್ಮೆ ಗೂಡಿನಿಂದ ಸಾವಿರ ಗಜ ರೇಷ್ಮೆ ಸಿಗುತ್ತದೆ, ನಾವು ಇಲ್ಲಿ 300—400 ಗಜದವರೆಗೆ ನೂಲನ್ನು ತಯಾರು ಮಾಡುತ್ತೇವೆ. ಇದಕ್ಕೆ ಕಾರಣವಿಷ್ಟೇ. ಹಿಪ್ಪನೇರಳೆ ಸೊಪ್ಪು ಬೆಳೆಯುವ ಪ್ರದೇಶದಲ್ಲಿ ಖುಷ್ಕಿ ಜಮೀನಿನಲ್ಲಿ ಹಿಪ್ಪನೇರಳೆ ಬೆಳೆಯುವುದರಿಂದ ಮಳೆಯ ಅಭಾವದಿಂದ ನೊಂದಿಕೊಳ್ಳುವ ಪರಿಸ್ಥಿತಿ ಇರುತ್ತದೆ. ಆದ್ದರಿಂದ ನೀರಾವರಿ ಬಾವಿಗಳನ್ನು ನಾವು ಹೆಚ್ಚು ಹೆಚ್ಚಾದ ರೀತಿಯಲ್ಲಿ ತೆಗೆಸಿ ನೀರನ್ನು ಉಪಯೋಗಿಸಿ ಹಿಪ್ಪನೇರಳೆ ಸೊಪ್ಪನ್ನು ಬೆಳೆಯುವ ಅವಕಾಶವನ್ನು ಮಾಡಿಕೊಡದೇ ಇದ್ದರೆ ಈ ರೇಷ್ಮೆ ಗೂಡಿನಿಂದ ತಯಾರುಮಾಡುವ ಫಿಲೇಚರ್ ರೇಷ್ಮೆ ಖಂಡಿತವಾಗಿಯೂ ಅಭಿವೃದ್ಧಿ ಆಗುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ಹೆಚ್ಚಿಗೆ ನೀರಾವರಿ ಬಾವಿಗಳನ್ನು ಒದಗಿಸಿಕೊಟ್ಟು ಹಿಪ್ಪನೇರಳೆ ಬೆಳೆಯುವುದನ್ನು ಅಭಿವೃದ್ಧಿ ಮಾಡಬೇಕು. 4-5 ರೀತಿಯಲ್ಲಿ ತಳಿಯನ್ನು ಅಭಿವೃದ್ಧಿ ಮಾಡುವ ಹಾಗೆ ಒಂದು ವ್ಯವಸ್ಥೆಯನ್ನು ಮಾಡಬೇಕು. ಅವರ ಇಲಾಖೆಯಲ್ಲಿ ಈ ಸೊಪ್ಪನ್ನು ರಸವತ್ತಾಗಿ ಮಾಡುವ ಹಾಗೆ ಮಾಡಿ, ಹೆಚ್ಚಿಗೆ ಪರ್ಸಂಟೇಜ್ ಇರುವ ರೇಷ್ಮೆ ಹುಳವನ್ನು ಸಾಕುವ ಪರಿಸ್ಥಿತಿ ಉಂಟು ಮಾಡದೇ ಇದ್ದರೆ ರೇಷ್ಮೆ ಇಲಾಖೆಯನ್ನು ಅಭಿವೃದ್ಧಿ ಮಾಡುವುದಕ್ಕೆ ಆಗುವುದಿಲ್ಲ. ಇನ್ನು ರೇಷ್ಮೆ ಗೂಡು ತಯಾರಾದಮೇಲೆ ಅದನ್ನು ಮಾರಾಟ ಮಾಡುವುದಕ್ಕೆ ರೇಷ್ಮೆ ಕೈಗಾರಿಕೆ ವ್ಯವಸಾಯ ಯಾವ್ಯಾವ ಭಾಗದಲ್ಲಿದೆ, ರೆಗ್ಯುಲೇಟೆಡ್ ಕಕೂನ್ಸ್ ಮಾರ್ಕೆಟ್ಸ್ ಎಲ್ಲೆಲ್ಲಿ ತೆರೆದಿದ್ದಾರೆಂಬುದನ್ನು ನೋಡಬೇಕು. ಆ ರೀತಿ ಮಾಡುವ ಕಾಲಕ್ಕೆ ಕಾನೂನಿನಲ್ಲಿ ಏನು ಅಡ್ಡಿ ಆತಂಕಗಳಿವೆ, ನ್ಯೂನತೆಗಳಿವೆ ಎಂಬುದನ್ನು ನಾವು ಕಳೆದ 2 ವರ್ಷಗಳಿಂದ ಹೇಳಿದ್ದರೂ ಅವನ್ನು ಸರಿಪಡಿಸುವುದಕ್ಕೆ ಒಂದು ತಿದ್ದುಪಡಿಯನ್ನೂ ಕಾನೂನಿನಲ್ಲಿ ಮಾಡಲಿಲ್ಲ. ಕೇವಲ 3—4 ತಿಂಗಳು ಈ ಕೈಗಾರಿಕೆ ನಡೆದು ಈಗ ನಿಂತುಹೋಗಿವೆ. ಸಿಬ್ಬಂದಿವರ್ಗಕ್ಕೆ ಸಂಬಳವನ್ನೇ ಕೊಡುತ್ತಿಲ್ಲ. ಅದಕ್ಕೆ ಆಗುವ ನಷ್ಟವನ್ನೂ ಸರ್ಕಾರದವರು ಕೊಡುತ್ತಿದ್ದಾರೆ. ಆದ್ದರಿಂದ ಸಂಬಂಧಪಟ್ಟ ಮಂತ್ರಿಗಳು ಬಹು ಬೇಗ ಈ ಕಾನೂನಿಗೆ ತಿದ್ದುಪಡಿ ತಂದು ಅವರು ತಯಾರುಮಾಡುವ ರೇಷ್ಮೆ ಗೂಡನ್ನು ಮಾರ್ಕೆಟ್ ಮಾಡಲು ವ್ಯವಸ್ಥೆಮಾಡಬೇಕು. ರೈತ ಬೆಳೆದ ಗೂಡಿಗೆ ನ್ಯಾಯವಾದ ಬೆಲೆ ಸಿಗುವ ರೀತಿಯಲ್ಲಿ ಸರ್ಕಾರದ ವತಿಯಿಂದ ನಡೆಸುವ ಫಿಲೇಚರ್ ಇಂಡಸ್ಟ್ರಿಯವರು ಕೊಂಡುಕೊಳ್ಳುವ ವ್ಯವಸ್ಥೆಮಾಡಬೇಕು. ಕೊನೆಯದಾಗಿ ಈ ನೂಲನ್ನು ಮಾರಾಟಮಾಡುವ ಹಂತದಲ್ಲಿ ರಾಜ್ಯಮಟ್ಟದಲ್ಲಿ ಸಿಲ್ಕ್

ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿಯವರು ಏನು ಮಾಡಿದ್ದಾರೋ ಹಾಗೆ ಸರ್ಕಾರದ ಫಿಲೇಚರ್‌ನಿಂದ ಬಂದಂತ ರೇಷ್ಮೆಯನ್ನು ಮಾರ್ಕೆಟ್ಟಿನಲ್ಲಿಟ್ಟು ಮರಾಟಮಾಡುವುದಕ್ಕೆ ವ್ಯವಸ್ಥೆ ಮಾಡುತ್ತಾರೆಂದು ನಾನು ನಂಬಿದ್ದೇನೆ. ಸರ್ಕಾರದ ವತಿಯಿಂದ ಗ್ಯಾರಂಟಿ ಪಡೆದವರು ಕೆಲವು ಕಮರ್ಷಿಯಲ್ ಬ್ಯಾಂಕ್ಸ್ ನಿಂದ 25 ಲಕ್ಷ ರೂಪಾಯಿಗಳ ಸಾಲ ಪಡೆದು ವ್ಯಾಪಾರ ವಹಿವಾಟು ಮಾಡುವುದಕ್ಕೆ ವ್ಯವಸ್ಥೆಮಾಡಿದ್ದಾರೆ. ಆದರೆ ಅಲ್ಲಿರುವ ಕೆಲಸಕಾರ್ಯಗಳನ್ನು ಹೇಳಬೇಕಾದರೆ ಚಿಂತಾಜನಕ ವಾಗಿವೆ. ಈ ವರ್ಷ ಲಾಭದಾಯಕ ದೃಷ್ಟಿ ಇರುವ ಜನಗಳ ಕೈಗೆ ಸಿಕ್ಕಿ ಸರ್ಕಾರದ ವತಿಯಿಂದ ಕೆಲಸಮಾಡುತ್ತಿದ್ದ ಕಾರ್ಖಾನೆಗಳನ್ನು ವ್ಯವಸ್ಥಿತವಾಗಿ ನಡೆಸುವುದಕ್ಕೆ ಆಗದೆ ಇವತ್ತು ಸಿಲ್ಕ್ ಮಾರ್ಕೆಟಿಂಗ್ ಸೊಸೈಟಿಯಲ್ಲಿ ಲಾಭಕೋರರದೇ ಒಂದು ಸಂಘ ಸಂಸ್ಥೆಯಾಗಿ ಉಳಿದು, ಸುಮಾರು ಒಂದು ಲಕ್ಷ ಕೆ. ಜಿ. ವರೆಗೂ ರೇಷ್ಮೆಯನ್ನು ಸ್ಟಾಕ್‌ಮಾಡಿ ಅವರು ಲಾಭದಾಯಕವಾಗಿ ಮಾರುತ್ತಿದ್ದಾರೆ. ಸರ್ಕಾರದವರು ಒಂದು ಕೆ. ಜಿ. ರೇಷ್ಮೆಗೆ 10 ರೂಪಾಯಿಗಳನ್ನು ಕಡಮೆ ಮಾಡಿದ್ದರಿಂದ ಲಕ್ಷಾಂತರ ರೂಪಾಯಿಗಳ ನಷ್ಟವಾಗುವ ಪರಿಸ್ಥಿತಿ ಬಂದಿದೆ. ಆದ್ದರಿಂದ ಸರ್ಕಾರದವರು ಈ ಬಗ್ಗೆ ಕುತೂಹಲದಿಂದ, ಅದರ ವ್ಯವಹಾರದ ಬಗ್ಗೆ ತನಿಖೆ ನಡೆಸಬೇಕು. ಮತ್ತು ರೇಷ್ಮೆ ಇಲಾಖೆಗೆ ಸಂಬಂಧಪಟ್ಟಹಾಗೆ, ದಯವಿಟ್ಟು ಈ ಸೆಂಟ್ರಲ್ ಸಿಲ್ಕ್ ಬೋರ್ಡನ್ನು ಬೆಂಗಳೂರಿನಲ್ಲಿ ಸ್ಥಾಪನೆ ಮಾಡುವ ಹಾಗೆ ಕೇಂದ್ರ ಸರ್ಕಾರವನ್ನೂ ಮತ್ತು ರೇಷ್ಮೆ ಬೋರ್ಡನ್ನೂ ಒತ್ತಾಯ ಮಾಡ ಬೇಕೆಂದು ಹೇಳಿ, ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

5-00 P.M.

ಶ್ರೀ ಬಿ. ವೆಂಕಟರಾಯಪ್ಪ (ಶಿಡ್ಲಘಟ್ಟ).—ಸನ್ಮಾನ್ಯ ಸಭಾಪತಿಯವರೇ, ಸಂಸ್ಥಾನದ ಕೈಗಾರಿಕಾ ಮಂತ್ರಿಯವರು ನಮ್ಮ ಮುಂದೆ ಇಟ್ಟಿರತಕ್ಕಂತಹ ಬೇಡಿಕೆಗಳನ್ನು ಅನುಮೋದಿಸುತ್ತಾ, ಒಂದೆರಡು ಸಲಹೆಗಳನ್ನು ಕೊಡುತ್ತೇನೆ. ನಾನು ಮುಖ್ಯವಾಗಿ ರೇಷ್ಮೆ ಕೈಗಾರಿಕೆಯ ಬಗ್ಗೆ ಕೆಲವು ಸಲಹೆಗಳನ್ನು ಕೊಡುತ್ತೇನೆ. ನಮ್ಮ ಮೈಸೂರು ರಾಜ್ಯವು ಭರತ ಖಂಡದಲ್ಲೇ ರೇಷ್ಮೆ ಬೆಳೆಗೆ ಬಹಳ ಪ್ರಾಮುಖ್ಯವಾದ ಸ್ಥಾನವನ್ನು ಪಡೆದಿದೆ. ನಮ್ಮ ರಾಜ್ಯದಲ್ಲಿ ಇಡೀ ದೇಶದಲ್ಲಿ ಉತ್ಪನ್ನ ಮಾಡ ತಕ್ಕ ರೇಷ್ಮೆಯಲ್ಲಿ 75 ಭಾಗವನ್ನು ಇಲ್ಲಿ ಉತ್ಪನ್ನ ಮಾಡುತ್ತಿದ್ದೇವೆ. ಜಮ್ಮು ಮತ್ತು ಕಾಶ್ಮೀರದಲ್ಲಿ ಸ್ವಲ್ಪ ಸ್ವಲ್ಪ ಉತ್ಪತ್ತಿಯಾಗುತ್ತದೆ, ಈ ರೇಷ್ಮೆ ಕೈಗಾರಿಕೆ ಬಹಳ ಪುರಾತನವಾದ ಕೈಗಾರಿಕೆ. ಎಲ್ಲೆಲ್ಲಿ ಮಳೆ ಕಡಿಮೆ ಇದೆ, ಅಲ್ಲಿ ಇದು ಹೆಚ್ಚಾಗಿದೆ. ಇದರಿಂದ, ಪ್ರತ್ಯಕ್ಷವಾಗಿ ಮತ್ತು ಪರೋಕ್ಷ ವಾಗಿ, ಸುಮಾರು 10 ಲಕ್ಷ ಜನರಿಗೆ ಜೀವನೋಪಾಯವನ್ನು ಒದಗಿಸಿದೆ ಎಂದು ಹೇಳಿದರೆ ತಪ್ಪಾಗ ಲಾರದು. ಇಂಥ ಒಂದು ಕೈಗಾರಿಕೆ ನಮ್ಮ ದೇಶದಲ್ಲಿ ಅತೀ ದೀರ್ಘಕಾಲದಿಂದ ಉಳಿದುಕೊಂಡು ಬರಬೇಕಾದರೆ, ಇದಕ್ಕೆ ಕೇಂದ್ರ ಸರ್ಕಾರ ಬಹಳ ಮಟ್ಟಿಗೆ ಕಾರಣ. ರೇಷ್ಮೆ ಕೈಗಾರಿಕೆಯಲ್ಲಿ ಜಪಾನಿನಂತಹ ಮುಂದುವರಿದ ರಾಷ್ಟ್ರದೊಂದಿಗೆ ಪೈಪೋಟಿ ಮಾಡಬೇಕಾಗುತ್ತದೆ. ಆ ದೇಶದಿಂದ ನಮ್ಮ ರಾಜ್ಯಕ್ಕೆ ಅತೀ ಹೆಚ್ಚಿನಮಟ್ಟಿಗೆ ರೇಷ್ಮೆಯನ್ನು ಆಮದುಮಾಡಿಕೊಳ್ಳುತ್ತಿದ್ದರು. ಅವರು ಕಡಿಮೆ ವೆಚ್ಚದಲ್ಲಿ ಹೆಚ್ಚಿನ ಗುಣ ಹೊಂದಿರತಕ್ಕ ರೇಷ್ಮೆಯ ಉತ್ಪತ್ತಿಯನ್ನು ಮಾಡುತ್ತಿದ್ದರು. ಕೇಂದ್ರ ಸರ್ಕಾರದವರು ಮತ್ತು ಟ್ಯಾರಿಫ್ ಕಮಿಶನಿನವರು ಇದಕ್ಕೆ ರಕ್ಷಣೆ ಕೊಟ್ಟು, ಅದನ್ನು ಆಮದು ಮಾಡಿಕೊಳ್ಳುವುದನ್ನು ಕಡಿಮೆ ಮಾಡಿದ್ದಾರೆ. ನಮ್ಮ ರಾಜ್ಯ ಸರ್ಕಾರದವರೂ ಇದಕ್ಕೆ ಬಹಳ ಪ್ರಯತ್ನ ಮಾಡಿದ್ದಾರೆ. ನಮ್ಮ ಸಂಸ್ಥಾನ ಸರ್ಕಾರ ಇದಕ್ಕೆ ಪ್ರಯತ್ನ ಮಾಡದೆ ಹೋಗಿದ್ದರೆ. ಇಷ್ಟರಲ್ಲೇ ಈ ಕೈಗಾರಿಕೆ ಕುಂಠಿತವಾಗಿ ರೈತಾಪಿ ಜನರಿಗೆ ಬಹಳ ತೊಂದರೆಯಾಗುತಿತ್ತು. ಆದ್ದರಿಂದ ಈ ದಿಸೆಯಲ್ಲಿ ರಾಜ್ಯ ಸರ್ಕಾರವನ್ನು ಅಭಿನಂದಿಸಬೇಕಾಗಿದೆ. ಇಷ್ಟರವರೆಗೆ ಈ ಇಲಾಖೆಯ ಮುಖಾಂತರ ರೇಷ್ಮೆ ವ್ಯವಸಾಯಗಾರರಿಗೆ ಸಾಕಷ್ಟು ಸಾಲ ಸೌಲಭ್ಯಗಳನ್ನು ಒದಗಿಸುತ್ತಿದ್ದರು. ಈಗ ಒಂದು ಹೊಸ ಪಾಲಿಸಿಯನ್ನು ಮಾಡಿ, ಭೂ ಅಭಿವೃದ್ಧಿ ಬ್ಯಾಂಕಿನ ಮೂಲಕ ರೇಷ್ಮೆ ಕೈಗಾರಿಕಾಭಿವೃದ್ಧಿ ಸಾಲ ಕೊಡಲು ವ್ಯವಸ್ಥೆ ಮಾಡಿರುವುದು ಶೋಚನೀಯ ಸಹಕಾರಿ ಡಿಮ್ಯಾಂಡ್ ಬಂದಾಗ ಅದರ ಕತೆ ಹೇಳುತ್ತೇನೆ. ಈ ರೇಷ್ಮೆ ಕೈಗಾರಿಕೆಯ ಹಿತದೃಷ್ಟಿಯಿಂದ ಈ ಒಂದು ಸಾಲವನ್ನು ನೇರವಾಗಿ ರೇಷ್ಮೆ ಇಲಾಖೆಯ ಮುಖಾಂತರ ರೈತರಿಗೆ ಒದಗಿಸಿದರೆ, ನಿಜವಾಗಿಯೂ ಬಹಳ ಅವರಿಗೆ ಸಹಾಯವಾಗುತ್ತದೆ, ಆ ಕೆಲಸವನ್ನು ಸರ್ಕಾರದವರು ಮಾಡಬೇಕೆಂದು ಮಾನ್ಯ ಮಂತ್ರಿಯವರಲ್ಲಿ ಕೇಳಿಕೊಳ್ಳುತ್ತೇನೆ. ಇವತ್ತು ಈ ಕೈಗಾರಿಕೆ ಅಭಿವೃದ್ಧಿಯಾಗಬೇಕಾದರೆ, ಇದರ ಬಿತ್ತನೆ ಬಹಳ ಮುಖ್ಯವಾದುದು. ನಮ್ಮಲ್ಲಿ ಅನೇಕ ಸಲ ರೈತರು ಉತ್ತಮ ಬಿತ್ತನೆಗಾಗಿ ಪರದಾಡುತ್ತಾರೆ. ಇವತ್ತು ಬಿತ್ತನೆಯ ಬೆಲೆ ಕೂಡ ಏರುಪೇರಾಗುತ್ತದೆ. ಒಂದು ಕಡೆ ಸರ್ಕಾರದವರು ಬಿತ್ತನೆ ಮಾಡುತ್ತಿದ್ದಾರೆ, ಇನ್ನೊಂದು ಕಡೆ ಖಾಸಗೀಯವರೂ ಮಾಡುತ್ತಿದ್ದಾರೆ. ಮಳೆ ಬಂದರೆ ಇದರ ದರಗಳು ಜಾಸ್ತಿಯಾಗುತ್ತದೆ; ಮತ್ತು ರೈತರು ಹೆಚ್ಚು ಹೆಚ್ಚು ದುಡ್ಡು ಕೊಡಬೇಕಾಗುತ್ತದೆ. ಆದ್ದರಿಂದ ಸರ್ಕಾರದವರು ಹೆಚ್ಚು ಹೆಚ್ಚು ಜಪಾನ್ ದೇಶದಿಂದ ಬಿತ್ತನೆ ತಳಿಯನ್ನು ಆಮದು

(ಶ್ರೀ ಬಿ. ವೆಂಕಟರಾಯಪ್ಪ)

ಮಾಡಿಕೊಳ್ಳುತ್ತಿದ್ದಾರೆ. ಆದುದನ್ನು ಇನ್ನೂ ಹೆಚ್ಚು ಮಾಡಿ, ಜನರಿಗೆ ಹೆಚ್ಚಿನ ರೀತಿಯಲ್ಲಿ ದರ ಏರುಪೇರಾಗದ ರೀತಿಯಲ್ಲಿ ಒದಗಿಸಿ ಸಹಾಯಮಾಡಬೇಕೆಂದು ಸಲಹೆಮಾಡುತ್ತೇನೆ. ನಂತರ ರೇಶ್ಮೆ ಬಗ್ಗೆ ಅನೇಕ ಜಾತಿ ಕೇಂದ್ರಗಳನ್ನು ಸರ್ಕಾರದವರು ತೆರೆದಿದ್ದಾರೆ. ಇದನ್ನು ಹೊಸ ಕಡೆಗಳಲ್ಲೂ ಸ್ಥಾಪನೆ ಮಾಡುವುದಕ್ಕೆ ಹೊರಟಿದ್ದಾರೆ. ಹುಳು ಸಾಕತಕ್ಕ ರೈತರಿಗೆ ಹೆಚ್ಚು ಹೆಚ್ಚು ಸಾಲಗಳನ್ನು ಒದಗಿಸಿ, ಅವರ ಆರ್ಥಿಕಮಟ್ಟವನ್ನು ಅಭಿವೃದ್ಧಿಪಡಿಸುವುದಕ್ಕೆ ಸರ್ಕಾರದವರು ಮನಸ್ಸು ಮಾಡಬೇಕು. ಜೊತೆಗೆ ಮಳೆಗಾಲದಲ್ಲಿ ರೇಶ್ಮೆ ಬಹಳ ಮಟ್ಟಿಗೆ ಕೆಡುತ್ತಿದೆ. ಜಪಾನಿನಲ್ಲಿ ಹಾಗೆ ಇಲ್ಲ. ಈ ಒಂದು ಹುಳು ಕೆಡುವ ಬಗ್ಗೆ ಇಲಾಖೆಯವರು ಹೆಚ್ಚಿನ ಮನಸ್ಸು ಕೊಡಬೇಕು. ಮೈಸೂರಿನಲ್ಲಿ ಒಂದು ರಿಸರ್ಚ್ ಸ್ಟೇಷನ್ ಇದೆ. ಅವರು ಇದಕ್ಕೆ ಹೆಚ್ಚಿನ ಗಮನ ಕೊಡಬೇಕು. ಮತ್ತು ಅವರು ಶ್ರಮ ವಹಿಸಿ, ಸಾಕಷ್ಟು ಉತ್ತಮವಾದ ತಳಿಗಳನ್ನು ತಯಾರುಮಾಡುವುದಲ್ಲದೆ, ತಮ್ಮ ದೇಶದ ಹವೆಗೆ, ನಮ್ಮ ರೈತರಿಗೆ, ಹೊಂದುವ ತಳಿಯನ್ನು ಸಂಶೋಧನೆ ಮಾಡಿ ಬಿಡುಗಡೆ ಮಾಡಬೇಕಾಗುತ್ತದೆ. ಅದನ್ನು ಅವರು ಮಾಡುತ್ತಾರೆಂದು ತಿಳಿದುಕೊಂಡಿದ್ದೇನೆ. ಜೊತೆಗೆ ಈ ಸಂಶೋಧನಾ ಕೇಂದ್ರ ಕೇಂದ್ರದವರ ಆಡಳಿತದಲ್ಲವೆ ಮೈಸೂರು ಸರ್ಕಾರದವರು ಹೆಚ್ಚಿನ ಶ್ರದ್ಧೆ ವಹಿಸಿ, ಈ ಸಂಶೋಧನೆ ಬಗ್ಗೆ ಹೆಚ್ಚಿನ ಪ್ರಗತಿಯನ್ನು ಸಾಧಿಸುವುದಕ್ಕೆ ಪ್ರಯತ್ನ ಮಾಡಬೇಕಾಗಿದೆ. ಇವತ್ತು ಸೆಂಟ್ರರ್ ಸಿಲ್ಕ್ ಬೋರ್ಡು ಬೊಂಬಾಯಿಯಲ್ಲಿದೆ. ಇದನ್ನು ಅಲ್ಲಿ ಏಕೆ ಮಾಡಿದರು ! ಬೊಂಬಾಯಿಯಲ್ಲಿ ಯಾರೂ ರೇಶ್ಮೆ ಬೆಳೆಯುವವರಿಲ್ಲ. 100ಕ್ಕೆ 75 ಭಾಗ ಮೈಸೂರಿನಲ್ಲಿರುವುದು. ಹೋದ ಸಾರಿ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೇನೆ. ಪಾರ್ಲಿಮೆಂಟಿನಲ್ಲೂ ಈ ವಿಚಾರ ಅನೇಕ ಸಲ ಬಂದಾಗ ಮೈಸೂರಿಗೆ ವರ್ಗಾವಣೆ ಮಾಡುತ್ತೇವೆಂದು ಹೇಳಿದ್ದಾರೆ. ಹಿಂದಿನ ಮುಖ್ಯಮಂತ್ರಿಯವರು ನಾನು ಪ್ರಯತ್ನ ಮಾಡುತ್ತೇನೆಂದು ಆಶ್ವಾಸನೆಯನ್ನು ಕೊಟ್ಟಿದ್ದಾರೆ. ನಮ್ಮ ರಾಜ್ಯ ಸರ್ಕಾರದವರು ಇದಕ್ಕೆ ಏನು ಮಾಡಿದ್ದಾರೆಂದು ಗೊತ್ತಿಲ್ಲ. ಆದ್ದರಿಂದ ಸೆಂಟ್ರರ್ ಸಿಲ್ಕ್ ಬೋರ್ಡ್ ಮೈಸೂರು ರಾಜ್ಯಕ್ಕೆ ವರ್ಗಾವಣೆ ಮಾಡುವುದಕ್ಕೆ ಬೇಕಾದ ಪ್ರಯತ್ನ ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಅದೇ ರೀತಿ ಸೆಂಟ್ರರ್ ಸಿಲ್ಕ್ ಬೋರ್ಡಿನಲ್ಲಿ ಅಧ್ಯಕ್ಷರಾಗಿದ್ದವರು ಹೋಲ್ ಟೈಮ ಅಧ್ಯಕ್ಷರಾಗಿಲ್ಲ. ಅವರನ್ನೂ ಪೂರ್ಣ ಕಾಲದ ಅಧ್ಯಕ್ಷರನ್ನಾಗಿ ಮಾಡಿ ಅದು ಇನ್ನೂ ಬಲಯುತವಾಗಿ ಕೆಲಸ ಮಾಡುವಂತೆ ರಾಜ್ಯ ಸರ್ಕಾರದವರು ಪ್ರಯತ್ನ ಮಾಡಬೇಕು. ಜೊತೆಗೆ ಈ ಗೂಡಿನ ಮಾರಾಟ ಕೇಂದ್ರಗಳನ್ನು ಇತ್ತೀಚೆಗೆ ಒಂದೆರಡು ವರ್ಷಗಳಲ್ಲಿ ಮಾಡಿದ್ದಾರೆ. ಒಂದು ಕಡೆ ಸರ್ಕಾರ ಕಕೂನುಗಳ ಮಾರುಕಟ್ಟೆ, ಇನ್ನೊಂದು ಕಡೆ ಖಾಸಗೀಯವರದ್ದು ರೈತರು ಯಾರು ಸರ್ಕಾರದ ಮಾರುಕಟ್ಟೆಗೆ ಹೋಗುತ್ತಾ ಇಲ್ಲ. ಎಲ್ಲರೂ ಖಾಸಗಿಯವರದ್ದಕ್ಕೇ ಹೋಗುತ್ತಿದ್ದಾರೆ. ಇದರಿಂದ ಸರ್ಕಾರದವರು ಇದಕ್ಕೆ ಏನು ಖರ್ಚು ಮಾಡಿದ್ದಾರೆ, ಅದು ವ್ಯರ್ಥವಾಗುತ್ತದೆ. ಆಕಾರಣ ಸರ್ಕಾರಿ ಮಾರ್ಕೆಟ್ಟನ್ನು ಮುಚ್ಚಬೇಕು, ಇಲ್ಲದಿದ್ದರೆ, ಈ ಬಗ್ಗೆ ಒಂದು ಕಾನೂನು ಮಾಡಿ ಸರ್ಕಾರದ ಮಟ್ಟದಲ್ಲೇ ಮಾರುವಂತ ವ್ಯವಸ್ಥೆ ಮಾಡಬೇಕು. ಇನ್ನು ಸಿಲ್ಕ್ ಫಿಲೇಚರ್ಸ್ ಏನಿವೆ, ಅವುಗಳಲ್ಲಿ ಸರ್ಕಾರದ ವತಿಯಿಂದ ನಡೆಯತಕ್ಕ ಒಂದೆರಡು ಫಿಲೇಚರುಗಳಲ್ಲಿ ನಷ್ಟವಾಗುತ್ತಿದೆಯೆಂದು ಮುಚ್ಚಬೇಕೆಂದು ಆಜ್ಞೆ ಮಾಡಿದ್ದಾರೆ. ಯಾವಾಗ ಸಿಲ್ಕ್ ಫಿಲೇಚರ್ ಮುಚ್ಚಿದರು ಆಗ ತಾನಾಗಿಯೇ ಗೂಡಿನ ದರ ಕಡಿಮೆಯಾಗುತ್ತದೆ. ನಮ್ಮ ಸಂಸ್ಥಾನದಲ್ಲಿ ಬಹಳ ನಷ್ಟವಾಗತಕ್ಕ ಕೈಗಾರಿಕೆಗಳೂ ಇವೆ. ಆದರೆ ಈ ರೇಶ್ಮೆಯ ಫಿಲೇಚರನ್ನು ಒಂದು ಕಾರಣದಮೇಲೆ ಮುಚ್ಚಿದರೆ, ಅದನ್ನು ನಂಬಿಕೊಂಡಿರುವ ಕೆಲಸಗಾರರಿಗೆ ಕೆಲಸವಿಲ್ಲದ ಹಾಗೆ ಆಗಿ ಬಹಳ ಕಷ್ಟವಾಗುತ್ತದೆ. ಆದ್ದರಿಂದ ಅದನ್ನು ಮುಚ್ಚುವುದು ಒಳ್ಳೇಯದಲ್ಲವೆಂದು ಹೇಳುತ್ತೇನೆ. ಒಂದು ವೇಳೆ ನಷ್ಟವಾದರೂ ಚಿಂತೆ ಇಲ್ಲ, ಅಥವ ನಷ್ಟವಾಗದ ರೀತಿಯಲ್ಲಿ ಒಂದು ಸರಿಯಾದ ನೀತಿಯನ್ನು ಅನುಸರಿಸಿ, ಹೆಚ್ಚು ಎಸ್ಟಾಬ್ಲಿಷ್‌ಮೆಂಟ್ ಇದ್ದರೆ, ಅದನ್ನು ಕಡಿಮೆ ಮಾಡಿ, ಈ ಸಿಲ್ಕ್ ಫಿಲೇಚರನ್ನು ನಡೆಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಸೂಚಿಸುತ್ತೇನೆ. ಇನ್ನು ಸಂಸ್ಥಾನ ಮಟ್ಟದಲ್ಲಿ ರೇಶ್ಮೆ ಮಾರಾಟದ ಬಗ್ಗೆ ಸಿಲ್ಕ್ ಮಾರ್ಕೆಟಿಂಗ್ ಸೊಸೈಟಿ ಎಂದು ಸ್ಥಾಪನೆ ಮಾಡಿದ್ದಾರೆ. ಅನೇಕ ಜನ ರೇಷ್ಮೆ ವ್ಯಾಪಾರಸ್ಥರು ಸೊಸೈಟಿಗಳಲ್ಲಿ ಹಣವನ್ನು ಸಾಲ ತೆಗೆದುಕೊಳ್ಳುತ್ತಾರೆ. ಹಣದ ಅಭಾವದಿಂದ ಅವರಿಗೆ ಬಹಳ ತೊಂದರೆ ಇರುವಾಗ ರೇಷ್ಮೆ ಬೆಲೆ ಏರುಪೇರಾಗುತ್ತದೆ. ಸೊಸೈಟಿ ಶೇಕಡ 10 ರೂಪಾಯಿ ಬಡ್ಡಿ ಪ್ರಕಾರ ಅವರಿಗೆ ಸಾಲವನ್ನು ಒದಗಿಸುತ್ತಾರೆ. ಅದು ಅಪ್ರತ್ಯಕ್ಷವಾಗಿ ರೇಷ್ಮೆಯನ್ನು ಬೆಳೆಯುವ ರೈತರ ಮೇಲೆ ಬೀಳುತ್ತದೆ. ಅದ್ದರಿಂದ ಸರ್ಕಾರದವರು ಸುಲಭ ಬಡ್ಡಿ ದರದಲ್ಲಿ ಸಹಕಾರ ಸಂಘದಿಂದ ರೇಷ್ಮೆ ವ್ಯಾಪಾರಸ್ಥರಿಗೆ ಹಾಗು ರೇಷ್ಮೆ ವ್ಯವಸಾಯಗಾರರಿಗೂ ಸಾಲವನ್ನು ಒದಗಿಸಿ ರೇಷ್ಮೆ ಕೈಗಾರಿಕೆಗೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡಬೇಕು ಎಂದು ನಾನು ಹೇಳುತ್ತೇನೆ. ಇದರಿಂದ ರೈತರಿಗೂ ಅನುಕೂಲವಾಗುತ್ತದೆ. ಮತ್ತು ವ್ಯಾಪಾರಸ್ಥರಿಗೂ ಅನು

ಕೂಲವಾಗತ್ತದೆ. ಈ ಒಂದು ಕೆಲಸವನ್ನು ಮಾನ್ಯ ರೇಷ್ಮೆ ಇಲಾಖೆಯ ಮಂತ್ರಿಗಳು ಆದಷ್ಟು ತೀವ್ರವಾಗಿ ನೆರವೇರಿಸಿ ಕೊಡಬೇಕೆಂದು ಹೇಳಿ ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇವೆ.

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ಮಾನ್ಯ ಮಿತ್ರರನೇಕರು ಈ ಬೇಡಿಕೆಯ ಬಗ್ಗೆ ಮಾತನಾಡಿದ್ದಾರೆ. ಇದರಲ್ಲಿ ಕೆಲವು ಮಾನ್ಯ ಸದಸ್ಯರು ಮಾತನಾಡಿದ್ದನ್ನು ನಾನು ಕೇಳಿದ್ದೇನೆ. ಶ್ರೀಮಾನ್ ಸಿದ್ಧವೀರಪ್ಪನವರು ಮತ್ತು ಶ್ರೀಮಾನ್ ದೇವರಾಜ್ ಅರಸ್ ಅವರು ಬಹಳ ಉದ್ವೇಗ ಪೂರಿಕವಾಗಿ ಕೆಲವು ವಿಷಯಗಳನ್ನು ಹೇಳಿದ್ದಾರೆ. ಇವೊತ್ತಿನ ದಿವಸ ನನಗೆ ಬಹಳ ವ್ಯಥೆಯಾಗುತ್ತದೆ. ಮೈಸೂರು ರಾಜ್ಯ ಕೈಗಾರಿಕೆಯಲ್ಲಿ ಎಲ್ಲಾ ವಿಷಯದಲ್ಲೂ ಮೊದಲನೆಯದಾಗಿತ್ತು, ಮೊದಲಿಗರಾಗಿ ಮುಂದೆ ಇದ್ದ ರಾಜ್ಯ ಇವೊತ್ತು ಹಿಂದುಹಿಂದಕ್ಕೆ ಹೋಗುತ್ತಿದೆಯೆಂದು ನನಗೆ ವ್ಯಥೆಯಾಗುತ್ತಿದೆ. 1894ರಲ್ಲಿ ಹಳೆಯ ಮೈಸೂರಿನಲ್ಲಿ ಖನಿಜ ಸಂಪತ್ತನ್ನು ಕಂಡುಹಿಡಿದು ಆಗ ಅದಕ್ಕೆ ಒಂದು ಇಲಾಖೆಯನ್ನು ರಚನೆ ಮಾಡಿದವರು ಮೊದಲು ಮೈಸೂರಿನವರು. 1902ನೇ ಇಸವಿಯಲ್ಲಿ ಕಾವೇರಿ ಹೈಡ್ರೋ ಎಲೆಕ್ಟ್ರಿಕ್ ಯೋಜನೆಯಿಂದ ಪವರ್ ತೆಗೆದು ಆಗ 92 ಮೈಲಿ ದೂರದಷ್ಟು ಎಲೆಕ್ಟ್ರಿಕ್ ಲೈನನ್ನು ನಮ್ಮ ರಾಜದ್ಯಲ್ಲಿ ಹಾಕಿದ್ದಾರೆ. ಡಾ. ಸರ್. ಎಂ. ವಿಶ್ವೇಶ್ವರಯ್ಯನವರ ಕಾಲದಲ್ಲಿ ಕೆ. ಜಿ. ಎಫ್. ಮತ್ತು ಬೆಂಗಳೂರು, ಭದ್ರಾವತಿ ಮುಂತಾದ ಪ್ರದೇಶಗಳಲ್ಲಿ ಸಾರ್ವಜನಿಕ ಕ್ಷೇತ್ರದಲ್ಲಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡಿ ಅವುಗಳಲ್ಲಿ ಹೆಚ್ಚು ಉತ್ಪನ್ನ ಬರುವಂತೆ ಮಾಡಿ ಕೈಗಾರಿಕಾಕ್ಷೇತ್ರದಲ್ಲಿ ನಮ್ಮ ರಾಜ್ಯ ಮೊದಲಿಗರಾಗಿ ಮುಂದುವರಿದಿದ್ದಂಥಾದ್ದನ್ನು ನಾವು ಇಂದು ಮರೆಯುವ ಹಾಗಿಲ್ಲ. ಕೈಗಾರಿಕೆಗಳಲ್ಲಿ ಮುಂದುವರಿದ ರಾಜ್ಯಗಳು ಆಗ ಒಂದೆರಡು ರಾಜ್ಯಗಳೂ ಇದ್ದಿರಬಹುದು. ಆದರೂ ಸಹ ಮೊದಲನೆ ಬಾರಿಗೆ ಉಕ್ಕಿನ ಕಾರ್ಖಾನೆ ನಮ್ಮ ರಾಜ್ಯದಲ್ಲಿ ಬಂತು. ಇಂಥಾ ಪರಿಸ್ಥಿತಿಯಲ್ಲಿ ಇದ್ದದ್ದು ಸ್ವಾತಂತ್ರ್ಯ ಬಂದ ತರುವಾಯ ಕಳೆದ 22ವರ್ಷಗಳ ನಂತರ ಪರಿಸ್ಥಿತಿ ಏನಾಗಿದೆ ಎಂಬುದನ್ನು ಸ್ವಲ್ಪ ವಿಚಾರ ಮಾಡಬೇಕಾಗಿದೆ. ಮಾನ್ಯ ಮಂತ್ರಿಗಳು ಹೇಳುತ್ತಾರೆ, 3 ಪಂಚವಾರ್ಷಿಕ ಯೋಜನೆಗಳಲ್ಲಿಯೂ ಕೈಗಾರಿಕೆಗೆ ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡಿದ್ದೇವೆ, ಕೈಗಾರಿಕೆಗಳು ಬೆಳೆದಿವೆ ಮುಂದೆ ಹೋಗುತ್ತಿದೆ ಎಂದು. ಕೆಲವು ಮಂತ್ರಿಗಳು ಹೇಳುತ್ತಾರೆ ಈ ಕೈಗಾರಿಕೆಗೆ ಸಂಬಂಧಪಟ್ಟಹಾಗೆ ತತ್ವವನ್ನು ಬದಲಾವಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ ಎಂದು.

ಈಗ 22 ವರ್ಷಗಳಿಂದ ಕೈಗಾರಿಕೆ ಸಂಬಂಧದಲ್ಲಿ ಇವರು ಏನುಮಾಡಿದ್ದಾರೆ ಎನ್ನತಕ್ಕ ಅಂಕಿಅಂಶಗಳನ್ನು ಕೊಟ್ಟು ವಿವರವಾಗಿ ಹೇಳಬಲ್ಲೆ. ಆದರೆ ಕಾಲಾವಕಾಶ ಇಲ್ಲದೆ ಇರುವುದರಿಂದ ಆ ವಿಷಯದಲ್ಲಿ ಹೆಚ್ಚು ಹೇಳುವುದಕ್ಕೆ ನಾನು ಇಷ್ಟಪಡುವುದಿಲ್ಲ. ಆದರೆ ನಮ್ಮ ಒಂದೊಂದು ರಾಜ್ಯದಲಿಯೂ ಎಷ್ಟು ಫ್ಯಾಕ್ಟರಿಗಳು ರಿಜಿಸ್ಟರ್ಡ್ ಆಗಿವೆ. ಎಷ್ಟು ಎಂಪ್ಲಾಯ್‌ಮೆಂಟ್ಸ್ ಆಗಿದೆ ಎಂಬುದನ್ನು ನೋಡಿದರೆ ತಮಗೆ ಗೊತ್ತಾಗುತ್ತದೆ.

We are 12th in rank in the number of industries registered in India, 7th in the value added; 10th in the matter of employment. ಶ್ರೀ ಮಾಥೂರ್ ಎಂಬುವವರು ಬರೆದಿರತಕ್ಕ ಇಂಡಸ್ಟ್ರಿಯಲ್ ಎಕಾನಮಿ ಆಫ್ ಡೆವಲಪಿಂಗ್ ರೀಜನ್ ಎಂಬ ಪುಸ್ತಕದಲ್ಲಿ ಈ ಕೈಗಾರಿಕೆಗಳಿಗೆ ಸಂಬಂಧಪಟ್ಟ ಅಂಕಿ ಅಂಶಗಳನ್ನು ನೋಡಿದರೆ ತಮಗೆ ಗೊತ್ತಾಗುತ್ತದೆ 1963 ರಿಂದ 1965 ನೇ ಇಸವಿಯವರೆಗೆ ಇರತಕ್ಕ ಅಂಕಿಗಳನ್ನು ನಾನು ನೋಡಿದ್ದೇನೆ ಸ್ಟ್ಯಾಟಿಸ್ಟಿಕಲ್ ಔಟ್‌ಲೇಯನ್ನು ನೋಡಿದರೂ ಸಹ ಮೂಲಭೂತ ಬದಲಾವಣೆಯಾಗಿಲ್ಲ. ಮುಖ್ಯವಾಗಿ ತಮಗೆ ಗೊತ್ತಿರುವಹಾಗೆ ಖಾಸಗೀ ಕ್ಷೇತ್ರವಾಗಲಿ, ಸರ್ಕಾರಿ ಕ್ಷೇತ್ರವಾಗಲಿ, ಸರ್ಕಾರದವರು ಅವರಿಗೆ ಎಲ್ಲಾರೀತಿಯ ಸಹಾಯವನ್ನು ಮಾಡುತ್ತೇವೆ ಎನ್ನತಕ್ಕದ್ದು ರಾಜ್ಯ ಸರ್ಕಾರದ ಹಾಗೂ ಕೇಂದ್ರಸರ್ಕಾರದ ಧೋರಣೆಯಾಗಿದೆ ತಮಗೆ ಗೊತ್ತಿರುವಹಾಗೆ ಇಂಡಸ್ಟ್ರಿಯಲ್ ಫೈನಾನ್ಸ್ ಕಾರ್ಪೋರೇಷನ್ನಿನವರು ಖಾಸಗೀ ಸಂಸ್ಥೆಗಳಿಗೆ ಅನೇಕ ರೀತಿಯಲ್ಲಿ ಸಹಾಯ ಮಾಡುವುದಕ್ಕೋಸ್ಕರ ಇದ್ದೇವೆ ಎಂದಿದ್ದಾರೆ. ಅವರಿಂದ ನಮ್ಮ ರಾಜ್ಯದವರು ಸಹಾಯವನ್ನು ಪಡೆಯುವುದಕ್ಕೆ ಎಷ್ಟುದೂರ ಹೋಗಿದ್ದಾರೆ ಎಂದರೆ ಇಂಡಸ್ಟ್ರಿಯಲ್ ಎಕಾನಾಮಿ ಆಫ್ ಡೆವಲಪಿಂಗ್ ರೀಜನ್ ಪ್ರಕಾರ ನಾವು ನಮ್ಮ ಶ್ರೇಣಿಯಲ್ಲಿ 9 ನೆಯವರು ಆಗುತ್ತೇವೆ ಅದರಲ್ಲಿ ಟೋಟಲ್ ಲೋನ್ ಸ್ಯಾಂಕ್ಷನ್ ಆಗಿರುವುದು 6.9 ಪರ್ಸೆಂಟ್ ಮಾತ್ರ. ಗುಜರಾತ್, ಮದ್ರಾಸು, ಮಹಾರಾಷ್ಟ್ರ ಮತ್ತು ಪಶ್ಚಿಮ ಬಂಗಾಳದವರು ನಮಗಿಂತಲೂ ಮುಂದೆ ಹೋಗಿದ್ದಾರೆ. ಇದರ ಜೊತೆಗೆ ಐ.ಸಿ.ಐ.ಸಿ. ಸಂಸ್ಥೆಯವರೂ ಸಹ ಕಾರ್ಪೋರೇಟ್ ಸೆಕ್ಟಾರ್ ಮತ್ತು ಪ್ರೈವೇಟ್ ಸೆಕ್ಟಾರ್ ಕೈಗಾರಿಕೆಗಳಿಗೆ ಸಹಾಯ ಮಾಡುತ್ತಾರೆ. ಇದಲ್ಲದೆ ನಾವು ವಿದೇಶಗಳ ನೆರವು ಪಡೆಯಬಹುದು. ಅದರಲ್ಲೂಸಹ ಎಷ್ಟುದೂರ ಸಹಾಯವನ್ನು ಪಡೆದಿದ್ದಾರೆ ಎನ್ನುವ ಅಂಕಿ

(ಶ್ರೀ ಎಂ. ಎಸ್. ಕೃಷ್ಣನ್)

ಅಂಶಗಳನ್ನು ಕೊಡುತ್ತೇನೆ 50 per cent of the loan sanctioned by I. C. I. C. has gone to Maharashtra and Gujarat. Mysore State's share is 6.9 per cent of total loan amount sanctioned. 50 ಪರ್ಸೆಂಟ್ ಲೋನು ಎರಡು ರಾಜ್ಯಗಳು ತೆಗೆದು ಕೊಂಡರೆ 6.9 ಪರ್ಸೆಂಟ್ ನಮಗೆ ಬಂದಿದೆ. ಕೈಗಾರಿಕೆಯಲ್ಲಿ ಗುಜರಾತ್, ಮಹಾರಾಷ್ಟ್ರ ಮತ್ತು ಪಶ್ಚಿಮ ಬಂಗಳಕ್ಕಿಂತ ನಮ್ಮ ರಾಜ್ಯ ಬಹಳ ಹಿಂದೆ ಬಿದ್ದಿದೆ. In the number of factories ಇವೊತ್ತು ಲೆಕ್ಕ ತೆಗೆದು ಕೊಂಡರೆ ನಾವು 8ನೇ ಶ್ರೇಣಿಯಲ್ಲಿ ಇದ್ದೇವೆ. ಯು. ಪಿ., ಆಂಧ್ರದವರು ನಮಗಿಂತ ಒಂದು ಹೆಜ್ಜೆ ಮುಂದೆಹೋಗಿದ್ದಾರೆ. In productive capital we are 10th rank. ಇದರಲ್ಲಿ ಪಂಜಾಬ್ ಮತ್ತು ಒರಿಸ್ಸಾ ರಾಜ್ಯಗಳವರು ನಮಗಿಂತ ಮುಂದೆ ಹೋಗಿದ್ದಾರೆ. ಕೈಗಾರಿಕೆಗಳಿಗೆ ಎಷ್ಟೇ ದುಡ್ಡು ಹಾಕಿದರೂ ಸಹ ಅದರಿಂದ ಲಾಭವನ್ನು ಪಡೆಯಬಹುದು. In employment we are 8th in rank. Value of output 10th in rank, 7th in rank value added by manufacture. ಕೈಗಾರಿಕೆಗಳಿಗೆ ಸರ್ಕಾರ ಮತ್ತು ಸಂಸ್ಥೆಗಳು ಎಷ್ಟು ದೂರ ಸಹಾಯ ಮಾಡುತ್ತಿವೆ, ಆ ಸಹಾಯವನ್ನು ಪಡೆಯು ವುದಕ್ಕೆ ನಮ್ಮ ರಾಜ್ಯದವರು ಸಮರ್ಥರಾಗಿದ್ದಾರೆಯೇ ಎಂದರೆ ನಮ್ಮ ರಾಜ್ಯ ಸರ್ಕಾರದವರು ಬಹಳ ಹಿಂದೆ ಬಿದ್ದಿದ್ದಾರೆ, ಅಸಮರ್ಥರಾಗಿದ್ದಾರೆ ಎಂದು ಅಂಕಿ ಅಂಶಗಳಿಂದ ನಮಗೆ ಸ್ಪಷ್ಟವಾಗಿ ಕಾಣುತ್ತದೆ, ಒಂದು ಹೊಸ ಪಬ್ಲಿಕ್ ಸೆಕ್ಟಾರ್ ಕೈಗಾರಿಕೆಯೂ ಕೂಡ ಕಳೆದ ಆರೇಳು ವರ್ಷಗಳಲ್ಲಿ ನಮ್ಮ ರಾಜ್ಯದಲ್ಲಿ ಸ್ಥಾಪನೆಯಾಗಿಲ್ಲ. ಹಿಂದೆ ಸ್ಥಾಪನೆಯಾದ ಕೈಗಾರಿಕೆಗಳು ಮಾತ್ರ ಅದೃಷ್ಟವಶಾತ್ ಉಳಿದುಕೊಂಡಿವೆ. ಈಗ 2ನೇ ಬಿ. ಇ. ಎಲ್. ಕೈಗಾರಿಕೆಯನ್ನು ಹರಿಯಾಣಕ್ಕೆ ಕೊಡುತ್ತಾರೆಂದು ಕೇಳಿದ್ದೇನೆ. ರೆಂಕೊ ಕೈಗಾರಿಕೆಯು ನಷ್ಟದಲ್ಲಿ ನಡೆಯುತ್ತಿದೆ. ಈ ಬಗ್ಗೆ ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ರೆಂಕೊವನ್ನು ಬೆಲ್ ತೆಗೆದುಕೊಂಡು ನಡೆಸಲಿ ಎಂದು ಹಿಂದೆಯೇ ಹೇಳಿದ್ದೇನೆ. ಮತ್ತೊಮ್ಮೆ ಒತ್ತಾಯ ಪಡಿಸುತ್ತೇನೆ. ಹೊಸಪೇಟೆಯಲ್ಲಿ ಉಕ್ಕಿನ ಕಾರ್ಖಾನೆ ಬರುವ ವಿಷಯ ಏನಾಯಿತು ಎಂಬುದು ಗೊತ್ತಿಲ್ಲ. ಹೊಸಪೇಟೆಯ ಬಳಿ ಉತ್ತಮವಾದ ಕಬ್ಬಿಣದ ಅದಿರು ಸಿಗುವುದರಿಂದ ಅಲ್ಲಿಯೇ ಸ್ಥಾಪನೆ ಮಾಡುವುದು ಒಳ್ಳೆಯದೆಂದು ಟೆಕ್ನೋ ಇಕನಾಮಿಕ್ ಸರ್ವೆಯ ವರದಿಯಲ್ಲಿ ಹೇಳಲಾಗಿದೆ. ಈ ವಿಚಾರದಲ್ಲಿ ನಮ್ಮ ರಾಜ್ಯ ಬಿಟ್ಟರೆ ಬೇರೆ ರಾಜ್ಯದಲ್ಲಿ ಸ್ಥಾಪನೆ ಮಾಡುವುದು ಒಳ್ಳೆಯದಲ್ಲ ಎಂಬುದನ್ನು ಟೆಕ್ನೋ ಇಕನಾಮಿಕ್ ಸರ್ವೆ ವರದಿಯಲ್ಲಿ ವಿಶ್ಲೇಷಣೆ ಮಾಡಲಾಗಿದೆ. ಈ ಯೋಜನೆ ಎಲ್ಲಿಗೋಯಿತು. ಹಿಂದಿನ ಮುಖ್ಯ ಮಂತ್ರಿಗಳು ಸಣ್ಣ ಕಾರಿನ ಬಗ್ಗೆ ಬಹಳವಾಗಿ ಹೇಳುತ್ತಿದ್ದರು. ಈ ಸಣ್ಣ ಕಾರಿನ ಕೈಗಾರಿಕೆ ಯನ್ನು ಇಂದಿರಾ ಗಾಂಧಿಯವರ ಮಗನಿಗೆ ಕೊಡುವ ಬಗ್ಗೆ ಒಳಗಿಂದೊಳಗೆ ವ್ಯವಹಾರ ನಡೆಯು ತ್ತಿದೆ ಎಂದು ಕೇಳಿದ್ದೇನೆ. ಆದ್ದರಿಂದ ನಮ್ಮ ರಾಜ್ಯಕ್ಕೆ ಈ ಕೈಗಾರಿಕೆಯೂ ಕೂಡ ಬರುವುದಿಲ್ಲ. ಕೇಂದ್ರಸರ್ಕಾರದವರು ಕೈಗಾರಿಕೆಗಳಿಗಾಗಿ ಬೇರೆ ರಾಜ್ಯಗಳಿಗೆ ಕೊಟ್ಟಿರುವಷ್ಟು ಹಣವನ್ನು ನಮ್ಮ ರಾಜ್ಯಕ್ಕೆ ಕೊಟ್ಟಿಲ್ಲ ಎನ್ನುವ ಮಾತನ್ನು ಮಾನ್ಯ ಅರ್ಥಿಕ ಮಂತ್ರಿಗಳು ಸಹ ಒಪ್ಪಿಕೊಂಡಿದ್ದಾರೆ. ಮತ್ತು ಅವರ ಬಡ್ಜೆಟ್ ಭಾಷಣದಲ್ಲಿ ಕೂಡ ಎಲ್ಲಾ ಕೈಗಾರಿಕೆಗಳನ್ನು ಖಾಸಗೀಯವರಿಗೆ ಬಿಟ್ಟು ಕೊಡುವ ರೀತಿಯಲ್ಲಿ ಹೇಳಿದ್ದಾರೆ. ನಮ್ಮ ರಾಜ್ಯದಲ್ಲಿ 8-10 ಕೈಗಾರಿಕೆಗಳನ್ನು ಸ್ಥಾಪಿಸುವ ಬಗ್ಗೆ ಕೇಂದ್ರಸರ್ಕಾರದ ಅನುಮತಿಯನ್ನು ಕೇಳಲಾಗಿದೆ; ಆದರೆ ಅವರು ಇನ್ನೂ ಕೊಟ್ಟಿಲ್ಲ ಎಂಬುದಾಗಿ ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀ ವೀರೇಂದ್ರಪಾಟೀಲರು ಹೇಳುತ್ತಾರೆ. ಕೈಗಾ ರಿಕಾ ವಿಚಾರದಲ್ಲಿ ಕೇಂದ್ರಸರ್ಕಾರದವರು ನಮ್ಮ ರಾಜ್ಯದ ಬಗ್ಗೆ ಅಷ್ಟೊಂದು ಆಸಕ್ತಿ ವಹಿಸಿಲ್ಲವೆಂದು ಮಾನ್ಯ ಅರ್ಥಿಕ ಮಂತ್ರಿಗಳು ಹೇಳುತ್ತಾರೆ. ಮಾನ್ಯ ಆರ್ಥಿಕ ಮಂತ್ರಿಗಳು ಮತ್ತು ಮುಖ್ಯ ಮಂತ್ರಿಗಳು ಈ ವಿಚಾರದಲ್ಲಿ ನಾಟಕವಾಡುತ್ತಿದ್ದಾರೆಂದು ನನಗೆ ಕಾಣುತ್ತದೆ. ಇಲ್ಲಿ ಮಾತ ನಾಡುವಾಗ ಕೇಂದ್ರಸರ್ಕಾರವನ್ನು ಕೈಗಾರಿಕಾ ವಿಚಾರದಲ್ಲಿ ದೂರುತ್ತಾರೆ, ದೆಹಲಿಗೆ ಹೋದಾಗ ಅವರೆದುರಿನಲ್ಲಿ ಸರಿಯಾಗಿ ಮಾತನಾಡದೆ ಇಲಿಮರಿಗಳಂತೆ ಇರುತ್ತಾರೆ. ಇವರು ಈ ರೀತಿ ನಡೆದು ಕೊಳ್ಳುತ್ತಿರುವುದರಿಂದಲೇ ಸರ್ಕಾರೀ ಕೈಗಾರಿಕೆಗಳನ್ನು ಖಾಸಗೀಯವರಿಗೆ ಕೊಡುವ ಪರಿಸ್ಥಿತಿ ಬಂದಿರುವುದು. Your policy is shameful surrender to private capital in our country. You have enunciated the policy. It is not a question of 'if' or not. Even the very thought is shameful surrender to private capital. ಈ ವಿಚಾರದಲ್ಲಿ ಶ್ರೀ ದೇವರಾಜ ಅರಸ್ ಅವರು ಹೇಳಿದ್ದನ್ನು ನಾನು ಒಪ್ಪಿಕೊಳ್ಳು ತ್ತೇನೆ. ಕೇವಲ ಮೂರು ವರ್ಷಗಳಲ್ಲಿ ಬಿರ್ಲಾ ಅವರ ಕೈಗಾರಿಕಾ ಬಂಡವಾಳ 200 ಕೋಟಿ ರೂಪಾಯಿಗಳು ಇದ್ದುದು 440 ಕೋಟಿ ರೂಪಾಯಿಗಳಿಗೆ ಹೆಚ್ಚಿದೆ ಎಂಬುದನ್ನು ನಾವು ಪತ್ರಿಕೆ

ಗಳಲ್ಲಿ ಓದಿದ್ದೇವೆ. ಈ ವಿಚಾರ ಪಾರ್ಲಿಮೆಂಟಿನಲ್ಲಿಯೂ ಕೂಡ ಬಂದಿತ್ತು. This policy is opposed to the industrial policy resolution of 1956. It is opposed to socialism. Please do not speak of socialism. I think the hon. Minister Sri Rajasekharamurthy believes in capitalism being a private entreprenuer himself. He is for private sector—I know. Earlier he sheds all this delightful talk of socialism, better it is. Let him bluntly say he is for capitalism. I will be glad. ಆದ್ದರಿಂದ ನಾನು ಹೇಳುವುದೇನೆಂದರೆ ಈಗಿನ ಧೋರಣೆಯನ್ನು ಸರ್ಕಾರದವರು ಕೈಬಿಡಬೇಕು. ಇಲ್ಲದಿದ್ದರೆ ಜನರು ಸರ್ಕಾರದ ನೀತಿಯನ್ನು ಧೋರಣೆಯನ್ನು ಒಪ್ಪುವುದಿಲ್ಲ. You must convince this House as to why the State-sector industries are not functioning properly. ಈ ವಿಚಾರದಲ್ಲಿ ಒಂದು ಸಮಿತಿಯನ್ನು ನೇಮಕ ಮಾಡಬೇಕೆಂದು ನಾನು ಕಳಕಳಿಯಿಂದ ಒತ್ತಾಯ ಮಾಡುತ್ತೇನೆ. ಇಲ್ಲದಿದ್ದರೆ ಜನರು ಶಾಪ ಹಾಕುತ್ತಾರೆ. ದಿವಂಗತ ಸರ್ ಎಂ. ವಿಶ್ವೇಶ್ವರಯ್ಯನವರು ಸಹ ಶಾಪ ಹಾಕುತ್ತಾರೆ. ಸ್ಟೇಟ್ ಸೆಕ್ಟಾರ್ ಕೈಗಾರಿಕೆಗಳ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. 1962 ರಲ್ಲಿ ಎ. ಜಿ. ಆರ್. ಕಮಿಟಿಯನ್ನು ನೇಮಕ ಮಾಡಿದ್ದರು. ಈ ಕಮಿಟಿಯಲ್ಲಿ ಭೋಲಾ ಡಿ. ಪಂತ್‌ರವರೂ ಸಹ ಒಬ್ಬ ಸದಸ್ಯರಾಗಿದ್ದರು. Resources and Economy Committee Report ನಲ್ಲಿ ಅವರು State Sector Industries ಬಗ್ಗೆ ವಿವರವಾಗಿ ಹೇಳಿದ್ದಾರೆ. ಈ ಕೈಗಾರಿಕೆಗಳು ಯಾವ ರೀತಿ ನಡೆಯುತ್ತಿವೆ ಎಂಬುದನ್ನು 533ನೇ ಪೇಜ್‌ನಲ್ಲಿ ಹೇಳಿದ್ದಾರೆ. ಈ ಕೈಗಾರಿಕೆಗಳನ್ನು ಕೇವಲ ಅಧಿಕಾರಿಗಳ ಕೈಯಲ್ಲೇ ಬಿಡುವುದು ಸರಿಯಲ್ಲ, ಜನರ ಸಹಕಾರವನ್ನು ಸಹ ಅವರು ಪಡೆಯುವಂತಾಗಬೇಕೆಂದು ಹೇಳಿದ್ದಾರೆ. ಆ ವರದಿಯನ್ನು ಓದಿ ಅಲ್ಲಿನ ಶಿಫಾರಸ್ಸುಗಳನ್ನು ಜಾರಿಗೆ ತಂದರೆ ಒಳಿತು.

ಅಧ್ಯಕ್ಷರು.—ಮಾನ್ಯ ಸದಸ್ಯರ ಕಾಲ ಮುಗಿಯಿತು.

ಶ್ರೀ ಎಂ. ಎಸ್. ಕೃಷ್ಣನ್.—ಸ್ಮಾಲ್ ಸ್ಕೇಲ್ ಇಂಡಸ್ಟ್ರಿ ಬಗ್ಗೆ ಒಂದು ವಿಚಾರ ಹೇಳಿ ಒಂದು ನಿಮಿಷದಲ್ಲಿ ಮುಗಿಸಿಬಿಡುತ್ತೇನೆ.

ಅಧ್ಯಕ್ಷರು.—ಸಾಧ್ಯವಿಲ್ಲ. ಇನ್ನೂ ಬಹಳ ಜನ ಮಾತನಾಡುವವರು ಇದ್ದಾರೆ. ಈಗ ಶ್ರೀ ಷಣ್ಮುಗಂ ಅವರು ಮಾತನಾಡಬಹುದು.

†ಶ್ರೀ ಎಸ್. ಆರ್. ಷಣ್ಮುಗಂ (ಕೆ. ಜಿ. ಎಫ್).—ಅಧ್ಯಕ್ಷರೇ, ಈ ಸಭೆಗೆ ನಾನು ಬಂದು ಮಾತನಾಡುತ್ತಿರುವುದು ಇದೇ ಮೊದಲ ಸಾರಿ. ನನ್ನ ತಾಯಿ ಭಾಷೆ ತಮಿಳು. ತಮಿಳಿನಲ್ಲಿ ಮಾತನಾಡಿದರೆ ಚೆನ್ನಾಗಿರುವುದಿಲ್ಲವೆಂದು ಕನ್ನಡದಲ್ಲಿ ಮಾತನಾಡುತ್ತೇನೆ. ಏನಾದರೂ ತಪ್ಪುಗಳು ಇದ್ದರೆ ಕ್ಷಮಿಸಬೇಕೆಂದು ಕೇಳಿಕೊಳ್ಳುತ್ತೇನೆ. ಮೈಸೂರಿನಲ್ಲಿ ಒಂದು ದೊಡ್ಡ ಕೈಗಾರಿಕೆ ಇದೆ ಎಂದರೆ ಅದು ಕೆ.ಜಿ.ಎಫ್. ಮಾತ್ರ ಎಂದು ಹೇಳಬಹುದು. ಕೋಲಾರದ ಚಿನ್ನದ ಗಣಿ ಎಂದರೆ ಇದು ಪ್ರಪಂಚಕ್ಕೇ ಗೊತ್ತಿದೆ. ಈ ಚಿನ್ನದ ಗಣಿಯು ಪ್ರಪಂಚಕ್ಕೆ ಬೇಕಾದಷ್ಟು ಚಿನ್ನ ಕೊಟ್ಟು ಎಷ್ಟೋ ಸಾವಿರ ಕೋಟಿ ರೂಪಾಯಿಗಳನ್ನು ಸಂಪಾದನೆಯಾಗುವುದಕ್ಕೆ ಅವಕಾಶ ಮಾಡಿ ಕೊಟ್ಟಿದೆ. ಈ ಚಿನ್ನದ ಗಣಿ ಕೆಲಸ ಪ್ರಾರಂಭವಾಗಿ ನೂರು ವರ್ಷಗಳ ಮೇಲಾಯಿತು. ಅಲ್ಲಿ ಹೆಚ್ಚಿಗೆ ಹರಿಜನರು ಕೆಲಸ ಮಾಡುತ್ತಿದ್ದಾರೆ. ಅದರಲ್ಲೂ ತಮಿಳರು ಹೆಚ್ಚು ಇದ್ದಾರೆ. ಒಂದು ಕಾಲದಲ್ಲಿ ಅಲ್ಲಿ 28 ಸಾವಿರ ಜನರು ಕೆಲಸ ಮಾಡುತ್ತಿದ್ದರು. ಒಂದೂವರೆ ಲಕ್ಷ ಜನರು ಜೀವನ ಮಾಡುವುದಕ್ಕೆ ಅವಕಾಶವಿತ್ತು. ಆದರೆ ಈಗ ಅಲ್ಲಿ 11 ಸಾವಿರ ಜನ ಮಾತ್ರ ಕೆಲಸ ಮಾಡುತ್ತಿದ್ದಾರೆ. ಈಗ ಭೂಮಿಯ ಮಟ್ಟದಿಂದ 11 ಸಾವಿರ ಅಡಿ ಕೆಳಗೆ ಅಲ್ಲಿ ಕೆಲಸ ನಡೆಯುತ್ತಿದೆ.

ಅಧ್ಯಕ್ಷರು—ಈ ಗಣಿ ಕೇಂದ್ರ ಸರ್ಕಾರಕ್ಕೆ ಹೋಗಿದೆ. ಅವರಿಗೆ ಸಂಬಂಧಪಟ್ಟಿದ್ದು.

ಶ್ರೀ ಎಸ್. ಆರ್. ಷಣ್ಮುಗಂ.—ಆ ಕಾರಣದಿಂದ ನಮ್ಮ ಸರ್ಕಾರದವರು ಅಲ್ಲಿ ಒಂದು ಬೇರೆ ಕೈಗಾರಿಕೆಯನ್ನು ಸ್ಥಾಪನೆ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಈಗ ಅಲ್ಲಿ ಒಂದೂವರೆ ಲಕ್ಷ ಜನರು ಜೀವನ ಮಾಡುವುದು ಕಷ್ಟವಾಗಿರುವುದರಿಂದ ನಮ್ಮ ಸರ್ಕಾರದವರು ಅಲ್ಲಿ ಒಂದು ಕೈಗಾರಿಕೆಯನ್ನು ಸ್ಥಾಪನೆ ಮಾಡಬೇಕೆಂಬುದು ನನ್ನ ಅಭಿಪ್ರಾಯ. ಈಗ ಕೇಂದ್ರ ಸರ್ಕಾರದವರು ಅಲ್ಲಿ ಭಾರತ್ ಅರ್ತ್‌ಮುವರ್ಸ್ ಕೈಗಾರಿಕೆಯನ್ನು ಸ್ಥಾಪನೆ ಮಾಡಿದ್ದಾರೆ. ಅಲ್ಲಿ ಒಂದು ಸಾವಿರಕ್ಕೂ ಕಡಿಮೆ ಜನರು ಕೆಲಸ ಮಾಡುತ್ತಿದ್ದಾರೆ. ಕೆ.ಜಿ.ಎಫ್. ನಲ್ಲಿ ಕೆಲಸ ಮಾಡುತ್ತಿರುವ ಕೆಲಸಗಾರರನ್ನೂ ಸಹ ಸೇರಿಕೊಂಡರೆ 12 ಸಾವಿರ ಆಗಬಹುದು. ಕೇವಲ 12 ಸಾವಿರ ಜನರು ಕೆಲಸ ಮಾಡಿದರೆ ಒಂದೂವರೆ ಲಕ್ಷ ಜನರು ಜೀವನ ಮಾಡುವುದಕ್ಕೆ ಕಷ್ಟವಾಗುತ್ತದೆ. ಆದಕಾರಣ ಆ ಭಾಗದಲ್ಲಿ ನಮ್ಮ ಸರ್ಕಾರದವರು ಯಾವುದಾದರು ಒಂದು ಕೈಗಾರಿಕೆಯನ್ನು ಸ್ಥಾಪನೆ ಮಾಡಬೇಕೆಂದು ಕೇಳಿ ಕೊಂಡು ನನ್ನ ಮಾತನ್ನು ಮುಗಿಸುತ್ತೇನೆ

5-30 P.M.

† ಶ್ರೀ ಎಂ. ನಾಗಪ್ಪ (ರಾಯಚೂರು).—ಮಾನ್ಯ ಅಧ್ಯಕ್ಷರೇ, ಈಗಾಗಲೇ ನನ್ನ ಮಾನ್ಯ ಮಿತ್ರರು ಹಾಗೂ ಆಡಳಿತ ಪಕ್ಷದ ಹಿರಿಯರೂ ಇಲ್ಲಿ ಮಾತನಾಡಿದ್ದಾರೆ. ನಾನು ಕೈಗಾರಿಕೆಗಳ ಮೇಲೆ ಮಾತನಾಡುವುದಕ್ಕೆ ಮುಂಚೆ ಸರ್ಪ್ಲಸ್ ಮತ್ತು ಡಿಸ್‌ಪೋಸರ್ಸ್‌ಗಳ ಬಗ್ಗೆ ಎರಡು ವಿಚಾರಗಳನ್ನು ಹೇಳಿ ಮುಂದೆ ಕೈಗಾರಿಕೆಗಳ ಬಗ್ಗೆ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಬಯಸುತ್ತೇನೆ.

ನಾನು ಎರಡು ಕಟ್ ಮೋಷನ್ಸ್‌ಗಳನ್ನು ಕಳುಹಿಸಿದ್ದೇನೆ. ಅವು ಹೀಗಿವೆ:

1. To discuss mal-administration in Stores Purchas Department ; and

2. To discuss the late supply of goods to the Departments by the Stores Purchase Department.

ಇದರಿಂದ ತಮಗೆ ಗೊತ್ತಾಗುತ್ತದೆ ನಮ್ಮ ಸರಕಾರದಲ್ಲಿ ಸ್ಟೋರ್ಸ್ ಪರ್ಚೇಸು ಕಮಿಟಿ ಎನ್ನುವುದು ಇದೆ ಎಂದು. ಇದು ಯಾವ ದೃಷ್ಟಿಯಿಂದ ಕೆಲಸ ಮಾಡುತ್ತಿದೆ ಎನ್ನುವುದರ ಬಗ್ಗೆ ಹೇಳಬೇಕಾಗಿದೆ. ನಮ್ಮ ರಾಜ್ಯದಲ್ಲಿರುವ ಆಯಾ ಡಿಪಾರ್ಟುಮೆಂಟುಗಳಿಂದ ಬರುವ ಇಂಡೆಂಟುಗಳನ್ನು ತೆಗೆದುಕೊಂಡು ಅವರಿಗೆ ಬೇಕಾಗುವ ಪದಾರ್ಥಗಳನ್ನು ಪೂರೈಸುವುದಕ್ಕಾಗಿ ಈ ಡಿಪಾರ್ಟುಮೆಂಟು ಇವೆ. ಇದು ಎಷ್ಟುಮಟ್ಟಿಗೆ ಕೆಲಸಮಾಡುತ್ತಿದೆ ಮತ್ತು ರಾಜ್ಯದಲ್ಲಿ ಯಾವ ರೀತಿಯಾಗಿ ಸೇವೆ ಮಾಡಬೇಕಾಗಿತ್ತು ಎನ್ನುವುದರ ಬಗ್ಗೆ ಇಲ್ಲಿ ಒಂದು ಮಾತನ್ನು ಸ್ಪಷ್ಟವಾಗಿ ಹೇಳಬೇಕಾಗಿದೆ. ಈಗ ಇಲ್ಲಿಗೆ ಬಂದಿರುವ ಡೈರೆಕ್ಟರು ಬಂದಮೇಲೆ ಸಾಕಷ್ಟು ಸುಧಾರಣೆಗಳನ್ನೇನೋ ಮಾಡಿದ್ದಾರೆ. 1968 ರಿಂದ ಆಚೆಗೆ ಯಾವ ಒಂದು ಪರಿಸ್ಥಿತಿ ಹಿಂದೆ ಇತ್ತೋ ಅದು ಬದಲಾವಣೆಯಾಗಿ ಎನ್‌ಕ್ವೈರಿಗಳೂ ಕೂಡ ಕಡಿಮೆ ಸಂಖ್ಯೆಯಲ್ಲಾಗಿವೆ ಎನ್ನುವುದನ್ನು ನಾನು ಮನಗಂಡಿದ್ದೇನೆ. ಆದರೆ ನಾನು ಮನಗಂಡಿರುವಂತೆ ಇಲ್ಲಿರುವ ಡಿಪಾರ್ಟುಮೆಂಟಿನ ಪರಿಸ್ಥಿತಿ ಮತ್ತು ಇದರ ವ್ಯವಸ್ಥೆ ಸರಿಯಾಗಿಲ್ಲ ಎನ್ನುವ ಮಾತನ್ನು ಇಲ್ಲಿ ಸ್ಪಷ್ಟಪಡಿಸುತ್ತೇನೆ. ಈ ವಿಷಯದ ಬಗ್ಗೆ ನಾನೇನು ಹೆಚ್ಚು ಹೇಳಬೇಕಾದ ವಿಷಯ ಇಲ್ಲ. ಒನ್ ಮ್ಯಾನ್ ಪೇಕಮಿಷನ್ ರಿಪೋರ್ಟ್ ನಲ್ಲಿ ಪ್ಯಾರಾ 24 ಪಾಯಿಂಟು(7) ರಲ್ಲಿ ಒಂದು ರೆಕಮೆಂಡೇಷನ್ ಮಾಡಿದ್ದಾರೆ. ಇದರಲ್ಲಿ ಅವರು ಎಲ್ಲ ಸಲವತ್ತುಗಳನ್ನೂ ಈ ಡಿಪಾರ್ಟುಮೆಂಟಿಗೆ ಕೊಡಬೇಕು ಎಂದು ಹೇಳುತ್ತಾ ಇದಕ್ಕೆ ಸಹಾಯಕವಾಗುವಂತೆ ಒಂದು ಸ್ಟ್ಯಾಟಿಸ್‌ಟಿಕಲ್ ಸೆಲ್ ಮಾಡಬೇಕು ಎಂದು ಅದನ್ನು ಮಾಡಿದರೆ ಇದರಿಂದ ಸರಕಾರಕ್ಕೆ ಲಾಭಮಾಡುವಂತೆ ಆಗುತ್ತದೆ. ಈ ಡಿಪಾರ್ಟಮೆಂಟನಲ್ಲಿ ಕೆಲಸಗಳು ತ್ರೀವ್ರವಾಗಿ ಆಗುವುದಿಲ್ಲ ಕೆಲವು ವೇಳೆ ಎರಡು ತಿಂಗಳು ಕಾಲ ಆಗುತ್ತವೆ. ಈಗೇನೋ 15-20 ದಿವಸಗಳೊಳಗೆ ಪೂರ್ತಿಯಾಗುತ್ತವೆ. ತೀವ್ರವಾಗಿ ಕೆಲಸ ಮಾಡಬೇಕಾದರೆ ಒಂದು ಸ್ಟ್ಯಾಟಿಸ್‌ಟಿಕಲ್ ಸೆಲ್‌ನ್ನು ಏರ್ಪಾಡು ಮಾಡಬೇಕು. 1968ರಿಂದೀಚೆಗೆ ಇಲ್ಲಿಗೆ ಬಂದಿರುವ ಡೈರೆಕ್ಟರು ಸಾಕಷ್ಟು ತೀವ್ರವಾಗಿ ಕಾರ್ಯಕ್ರಮಗಳನ್ನು ಮಾಡುತ್ತಿದ್ದಾರೆ. ಆದರೆ ಅವರಿಗೆ ಬೇಕಾಗುವ ಸಾಮಾನುಗಳು ಕೆಲವು ವೇಳೆ ಮಾರ್ಕೆಟ್ಟುಗಳಲ್ಲಿ ಸಿಗದೇ ತೊಂದರೆಯಾಗುವ ಸಂದರ್ಭಗಳೂ ಬಂದಿವೆ. ಮತ್ತು ಆಗಾಗ್ಗೆ ರೇಟುಗಳಲ್ಲೂ ಬದಲಾವಣೆಯಾಗುತ್ತಿರುತ್ತವೆ. ಇವನ್ನೆಲ್ಲಾ ಸರಿಯಾಗಿ ನೋಡಬೇಕಾದರೆ ಇಂತಹ ಒಂದು ಸೆಲ್‌ನ್ನು ಕ್ರಿಯೇಟು ಮಾಡಿದರೆ ಇವರಿಗೆ ಆಗಾಗ್ಗೆ ಮಾರ್ಕೆಟ್ಟಿನಲ್ಲಿ ರೇಟುಗಳು ಯಾವ ರೀತಿ ಫ್ಲಕ್ಚುಯೇಟ್ ಆಗುತ್ತವೆ. ಅವನ್ನು ನೋಡಿಕೊಂಡು ಸರಿಯಾದ ಇಂಡೆಂಟು ಹಾಕಿ ಸಕಾಲದಲ್ಲಿ ಒಳ್ಳೆಯ ಸಾಮಾನುಗಳನ್ನು ಒದಗಿಸಲು ಸಹಾಯ ವಾಗುತ್ತದೆ.. ಮತ್ತು ತೀವ್ರವಾಗಿ ಒಂದು ನಿರ್ಣಯಯವನ್ನೂ ತೆಗೆದುಕೊಳ್ಳಲೂ ಅನುಕೂಲವಾಗುತ್ತದೆ. ಈಗ ಈ ಇರಾಖೆಯವರು ಸುಮ್ಮನೆ ಎನ್‌ಕ್ವೈರಿ ಮಾಡುತ್ತಾ ಕುಳಿತರೆ ನಿಧಾನವಾಗುತ್ತದೆ. ಇದರ ಬಗ್ಗೆ ತೀವ್ರವಾದ ಕಾರ್ಯಕ್ರಮ ತೆಗೆದುಕೊಳ್ಳದೇ ಹೋದರೆ ಸರಕಾರದ ಹಣವೂ ದುರ್ವ್ಯಯವಾಗುತ್ತದೆ. ಸರಿಯಾಗಿ ಇದರ ಕ್ರಮ ತೆಗೆದುಕೊಂಡರೆ ಕೋಟಿಗಟ್ಟಲೆ ಹಣ ಉಳಿಸುವುದಕ್ಕೆ ಸಾಧ್ಯವಿದೆ. ಈಗ ಬರುವ ಇಂಡೆಂಟು ಸರಿಯಾದ ವ್ಯವಸ್ಥೆ ಮಾಡಿದರೆ ಇನ್ನು ಚೆನ್ನಾಗಿ ಕೆಲಸ ಮಾಡಲು ಅನುಕೂಲವಾಗುತ್ತದೆ. ಇದಕ್ಕಾಗಿ ಇಂತಹ ಒಂದು ಸೆಲ್ ಮಾಡುವುದು ಅವಶ್ಯಕ. ಪೇ ಕಮಿಟಿ ಮಾಡಿರುವ ರೆಕಮೆಂಡೇಷನ್‌ನ್ನು ಸರಕಾರದವರು ಕೂಡಲೇ ಒಪ್ಪಬೇಕೆಂದು ಇಲ್ಲಿ ನಾನು ಸ್ಪಷ್ಟವಾಗಿ ಸಲಹೆ ಮಾಡುತ್ತಿದ್ದೇನೆ.

ಇನ್ನು ನಮ್ಮ ಸರಕಾರದವರು ಕೇಂದ್ರ ಸರಕಾರಕ್ಕೆ 15 ಅರ್ಜಿಗಳನ್ನು ಮಂಜೂರಾತಿಗಾಗಿ ಕಳುಹಿಸಿದ್ದಾರೆಂದು ಗೊತ್ತಾಗಿದೆ. ಆದರೆ ಇವುಗಳು ಮಂಜೂರಾಗದೆ ತಡವಾಗುತ್ತಿವೆ. ನಮ್ಮ ರಾಯಚೂರು ಬಗ್ಗೆ ಹೇಳುವುದಾದರೆ ಎರಡು ಕೇಸುಗಳ ಬಗ್ಗೆ ರೆಕಮೆಂಡು ಮಾಡಿದ್ದಾರೆ. ಒಂದು ಫ್ಲೋರ್‌ಗಾಗಿ ಇನ್ನೊಂದು ಷುಗರ್ ಸಲುವಾಗಿ. ಇಲ್ಲಿ ಯಾವ ತರಹ ಪ್ರೈವೇಟು ಇಂಡಸ್ಟ್ರೀ ಕೂಡ ಬಂದಿಲ್ಲ. ಹೀಗಾದರೆ ನಮ್ಮ ರಾಜ್ಯದಲ್ಲಿ ಇಂಡಸ್ಟ್ರಿ ಡೆವಲಪ್‌ಮೆಂಟ್ ಆಗುವುದು ಹೇಗೆ ಸಾಧ್ಯ? ನಮ್ಮ ಸೆಕ್ರೆಟೇರಿಯಟ್ಟಿನಲ್ಲಿ ಇಂಡಸ್ಟ್ರಿ ಬಗ್ಗೆ ನಡೆಯುತ್ತಿರುವ ಕಾರ್ಯಗಳನ್ನು ನೋಡಿದರೆ ಯಾವ ತರಹದ ಇಂಡಸ್ಟ್ರೀ ಕೂಡ ಕಾರ್ಯಗತವಾಗುವಂತೆ ಕಾಣುತ್ತಿಲ್ಲ ಎನ್ನುವುದು ಸ್ಪಷ್ಟವಾಗುತ್ತದೆ. ಇದಕ್ಕಾಗಿ ನಮ್ಮ ಸೆಕ್ರೆಟೇರಿಯಟ್ಟಲ್ಲಿ ಸೂಕ್ತವಾದ ಕೆಲವು ಬದಲಾವಣೆಗಳನ್ನು ಮಾಡಬೇಕು. ಇಲ್ಲಿ ಒಂದು ರೀತಿಯಾದ ಲೆತಾರ್ಜಿಕ್ ಸಿಸ್ಟಂ ಇರುವುದು ಕಂಡು ಬರುತ್ತಿದೆ. ಇದನ್ನು ತಪ್ಪಿಸಿ ಆದಷ್ಟು ತೀವ್ರವಾದ ರೀತಿಯಲ್ಲಿ ಇಂಡಸ್ಟ್ರಿಯಲ್ ಡೆವಲಪ್‌ಮೆಂಟು ಆಗುವಂತೆ ಸರಿಯಾದ ಮಾರ್ಗವನ್ನು ಹಾಕಿಕೊಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಎರಡನೆಯದಾಗಿ ಒಂದು ವಿಷಯವನ್ನು ಒತ್ತಾಯಪೂರ್ವಕವಾಗಿ ನಮ್ಮ ರಾಜ್ಯ ಸರಕಾರದಲ್ಲಿ ಕೇಳಬೇಕಾಗಿದೆ. ನಮ್ಮ ರಾಯಚೂರು ಡಿಸ್ಟ್ರಿಕ್ಟಿನಲ್ಲಿ ಗಂಗಾವತಿ ತಾಲ್ಲೂಕಾದಲ್ಲಿ ತುಂಗಭದ್ರಾ ಲೆಫ್ಟ್ ಬ್ಯಾಂಕ್ ಚಾನಲ್‌ನಲ್ಲಿ 16 ಸಾವಿರ ಎಕರೆಗಳಷ್ಟು ಭೂಮಿ ಷುಗರ್‌ಗಾಗಿ ಲೋಕಲೈಸ್ ಆಗಿದೆ. ಇದರಲ್ಲಿ ಯಿಲ್ಡ್ ಸಮಾರು 35 ಟನ್ನುಗಳು ಮತ್ತು ರೆಕವರಿ ಪರ್ಸೆಂಟೇಜು ಸುಮಾರು 11 ಪರ್ಸೆಂಟು ಬರುತ್ತದೆ. ಕಂಪ್ಲಿ ಹಾಗೂ ಹೊಸಪೇಟೆ ಹತ್ತಿರ ಇರುವ ಇನ್ನೆರಡು ಫ್ಯಾಕ್ಟರಿಗಳ ಮೂಲಕ ರಿಕವರಿ ಶೇಕಡ 11 ರಷ್ಟು ಇದೆ ಎಂದು ನನಗೆ ಗೊತ್ತಾಗಿದೆ.

ಈ ದೃಷ್ಟಿಯಿಂದ ಖಾಸಗಿ ವಲಯದಲ್ಲಿ 1962ರಲ್ಲಿ ಕೋ ಅಪರೇಟೀವ್ ಸಂಸ್ಥೆಗೆ ಈ ಲೈಸೆನ್ ಸಿಕ್ಕಿತ್ತು. ಅದನ್ನು ಓವರ್‌ನೈಟಿನಲ್ಲಿ ಗೌರಿಬಿದನೂರು ಸಹಕಾರ ಸಂಸ್ಥೆಗೆ ಟ್ರಾನ್ಸ್‌ಫರ್ ಮಾಡಿದರು. ಯಾವುದಕ್ಕಾದರೂ ಪ್ರೈವೇಟ್ ಸೆಕ್ಟಾರ್ ಎನ್ನುವ ವಿಷಯ ಹೇಳುತ್ತಾರೆಯೇ ಹೊರತು ಕಾರ್ಯಗತ ಮಾತ್ರ ಮಾಡುವುದಿಲ್ಲ. ಈ ಸಹಕಾರಿ ಸಕ್ಕರೆ ಕಾರ್ಖಾನೆ ಪ್ರೈವೇಟ್ ಸೆಕ್ಟಾರ್‌ನಿಂದ ಓಪನ್ ಆಗಬೇಕೆಂದು ಒಂದು ಅರ್ಜಿಯನ್ನು ರೆಕಮಂಡ್ ಮಾಡಿದ್ದೇವೆ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಆದರೆ ಇದು ರಾಯಚೂರ್‌ಗೆ ಸಿಕ್ಕುತ್ತದೋ ಇಲ್ಲವೋ ಎನ್ನುವ ಅನುಮಾನ ಇದೆ. ನಾವು ವಾಸ್ತವಿಕವಾಗಿ ಷುಗರ್ ಫ್ಯಾಕ್ಟರಿಯನ್ನು ಮಾಡಬೇಕು ಎನ್ನುವ ಉದ್ದೇಶ ಇದೆ. ಆದುದರಿಂದ ನಮ್ಮ ಜಿಲ್ಲೆಗೆ ಪ್ರಾಶಸ್ತ್ಯ ಕೊಡಬೇಕೆಂದು ಹೇಳುತ್ತೇನೆ. ರಾಯಚೂರು ಜಿಲ್ಲೆ ಮೈಸೂರು ರಾಜ್ಯಕ್ಕೆ ಸೇರುವುದಕ್ಕಿಂತ ಮುಂಚಿತವಾಗಿ ಹೈದರಾಬಾದ್ ಪ್ರಾಂತಕ್ಕೆ ಸೇರಿದ್ದಾಗ 2 ಷುಗರ್ ಫ್ಯಾಕ್ಟರಿ ಮಾಡಬೇಕು ಎನ್ನುವ ಉದ್ದೇಶ ಇತ್ತು. ಈವಾಗ ನಮ್ಮ ರಾಯಚೂರು ಜಿಲ್ಲೆ ಮೈಸೂರು ರಾಜ್ಯಕ್ಕೆ ಸೇರಿಕೊಂಡು 16 ವರ್ಷವಾದರೂ ಕೂಡ ಒಂದು ಷುಗರ್ ಫ್ಯಾಕ್ಟರಿಯನ್ನು ಓಪನ್ ಮಾಡಲಿಲ್ಲ ಎನ್ನುವುದನ್ನು ವಿಷಾದದಿಂದ ಹೇಳಬೇಕಾಗಿದೆ.

ಎರಡನೆಯದಾಗಿ ತುಂಗಭದ್ರ ಏರಿಯಾ ಕಡೆ ಡೆವಲಪ್‌ಮೆಂಟ್‌ಗಾಗಿ ಒಂದು ಸ್ಟಾರ್ಚ್ ಫ್ಯಾಕ್ಟರಿ ಅಗತ್ಯ ಇದೆ. ಮತ್ತು ಅಗ್ರಿಕಲ್‌ಚರಲ್ ಇಂಪ್ಲಿಮೆಂಟ್ಸ್ ಫ್ಯಾಕ್ಟರಿ, ಫರ್ಟಿಲೈಸರ್ಸ್ ಫ್ಯಾಕ್ಟರಿಯ ಅವಶ್ಯಕತೆಯೂ ಇದೆ. ಬಳ್ಳಾರಿ ಏರಿಯಾ ಮತ್ತು ರಾಯಚೂರು ಕೆಲವು ಭಾಗಗಳಲ್ಲಿ ಕೆಲವು ಫ್ಯಾಕ್ಟರಿಗಳನ್ನು ಪ್ರಾರಂಭಿಸಬೇಕೆಂದು ಒತ್ತಾಯ ಪೂರ್ವಕವಾಗಿ ಕೇಳುತ್ತೇನೆ. ಈಗ ನಮ್ಮಲ್ಲಿ ಸಾಧಾರಣ 25-30 ರೈಸ್ ಮಿಲ್ಲುಗಳು ನಡೆಯುತ್ತಾ ಇವೆ. ಅಲ್ಲಿ ಬರತಕ್ಕಂಥ ಹಸ್ಕನ್ನು ಸುಟ್ಟುಬಿಡುತ್ತಾರೆ. ಅದನ್ನು ಉಪಯೋಗಿಸಿದರೆ ಒಂದು ತರಹ ಬ್ರಿಕ್ಸ್ ಮನುಫ್ಯಾಕ್ಚರ್ ಮಾಡಲು ಆಗುತ್ತದೆ ಮತ್ತು ಹಾರ್ಡ್‌ಬೋರ್ಡು ಮನುಫ್ಯಾಕ್ಚರ್ ಮಾಡಲಿಕ್ಕೂ ಉಪಯೋಗ ಬರುತ್ತದೆ. ಇದರ ಬಗ್ಗೆ ಕೆಲವು ತಜ್ಞರ ಅಭಿಪ್ರಾಯವೂ ಇದೆ. ಆದುದರಿಂದ ಇದಕ್ಕೆ ಒಂದು ಸರಿಯಾದಂಥ ಕಾರ್ಯಕ್ರಮ ಹಾಕಿಕೊಂಡು ಯಾವ ತರಹ ಇಂಡಸ್ಟ್ರಿ ಮಾಡಬೇಕೋ ಅದನ್ನು ಮಾಡಬೇಕೆಂದು ಹೇಳುತ್ತೇನೆ.

ಇನ್ನು ರಾಯಚೂರು ಗ್ರೌಂಡ್‌ನಟ್‌ಗೆ ಹೆಸರುವಾಸಿಯಾದಂಥ ಪ್ರದೇಶ. ಅದೇ ರೀತಿ ಕಾಟನ್‌ಗೂ ಹೆಸರುವಾಸಿಯಾಗಿದೆ. ಇಲ್ಲಿ ಕೋ ಅಪರೇಟೀವ್ ಸೆಕ್ಟಾರ್‌ನಿಂದ ಸ್ಪಿನ್ನಿಂಗ್ ಮಿಲ್ಲನ್ನು ಓಪನ್ ಮಾಡುವುದಕ್ಕೆ ಮಾನ್ಯ ನಿಜಲಿಂಗಪ್ಪನವರ ಹಸ್ತದಿಂದ ಅಡಿಗಲ್ಲು ಹಾಕಿಸಿದರು. ಅದು ಯಾವ ಸ್ಟೇಜ್‌ನಲ್ಲಿ ಇದೆಯೋ ಜನಗಳಿಗೇ ಗೊತ್ತಿಲ್ಲ. ಅದನ್ನು ತಕ್ಷಣವೇ ಕಾರ್ಯರೂಪಕ್ಕೆ ಬರುವಂತೆ ಮಾಡಿ ಕೆಲಸವನ್ನು ಪ್ರಾರಂಭಿಸಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಇನ್ನೊಂದು ವಿಚಾರ ಏನೆಂದರೆ ಗ್ರೌಂಡ್‌ನಟ್ ನಮ್ಮ ಕಡೆ ಬೇಕಾದಷ್ಟು ಇದೆ. ಈ ದೃಷ್ಟಿಯಿಂದ ನಾನು ಹೇಳುವುದು ಏನೆಂದರೆ ಇಲ್ಲಿರುವ 7 ಪ್ರೈವೇಟ್ ಫ್ಯಾಕ್ಟರೀಸ್‌ನವರೂ ತಮಗೆ ಎಷ್ಟು ಗ್ರೌಂಡ್‌ನಟ್ ಬೇಕೋ ಅಷ್ಟು ಇಟ್ಟುಕೊಂಡು ಬಾಕಿ ಗ್ರೌಂಡ್‌ನಟ್ಸ್‌ಗೆ ಒಂದು ರೇಟನ್ನು ಫಿಕ್ಸ್ ಮಾಡಿಬಿಡುತ್ತಾರೆ. ಪ್ರೈಸ್ ಹೆಚ್ಚು ಆದರೆ ಕೊಳ್ಳುವುದೇ ಇಲ್ಲ. ನಮ್ಮ ರೇಟಿಗೆ ಬರುವ

(ಶ್ರೀ ಎಂ. ನಾಗಪ್ಪ)

ತನಕವೂ ಗ್ರೌಂಡ್‌ನಟ್ಸ್‌ನ್ನು ಕೊಂಡುಕೊಳ್ಳುವುದಿಲ್ಲ. 3 ತಿಂಗಳ ತನಕವೂ ರೈತರು ಬೆಳೆದ ಗ್ರೌಂಡ್ ನಟ್ಸ್‌ನ್ನು ರೇಟು ಬರುತ್ತದ ಎಂದು ಕಾದುಕೊಂಡಿರುತ್ತಾರೆ. ಪ್ರೈವೇಟ್ ಫಾಕ್ಟರೀಸ್ ಅವರು ಅಲ್ಲಿಯವರೆಗೂ ಕೊಂಡುಕೊಳ್ಳುವುದಿಲ್ಲ. ಅನಂತರ ಪ್ರೈಸ್‌ಗೆ ಕೆಳಗೆ ಇಳಿದಾಗ ಅವರು ಮಾರ್ಕೆಟ್‌ಗೆ ಹೋಗಿ ಕೊಂಡುಕೊಳ್ಳುತ್ತಾರೆ. ಇದರಿಂದ ಈ ಪ್ರೈವೇಟ್ ಫ್ಯಾಕ್ಟರೀಸ್‌ನವರು ಮನಾಪಪ್ರೈಸ್ಸ್ ಮಾಡಿಕೊಂಡುಬಿಟ್ಟಿದ್ದಾರೆ. ಆದುದರಿಂದ ಕೋ ಆಪರೇಟೀವ್ ಸೆಕ್ಟಾರ್‌ನಲ್ಲಿ ಫ್ಯಾಕ್ಟರೀಸ್‌ಗಳನ್ನು ಗೌರ್ನಮೆಂಟಿನವರು ಮಾಡುವುದಕ್ಕೆ ಸಾಧ್ಯ ಇದೆ. ಇದನ್ನು ಗೌರ್ನಮೆಂಟಿನವರು ಮಾಡಬೇಕು. ಮತ್ತು ಪಬ್ಲಿಕ್ ಸೆಕ್ಟಾರ್‌ನಲ್ಲಿ ಇನ್ನೊಂದು ಆಯಿಲ್ ಇಂಡಸ್ಟ್ರೀಸ್ ಅಂದರೆ ಡಾಲ್ಡಾ ಆಗಲಿ, ವನಸ್ಪತಿ ಆಗಲಿ ಇದನ್ನು ಪ್ರಾರಂಭಿಸಬೇಕು ಎಂದು ಸರ್ಕಾರವನ್ನು ಒತ್ತಾಯ ಪಡಿಸುತ್ತೇನೆ. ಇಷ್ಟು ಹೇಳಲು ಸಮಯ ತೆಗೆದುಕೊಂಡಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನು ಮುಗಿಸುತ್ತೇನೆ.

† ಶ್ರೀ ಕೆ. ಎಚ್. ಶ್ರೀನಿವಾಸ್ (ಸಾಗರ).—ಸನ್ಮಾನ್ಯ ಅಧ್ಯಕ್ಷರೇ, ಈ ದೇಶ ನಮಗೆಲ್ಲಾ ಗೊತ್ತಿದ್ದಂತೆ ವ್ಯವಸಾಯವನ್ನು ಅವಲಂಬಿಸಿರತಕ್ಕಂಥ ದೇಶ. ದೇಶದಲ್ಲಿ 100ಕ್ಕೆ 75ಕಿಂತ ಜಾಸ್ತಿ ಜನ ವ್ಯವಸಾಯವನ್ನು ಅವಲಂಬಿಸಿದ್ದಾರೋ ಆ ದೇಶದ ಆರ್ಥಿಕ ಪರಿಸ್ಥಿತಿ ಸಹಜವಾಗಿ, ಅನಿವಾರ್ಯವಾಗಿ ಹಿಂದುಳಿದಿರುತ್ತದೆ ಎಂದು ಹೇಳಬಹುದು. ಆದುದರಿಂದಲೇ, ಈ ದೇಶ ಸ್ವಾತಂತ್ರ್ಯ ನಂತರ, ರಾಷ್ಟ್ರದ ಪುನರ್ನಿರ್ಮಾಣದ ಕಡೆ ನಮ್ಮ ಮನಸ್ಸನ್ನು ಹೊರಳಿಸಿದಾಗ, ಕೈಗಾರಿಕೆಗಳು ಬೆಳೆಯಬೇಕು ಹೆಚ್ಚು ಹೆಚ್ಚು ಅಭಿವೃದ್ಧಿಯಾಗಬೇಕು ಅದೂ ಕಾಟೇಜ್ ಇಂಡಸ್ಟ್ರೀಸ್ ಹೆಚ್ಚಿಗೆ ಬೆಳೆದು, ಸಣ್ಣ ಪ್ರಮಾಣದಲ್ಲಿ, ದೊಡ್ಡ ಪ್ರಮಾಣದಲ್ಲಿ ಮತ್ತು ಭಾರಿ ಪ್ರಮಾಣದಲ್ಲಿ ಕೈಗಾರಿಕೆಗಳು ಎಲ್ಲೆಲ್ಲಿ ಸಾಧ್ಯವೋ ಅಲ್ಲಲ್ಲಿ, ಅಂದರೆ ಕಬ್ಬಿನ ಸಿಪ್ಪೆಯಿಂದಾಗಲಿ, ಬೊಂಬಿನಿಂದಾಗಲಿ ಯಾವುದರಿಂದ ಉಪಯೋಗವಾಗುತ್ತದೆ ಆ ರೀತಿಯಲ್ಲಿ, ಕೈಗಾರಿಕೆಗಳನ್ನು ಬೆಳೆಸಬೇಕು. ಈವೊತ್ತು ನಮ್ಮ ರಾಜ್ಯಾಂಗದ ಗುರಿಯೂ ಕೂಡ ವ್ಯವಸಾಯದ ಕಡೆ ಇದೆ. ಈ ಸದನದಲ್ಲಿರುವ ವಿವಿಧ ರಾಜಕೀಯ ಪಕ್ಷಗಳೂ ಕೂಡ ಅನುಸರಿಸಬೇಕಾದ ಒಂದು ಇಂಡಸ್ಟ್ರಿಯಲ್ ಪಾಲಿಸಿ ರೆಸೊಲ್ಯೂಷನ್ ಇದೆ. ಸಮಾಜವಾದಿ ಸಮಾಜ ತತ್ವ ಎಲ್ಲರಲ್ಲೂ ಇವೆ. ಎಲ್ಲರ ಮನಸ್ಸಿನಲ್ಲೂ ಇದೆ ಆದರೆ ವಸ್ತುಸ್ಥಿತಿ ನೋಡಿದರೆ, ನಮ್ಮ ರಾಜ್ಯದಲ್ಲಿ ದೊಡ್ಡ ದೊಡ್ಡ ಕೈಗಾರಿಕೆಗಳಲ್ಲಿ ದೊಡ್ಡ ಪ್ರಮಾಣದ ಬಂಡವಾಳ ಸಿಕ್ಕಿಬಿದ್ದು ಈವೊತ್ತು ನಮ್ಮ ಕುತ್ತಿಗೆ ಕುಯ್ಯುತ್ತಾ ಇರುವುದರಿಂದ ಈ ಒಂದು ವ್ಯವಸಾಯಕ್ಕೆ ಏನು ಒಂದು ಪ್ರಾಧಾನ್ಯತೆ ಕೊಡಬೇಕಾಗಿತ್ತೋ ಅದನ್ನು ಕೊಡುವುದಕ್ಕೆ ಸಾಧ್ಯವಾಗಲಿಲ್ಲ. ಒಂದು ಕಡೆ ನೀರಾವರಿ ಯೋಜನೆಯನ್ನು ಕಾರ್ಯಗತ ಮಾಡುವುದಕ್ಕೆ ಬಂಡವಾಳ ಇಲ್ಲ. ಅದಕ್ಕೆ ಸಾಕಷ್ಟು ಹಣ ಒದಗಿಸಿಕೊಳ್ಳಬೇಕು. ಇನ್ನೊಂದು ಕಡೆ ಕೈಗಾರಿಕೆಗಳು ಲುಕ್ಸಾನು ಆಗುತ್ತಾ ಇದೆ, ಅದನ್ನು ತಪ್ಪಿಸಬೇಕು. ಮತ್ತು ಕೈಗಾರಿಕೆಗಳನ್ನು ಖಾಸಗಿಯವರಿಗೆ ವಹಿಸಬೇಕೇ ಅಥವಾ ಅದನ್ನು ಸರ್ಕಾರವೇ ನಡೆಸಿಕೊಂಡು ಹೋಗಬೇಕೇ ಎನ್ನುವ ವಿಚಾರ ಇದೆ. ಇದೇ ಸಂಧರ್ಭದಲ್ಲಿ ಒಂದು ಕಡೆ ಐರನ್ ಅಂಡ್ ಸ್ಟೀಲ್ ವರ್ಕ್ಸ್ ಭದ್ರಾವತಿ ಕಡೆ ಬಂಡವಾಳ ಹಾಕಿದ್ದೇವೆ. ಮತ್ತೊಂದು ಕಡೆ ಹೊಸಪೇಟೆಯಲ್ಲಿ ಉಕ್ಕಿನ ಕಾರ್ಖಾನೆಯನ್ನು ಮಾಡಬೇಕು ಎನ್ನುವ ಆಲೋಚನೆಯೂ ಇದೆ. ಈ ಸಣ್ಣ ಕೈಗಾರಿಕೆಗಳು, ಹೊಸಪೇಟೆ ಉಕ್ಕಿನ ಕಾರ್ಖಾನೆ ಮತ್ತು ಈಗಿರತಕ್ಕಂಥ ಕೈಗಾರಿಕೆಗಳ ನಷ್ಟ ಇವೆಲ್ಲದರ ಬಗ್ಗೆ ನಮ್ಮ ಗಮನ ಹರಿಸಿದರೆ, ನಮ್ಮ ಮನಸ್ಸು ಅವ್ಯವಸ್ಥಿತ ಪರಿಸ್ಥಿತಿಯಲ್ಲಿದೆ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಈವೊತ್ತು ಕೈಗಾರಿಕೆಗಳ ಪರಿಸ್ಥಿತಿ ಬಗ್ಗೆ ಏನು ಇದೆ ಎನ್ನುವುದನ್ನು ಮಾನ್ಯ ಅರ್ಥ ಸಚಿವರು ತಮ್ಮ ಭಾಷಣದಲ್ಲಿ ಉಲ್ಲೇಖ ಮಾಡಿದ್ದಾರೆ. ಅದು ಈರೀತಿ ಇದೆ ಈ ವಿಚಾರದಲ್ಲಿ ನಮ್ಮ ಕಾರ್ಯನೀತಿಯನ್ನು ಪುನರ್ವಿಮರ್ಶಿಸಿ ನೀರಾವರಿ ಮತ್ತು ವ್ಯವಸಾಯಾಭಿವೃದ್ಧಿಗೆ ಅಧ್ಯತೆ ಕೊಟ್ಟಿರುವುದರಿಂದ, ಸರ್ಕಾರದವರ ಪರಿಮಿತ ಸಂಪನ್ಮೂಲಗಳನ್ನು ನೀರಾವರಿ ಯೋಜನಾ ಕಾರ್ಯಗಳಿಗೇ ಮೀಸಲಾಗಿಟ್ಟು, ಮದ್ರಾಸು ಮತ್ತು ಇತರ ರಾಜ್ಯಗಳಲ್ಲಿ ಪ್ರಚಾರದಲ್ಲಿರುವಂತೆ ಖಾಸಗಿ, ಉದ್ಯಮಾಭಿವೃದ್ಧಿಯನ್ನು ಉದ್ಯಮ ವಲಯಕ್ಕೆ ಬಿಟ್ಟುಕೊಡಬೇಕೇ, ಎಂಬ ವಿಚಾರವನ್ನು ತೀರ್ಮಾನಿಸುವ ಕಾಲ ಈಗ ಸನ್ನಿಹಿತವಾಗಿದೆ. ನನ್ನ ದೃಷ್ಟಿಯಲ್ಲಿ ಹೇಳುವುದಾದರೆ, ಇದರಿಂದ ನಮಗೆ ಏನೇನೂ ಲಾಭವಾಗುತ್ತಾ ಇಲ್ಲ ಎನ್ನುವ ವಿಷಯವನ್ನೇ ಪ್ರಾಮುಖ್ಯವಾಗಿ ತೆಗೆದುಕೊಳ್ಳಬಾರದು ಅದನ್ನೆಲ್ಲಾ ಒಂದು ದೊಡ್ಡ ಪಟ್ಟಿಮಾಡಿ ಎಲ್ಲಾ ಜನರನ್ನೂ ಕರೆದು ಯಾರು ಯಾರು ಇದರಲ್ಲಿ ಬಂಡವಾಳ ಹಾಕುತ್ತಾರೆ ಎಂದು ಕೇಳಲಿ. ಕೆಲವು ಕೈಗಾರಿಕೆಗಳಲ್ಲಿ ಬಂಡವಾಳವನ್ನು ತೊಡಗಿಸಿದರೆ, ತಕ್ಷಣ ಫಲ ಬರುವುದನ್ನು ನಾವೇ ಆಗಲಿ, ಖಾಸಗೀ ಜನರೇ ಆಗಲಿ ಯಾರೂ ನಿರೀಕ್ಷಣೆ ಮಾಡಕೂಡದು. ಕೆಲವು ಕೈಗಾರಿಕೆಗಳಲ್ಲಿ ಈವೊತ್ತಲ್ಲ ನಾಳೆ ಲಾಭ ಬರುವ ಸೂಚನೆಗಳು ಇವೆ ಎನ್ನುವುದು ಸ್ಪಷ್ಟವಾಗಿ ಗೊತ್ತಾಗುತ್ತವೆ. ಇನ್ನು ಕೆಲವು ಕೈಗಾರಿಕೆ

ಗಳನ್ನು ಪರಿಶ್ರಮ ಪಟ್ಟರೆ ಸುಧಾರಿಸಲಿಕ್ಕೆ ಸಾಧ್ಯವಿದೆ ಎಂದು ನಂಬಲಿಕ್ಕೆ ಪ್ರಬಲವಾದ ಕಾರಣ
ಗಳಿವೆ. ಇನ್ನು ಕೆಲವು ಕೈಗಾರಿಕೆಗಳನ್ನು ನಾವು ಪ್ರತಿ ವರ್ಷ ನಂಬುತ್ತ ಹೋದರೆ, ಅವನ್ನು
ಪೋಷಣೆ ಮಾಡುತ್ತ ಹೋದರೆ, ಕೊನೆಗೆ ಕೈ ಕಟ್ಟಿಕೊಂಡಂತಾಗುತ್ತದೆ. ನಮ್ಮ ಪರಿಮಿತವಾದ
ಸಂಪನ್ಮೂಲಗಳೇನಿವೆ ಅವನ್ನು ರೈತರಿಗೆ ಅತ್ಯಗತ್ಯವಾದ ಹಸಿರು ಯೋಜನೆಗಳನ್ನು ಸ್ಥಾಪಿಸುವು
ದಕ್ಕೆ, ನೀರಾವರಿ ಯೋಜನೆಗಳನ್ನು ಕಾರ್ಯಗತ ಮಾಡುವುದಕ್ಕೆ, ಅದಕ್ಕೆ ತಕ್ಕಂತೆ ಆ ಪರಿಮಿತ
ಸಂಪನ್ಮೂಲಗಳಲ್ಲಿ ಪ್ರತಿ ವರ್ಷ ವರ್ಷ ಒತ್ತಿ ಒತ್ತಿ ಇಡತಕ್ಕ ಕೈಗಾರಿಕೆಗಳು ಕೆಲವು ಇವೆ, ಇಂಥ
ಕೈಗಾರಿಕೆಗಳನ್ನು ಸಮಾಜವಾದ ಎನ್ನುವ ಕಾರಣಕ್ಕಾಗಲೀ, ಇನ್ನು ಯಾವುದೇ ವಾದಕ್ಕೇ ಆಗಲೀ,
ಇನ್ನು ಯಾವುದೇ ನಿರ್ಣಯಕ್ಕೆ ಕಟ್ಟುಬಿದ್ದಾಗಲೀ ಪೋಷಿಸಿಕೊಂಡು ಹೋಗಲೇಬೇಕಾಗಿದೆ. ಅಂಥ
ಕೈಗಾರಿಕೆಗಳಲ್ಲಿ ಇರತಕ್ಕ ಬಂಡವಾಳವನ್ನು ನಾವು ಪಡೆದು ಇನ್ನೂ ಪ್ರಾಧಾನ್ಯ ಕೊಡಬೇಕಾದ
ಇತರ ಅಂಶಗಳೇನಿವೆ, ನಮ್ಮ ಮೇಲೆ ಒತ್ತಾಯಪೂರ್ವಕವಾಗಿ ಬಂದಿರತಕ್ಕ ಪ್ರಸಂಗಗಳೇನಿವೆ
ಅವುಗಳತ್ತ ಬಂಡವಾಳವನ್ನು ಹರಿಸುವುದಕ್ಕೆ ಪ್ರಯತ್ನಪಡಬೇಕಾಗಿದೆ. ಅರ್ಥ ಸಚಿವರು
ಉತ್ತರ ಕೊಡುತ್ತ ಹೇಳಿದ್ದಾರೆ, ಎಲ್ಲಿ ಪ್ರೈವೇಟ್ ಕ್ಯಾಪಿಟಲ್ ಸಾಕಷ್ಟು ಪ್ರಮಾಣದಲ್ಲಿ ಬರಲಿಕ್ಕೆ
ಸಾಧ್ಯವಿದೆ ಅಂಥ ಸ್ಥಳಗಳಲ್ಲಿ ಸರ್ಕಾರ ತನ್ನ ಬಂಡವಾಳವನ್ನು ಹಾಕುವುದು ಬೇಡ, ಆ ಬಂಡವಾಳ
ವನ್ನು ಉಳಿಸಿ, ಇನ್ನೂ ಅತ್ಯಗತ್ಯವಾದ, ನಮ್ಮ ದೇಶದ ಸಮಾಜವಾದದ ದೃಷ್ಟಿಯಿಂದ ಕೃಷಿ
ರಂಗದಲ್ಲಿ ಕ್ರಾಂತಿಯಾಗಬೇಕಾದುದು ಕೈಗಾರಿಕಾ ಕ್ರಾಂತಿಗಿಂತಲೂ ಮೂಲಭೂತವಾದುದು
ಅದಕ್ಕೆ ಉಪಯೋಗಿಸಬೇಕು. ಆ ಕೃಷಿ ಉತ್ಪಾದನೆ ವೈಜ್ಞಾನಿಕವಾಗಿ ನಡೆದಾಗ ಅದರಲ್ಲಿ
ಹೆಚ್ಚಳವಾಗುತ್ತದೆ. ಆ ಕೃಷಿ ರಂಗದಲ್ಲಿ ಆದಂಥ ಹೆಚ್ಚಳದ ಉತ್ಪಾದನೆ, ಅದರ ಆಧಾರದ
ಮೇಲೆ ನಿಲ್ಲತಕ್ಕ ಕೈಗಾರಿಕೆಗಳ ಮೇಲೆ ಬೀಳಬೇಕಾಗುತ್ತದೆ. ಈವೊತ್ತು ಮೇಜ್, ಕಳ್ಳೆಕಾಯಿ
ಆಲೂಗಡ್ಡೆ ಇಂಥವುಗಳ ಮೇಲೆ ಆಧಾರಿತವಾಗಿರುವ ಮತ್ತು ಅದನ್ನು ಉಪಯೋಗ ಮಾಡತಕ್ಕ,
ಕೈಗಾರಿಕೆಗಳ ಬಗ್ಗೆ ಬೇಡಿಕೆ ಜಾಸ್ತಿಯಾಗುತ್ತಿದೆ. ಕೈಗಾರಿಕಾ ರಂಗವನ್ನು ನಾವು ಬೆಳೆಸಬೇಕು
ಎಂದರೆ, ಕೈಗಾರಿಕಾ ರಂಗದಲ್ಲಿ ಏನು ಕ್ರಾಂತಿಯನ್ನು ಸಾಧಿಸಬಹುದೋ ಅದಕ್ಕೆ ಅತ್ಯಾವಶ್ಯಕ
ವಾಗಿ ಬೇಕಾಗುವಂಥ, ಮತ್ತು ಅದನ್ನು ಹಿನ್ನೆಲೆಯಾಗಿಟ್ಟುಕೊಂಡು ನಮ್ಮ ಕೈಗಾರಿಕಾ
ನೀತಿಯನ್ನು ಪುನರ್ವಿಮರ್ಶಿಸಬೇಕಾಗಿದೆ. ಹೊರಗಡೆಯ ಬಂಡವಾಳಶಾಹಿಗಳನ್ನು ಬೆಳೆಸಬೇಕು
ಎನ್ನುವ ಉದ್ದೇಶ ಸರ್ಕಾರಕ್ಕೆ ಇಲ್ಲ ಎನ್ನುವ ದೃಢ ವಿಶ್ವಾಸ ನನಗಿದೆ.

ಪ್ರೈವೇಟ್ ಸೆಕ್ಟಾರ್ ಮತ್ತು ವೆಸ್ಟೆಡ್ ಇಂಟರೆಸ್ಟ್, ಇವೆರಡೂ ಒಂದೇ ಅಲ್ಲ. ಆಸಕ್ತ ಹಿತ
ಮತ್ತು ಖಾಸಗೀ ವಲಯ ಇವೆರಡರ ಮಧ್ಯೆ ನಾವು ಬಹಳಮಟ್ಟಿಗೆ ತಪ್ಪು ಕಲ್ಪನೆಯನ್ನು
ಮಾಡಿಕೊಳ್ಳುತ್ತಿದ್ದೇವೆಂದು ನನಗನ್ನಿಸುತ್ತದೆ. ಖಾಸಗಿ ವಲಯವೆಂದರೆ ಆಸಕ್ತಹಿತ ಎಂದು
ಆಗುವುದಿಲ್ಲ. Private sector in my humble opinion is quite distinct from
vested interest. ಹಾಗೆ ತಪ್ಪು ಅರ್ಥ ಮಾಡಿದರೆ ನಮ್ಮ ಸಮಾಜವಾದಕ್ಕೆ
ಬಾಧಕವಾದೀತು ; ನಾವು ಏನು ಸಮಾಜದಲ್ಲಿ ಸಾಮಾಜಿಕ ನ್ಯಾಯ ಸ್ಥಾಪನೆ ಮಾಡ
ಬೇಕೆಂದು ಹೇಳಿದೆವೋ ಆ ರೀತಿಯಲ್ಲಿ ಪ್ರಯತ್ನ ಮಾಡುತ್ತಿದ್ದೇವೆ. ಇದಕ್ಕೆ ಬಾಧಕ
ವಾಗಿರುವುದು ಖಾಸಗಿ ರಂಗವಲ್ಲ, ಬಾಧಕವಾಗಿರುವುದು ಆಸಕ್ತ ಹಿತ. ಆಸಕ್ತ ಹಿತ ಎಲ್ಲಿ ಯಾವ
ರೂಪದಲ್ಲಿ ಎಷ್ಟರಮಟ್ಟಿಗೆ ಇರುತ್ತದೆ ಎನ್ನುವುದನ್ನು ನಾವು ಎಷ್ಟು ಆಳವಾಗಿ ವಿಚಾರ ಮಾಡಿದರೂ
ಕಂಡುಹಿಡಿಯುವುದಕ್ಕೆ ಸಾಧ್ಯವಿಲ್ಲ. ಒಂದು ಕೈಗಾರಿಕೆಯ ನಿಯಂತ್ರಣವನ್ನು ಇಟ್ಟುಕೊಂಡಿರ
ತಕ್ಕ ಅಧಿಕಾರಿ ತಾನು ಅಲ್ಲಿಯೇ ಉಳಿಯಬೇಕು, ಅದೇ ಹೆಡ್‌ಕ್ವಾರ್ಟರಿನಲ್ಲಿ ಉಳಿಯಬೇಕು ಎಂದು
ಪ್ರಯತ್ನಪಟ್ಟು ಅಡ್ಡಿಯನ್ನು ಮಾಡುತ್ತಿದ್ದರೆ ವೆಸ್ಟೆಡ್ ಇಂಟರೆಸ್ಟ್‌ನಲ್ಲಿ ಕೆಲಸಮಾಡುತ್ತಿದ್ದಾನೆಂದು
ಆಗುತ್ತದೆ. ಗವರ್ನಮೆಂಟ್ ಫ್ಯಾಕ್ಟರಿಯಾದ ಮಾತ್ರಕ್ಕೆ ಅಲ್ಲಿ ಸಮಾಜವಾದವಿದೆ ಎಂದು ಹೇಳಿದರೆ
ಅದೂ ತಪ್ಪಾಗುತ್ತದೆ.

ಹಿರಿಯ ಸದಸ್ಯರಾದ ಶ್ರೀ ಸಿದ್ದಯ್ಯನವರು ಒಂದು ಪಬ್ಲಿಕ್ ಸೆಕ್ಟಾರ್ ಅಂಡರ್‌ಟೇಕಿಂಗ್
ಅನ್ನು ಲಾಭ ಸಂಪಾದನೆಯ ಒಂದೇ ದೃಷ್ಟಿಯಿಂದ ನಡೆಸುವುದಕ್ಕೆ ಸಾಧ್ಯವಿಲ್ಲ, ಅದೊಂದೇ
ದೃಷ್ಟಿಯನ್ನಿಟ್ಟುಕೊಳ್ಳಬೇಕಾಗಿಲ್ಲ ಎಂದು ಹೇಳಿದರು. ನಾನು ನಮ್ರವಾಗಿ ಸೂಚಿಸಲಿಕ್ಕೆ ಬಯಸು
ತ್ತೇನೆ, ಈವೊತ್ತು ಯಾವುದೇ ಉದ್ಯಮ ತಕ್ಷಣಕ್ಕೆ ಲಾಭ ಕೊಡಬೇಕು ಎಂದು ನಿರೀಕ್ಷಣೆಮಾಡಿ ಲಾಭ
ಬರಲಿಲ್ಲ ಎಂದು ಕೂಡಲೇ ಕೈ ಬಿಡಬಾರದು ಎಂದು ಒಪ್ಪಿಕೊಳ್ಳುತ್ತೇನೆ. ಆದರೆ ಲಾಭ ಸಂಪಾ
ದನೆಯ ಗುರಿಯನ್ನು ಬಿಟ್ಟುಕೊಡಬಾರದು. ನಮ್ಮ ದೇಶದಲ್ಲಿ ದೊಡ್ಡ ತಪ್ಪಾಗಿರುವುದು ಏನೆಂದರೆ
ಸರ್ಕಾರಿ ವಲಯದಲ್ಲಿರುವ ಯಾವುದೇ ಉದ್ಯಮದಲ್ಲಿ ಲಾಭ ಲುಕ್ಸಾನಿನ ಪ್ರಶ್ನೆ ಇರಬಾರದು
ಎನ್ನುವ ತಪ್ಪು ಕಲ್ಪನೆ ಅದು ಬಹಳ ದೊಡ್ಡ ಪ್ರಮಾಣದಲ್ಲಿ ಹಾನಿಯನ್ನು ನಮ್ಮ ಕೈಗಾರಿಕಾ ರಂಗಕ್ಕೆ
ಉಂಟುಮಾಡಿದೆ ಎಂದರೆ ಅವರಲ್ಲಿ ಅತಿಶಯೋಕ್ತಿ ಇಲ್ಲ. ಆದುದರಿಂದ, ಕೈಗಾರಿಕೆಗಳು ಲಾಭ
ಲುಕ್ಸಾನಿನ ಪ್ರತಿ ದಿವಸದ ಲೆಕ್ಕಾಚಾರದಮೇಲೆ ನಡೆಯಬೇಕು. ಲಾಭದ ನಿರೀಕ್ಷೆ ಇಲ್ಲದೆ ಕೇವಲ

(ಶ್ರೀ ಕೆ. ಎಚ್. ಶ್ರೀನಿವಾಸ್)

ಹೆಚ್ಚು ಜನರನ್ನು ಅದರಲ್ಲಿ ತೊಡಗಿಸಬಹುದು ಮತ್ತು ಅದರಿಂದ ಎಲ್ಲ ವಿತರಣೆಯಾಗುತ್ತದೆ ಎಂದು ಕೆಲವು ಆದರ್ಶ ಶಬ್ದಗಳಿಗೆ ನೇತು ಹಾಕಿಕೊಂಡು ನಡೆಸುವುದಕ್ಕೆ ಸಾಧ್ಯವಿಲ್ಲ.

ಶ್ರೀ ಡಿ. ಎಂ. ಸಿದ್ದಯ್ಯ.—ಪಬ್ಲಿಕ್ ಸೆಕ್ಟಾರಿನಲ್ಲಿ ನಡೆಸತಕ್ಕ ಕೈಗಾರಿಕೆಗಳಲ್ಲಿ ಲಾಭ ಬರ ಬಾರದು ಎನ್ನುವ ದೃಷ್ಟಿಯನ್ನು ಹೊಂದಿರಬೇಕು ಎಂದು ಯಾರೂ ಹೇಳುವುದಿಲ್ಲ. ಆದರೆ ಲಾಭವನ್ನು ಪ್ರಾಮುಖ್ಯವಾಗಿ ಇಟ್ಟುಕೊಳ್ಳತಕ್ಕದು ಬೇಕಾಗಿಲ್ಲ ಎನ್ನುವುದು ಒಂದು ಅಂಶ ಮತ್ತು ಅದನ್ನು ಸರಿಯಾದ ರೀತಿ ನಡೆಸಿದರೆ ಪ್ರೈವೇಟ್ ಸೆಕ್ಟಾರಿನಲ್ಲಿ ಏನು ಲಾಭ ಬರುತ್ತದೆಯೋ ಅದಕ್ಕಿಂತ ಹೆಚ್ಚು ಲಾಭ ಬರತಕ್ಕ ನಿದರ್ಶನಗಳಿವೆ. ಅದಕ್ಕೆ ದಕ್ಷವಾದ ಆಡಳಿತ ಬೇಕು, ಪ್ರಾಪರ್ ಗೇರ್ ಅಪ್ ಬೇಕು.

ಶ್ರೀ ಕೆ. ಎಚ್. ಶ್ರೀನಿವಾಸ್.—ಸಾರ್ವಜನಿಕ ರಂಗದಲ್ಲಿರತಕ್ಕ ಕೈಗಾರಿಕೆಗಳು ಲಾಭ ಸಂಪಾ ದನೆಯನ್ನು ಏಕೆ ಮಾಡಬಾರದು ? ಇದು ಅತ್ಯುತ್ತಮವಾದ ಸವಾಲು. ನಿಜವಾಗಿ ಈ ಸವಾಲನ್ನು ಎದುರಿಸತಕ್ಕ ಯೋಗ್ಯತೆ ದೇಶಕ್ಕೆ ಬಂದರೆ ಎಲ್ಲ ಸಮಸ್ಯೆಗಳೂ ಕೂಡ ಬಗೆಹರಿಯುತ್ತವೆ. ಸಾರ್ವ ಜನಿಕ ವಲಯದಲ್ಲಿನ ಕೈಗಾರಿಕೆಗಳು ಲಾಭ ಸಂಪಾದನೆ ಮಾಡಲಿಕ್ಕೆ ಸಾಧ್ಯವಿಲ್ಲ ಎಂದು ಹೇಳ ತಕ್ಕುದು ನನ್ನ ಉದ್ದೇಶವಲ್ಲ. ಲಾಭ ಸಂಪಾದನೆ ಗುರಿಯನ್ನು ಅದಕ್ಕೆ ಹಾಕಬೇಕು, ಆ ಗುರಿ ಇರಬೇಕು, ಆ ಗುರಿಯನ್ನು ಹಿಂದಕ್ಕೆ ಸರಿಸಿದರೆ ಲಾಭ ಸಂಪಾದನೆಯ ಕಡೆಗೆ ಮುಖ ಮಾಡುವುದಕ್ಕೆ ಆಗುವುದಿಲ್ಲ. ನಿರ್ದಿಷ್ಟವಾಗಿ ಈ ಕೈಗಾರಿಕೆಗಳ ಮುಂದೆ ಈ ಗುರಿಯನ್ನು ಇಡಬೇಕು ಎಂದು ನಾನು ಒತ್ತಾಯಪಡಿಸುತ್ತೇನೆ.

ಇನ್ನು ಸಾರ್ವಜನಿಕ ವಲಯದಲ್ಲಿ ಕೆಲವು ಕೈಗಾರಿಕೆಗಳು ಯಶಸ್ವಿಯಾಗುತ್ತಿಲ್ಲ, ಅದಕ್ಕೆ ಹಲವಾರು ಕಾರಣಗಳಿವೆ. ಒಂದು ಕೈಗಾರಿಕೆ ಯಶಸ್ವಿಯಾಗಬೇಕಾಗಿದ್ದರೆ ಅದರಲ್ಲಿ ಎಂಟರ್ ಪ್ರ್ಯೂನರ್‌ಷಿಪ್ ಮಾಡುವ ಜನರ ಪಾತ್ರ ಬಹಳವಿದೆ. ಸರ್ಕಾರದ ಆಡಳಿತ ಯಂತ್ರವನ್ನು ತೆಗೆದು ಕೊಂಡರೆ ನಮ್ಮ ಆಡಳಿತದಲ್ಲಿ ಎಷ್ಟೊಂದು ಪ್ರೊಸೀಜರ್ಸ್ ಇವೆ ಎಂದರೆ ಒಂದೊಂದು ವೇಳೆ ಯಾರು ನಿರ್ಣಯ ತೆಗೆದುಕೊಳ್ಳಬೇಕು ಎನ್ನತಕ್ಕುದು ನಿರ್ಧರವಾಗುವುದಿಲ್ಲ. 20 ವರ್ಷಗಳ ಕಾಲದಲ್ಲಿ ಒಂದು ವಿಷಯದ ಮೇಲೆ ಯಾರು ನಿರ್ಣಯ ತೆಗೆದುಕೊಳ್ಳಬೇಕು ಎಂದು ಯೋಚನೆ ಮಾಡತಕ್ಕ ಪರಿಸ್ಥಿತಿ ಬರುತ್ತದೆ. ಸೆಕ್ರೆಟರಿ ಆರ್ಡರ್ ಮಾಡಬೇಕೇ, ಮಂತ್ರಿಮಂಡಲ ತೀರ್ಮಾನ ತೆಗೆದು ಕೊಳ್ಳಬೇಕೇ, ಮಂತ್ರಿಗಳು ತೀರ್ಮಾನ ತೆಗೆದುಕೊಳ್ಳಬೇಕೇ, ತಹಶೀಲ್ದಾರರು ತೆಗೆದುಕೊಳ್ಳ ಬೇಕೇ, ಯಾರು ತೆಗೆದುಕೊಳ್ಳಬೇಕು ಎಂದು ಫೈಲುಗಳು ಅಲ್ಲಿಂದ ಇಲ್ಲಿಗೆ, ಇಲ್ಲಿಂದ ಅಲ್ಲಿಗೆ ಹೋಗಿ ಅದರ ಬಗ್ಗೆ ಯಾರೂ ಜವಾಬ್ದಾರಿಯನ್ನು ತೆಗೆದುಕೊಳ್ಳುವ ಪರಿಸ್ಥಿತಿ ಇಲ್ಲ. ಇಂಥ ಪರಿಸ್ಥಿತಿ ಬಂದಿದೆ. ಹೀಗೆ ಇರುವಾಗ ಲಾಭ ಲುಕ್ಸಾನು ಪ್ರಶ್ನೆ ಇದ್ದರೆ ಯಾರು ಜವಾಬ್ದಾರಿ ತೆಗೆದುಕೊಳ್ಳು ತ್ತಾರೆ ? ನಮ್ಮ ಕೈಗಾರಿಕೆಗಳಲ್ಲಿ ಮುಖ್ಯವಾಗಿ ಆಗಿರುವ ತೊಂದರೆ ಏನು ಎಂದರೆ ಖಾಸಗಿ ಮನುಷ್ಯ ಮಾಡುವಂತೆ ಸರ್ಕಾರಿ ವಲಯದಲ್ಲಿ ತೀರ್ಮಾನ ತೆಗೆದುಕೊಳ್ಳುವುದಕ್ಕೆ, ಅದನ್ನು ಕಾರ್ಯಗತ ಮಾಡುವುದಕ್ಕೆ ಸಾಧ್ಯವಿಲ್ಲ. ಅಂಥ ಮೆಷಿನರಿ ಇಲ್ಲ. ನಮ್ಮ ಆರ್ಡಿನರಿ ಅಡ್ಮಿನಿಸ್ಟ್ರೇಟಿವ್ ಮೆಷಿನರಿ ಯನ್ನು ಅದರಲ್ಲಿ ತೊಡಗಿಸಿದರೆ ಅದು ಆ ಕೆಲಸವನ್ನು ನಿರ್ವಹಿಸುವುದಕ್ಕೆ ಸಾಧ್ಯವಿಲ್ಲ. ಅದಕ್ಕಾಗಿ ವಿಶೇಷವಾದ ಕೇಡರ್ ನಾವು ತಯಾರುಮಾಡತಕ್ಕ ಪರಿಸ್ಥಿತಿಯಲ್ಲಿಲ್ಲ. ಜನರ ಭಾವನೆ ಏನಿದೆ, ಕಾರ್ಮಿಕರ ಭಾವನೆ ಏನಿದೆ, ಜನ ಯಾವುದರಿಂದ ಸ್ಫೂರ್ತಿಗೊಳ್ಳುವುದಕ್ಕೆ ತಯಾರಿದ್ದಾರೆ, ಜನ ತಮ್ಮ ಹಕ್ಕುಗಳ ಬಗ್ಗೆ ಮತ್ತು ತಮ್ಮ ಭೀತಿಯ ಬಗ್ಗೆ ತೀವ್ರವಾಗಿ ಸದಾಕಾಲ ಯೋಚನೆ ಮಾಡು ತ್ತಾರೆ, ಈ ಎಲ್ಲ ಅಂಶಗಳನ್ನೂ ಪರಿಗಣಿಸಿಕೊಳ್ಳದೆ, ಏಕೆ ನಮ್ಮ ಪಬ್ಲಿಕ್ ಸೆಕ್ಟಾರ್ ಲಾಭಗಳಿಸ ಬಾರದು ಎಂದು ಕೇಳಿದರೆ ಉತ್ತರ ಸಿಗಲಿಕ್ಕೆ ಸಾಧ್ಯವಿಲ್ಲ. ಈವೊತ್ತಿನ ಪರಿಸ್ಥಿತಿಯನ್ನು ಮನ ಗಾಣಬೇಕು, ಅದನ್ನು ಮನಗಂಡು ಅದನ್ನು ಒಪ್ಪಿಕೊಳ್ಳಬೇಕಾಗುತ್ತದೆ.

6-00 P.M.

ಆದರೆ ಈ ಕೈಗಾರಿಕೆಗಳನ್ನು ನಾವು ಖಾಸಗಿ ವಲಯದಲ್ಲಿ ಸ್ಥಾಪಿಸಬೇಕಾದರೆ ಸಿದ್ದಯ್ಯ ನವರು ಹೇಳಿರುವುದನ್ನು ಗಮನಿಸಬೇಕಾಗಿದೆ. ವೆಸ್ಟೆಡ್ ಇಂಟರೆಸ್ಟ್, ರಾಜಮಹಾರಾಜರಿರ ಬಹುದು, ಟಾಟಾ-ಬಿರ್ಲಾ ಇರಬಹುದು ಅಥವ ಇವತ್ತು ಕಣ್ಣಿಗೆ ಕಾಣದಿರುವವರು ಅನೇಕರಿರ ಬಹುದು. ಯಾರೇ ಇರಲಿ, ಆಸಕ್ತ ಹಿತಗಳಿಗೆ ಸುಲಭವಾಗಿ ದೇಶದ ಭವಿಷ್ಯವನ್ನು ಬಲಿ ಕೊಡು ವುದು ಆಗಬಾರದು ಎಂದು ಎಚ್ಚರಿಕೆ ವಹಿಸಬೇಕು. ಯಾವ ಯಾವ ವೇಷವನ್ನು ತಾಳಿ ಸಂಘ

ಸಂಸ್ಥೆಗಳ ಹೆಸರಿನಲ್ಲಿ ಯಾರು ಬರುತ್ತಾರೆ ಎಂದು ಹೇಳುವುದು ಕಷ್ಟ. ಇದರ ಬಗ್ಗೆ ಅತ್ಯಂತ ಸೂಕ್ಷ್ಮವಾಗಿ ಸರಕಾರ ನೋಡಬೇಕಾದ್ದು ಅಗತ್ಯವಾಗಿದೆ. ಅಸಕ್ತ ಹಿತಗಳಿಗೆ ಅವಕಾಶ ಕೊಡದೆ ಖಾಸಗಿವಲಯ ಬೆಳೆಸುವುದು ತಪ್ಪಲ್ಲ. ಅವರಮೇಲೆ ಜವಾಬ್ದಾರಿಯನ್ನು ಹೊರಿಸುವುದರಿಂದ ಸಮಾಜವಾದಕ್ಕೆ ಧಕ್ಕೆ ಬರುವುದಿಲ್ಲ. ಇದಕ್ಕೆ ಶಾಸನಸಭಾ ಸದಸ್ಯರ ಒಂದು ಸಮಿತಿಯನ್ನು ಮಾಡುವುದಾಗಿ ಹೇಳಿದ್ದಾರೆ. ಬಹು ಬೇಗ ಇದಾಗಿ ಕೆಲಸ ಮಾಡುವಂತಾಗಲಿ ಎಂದು ಆಶೆ ಪಡುತ್ತೇನೆ.

SRI ABDUL KHUDDUS ANWAR (Bhadravati).—Mr. Speaker, Sir, most of our frieads on this side as well as on the other side have spoken at length about industries. I will deal particularly with the Bhadravati Iron and Steel Industsy, of which I was one of the employees for more than 30 years and I know the ins and outs of this factory. I oppose the Demand for the reason that the amount sanctioned for the development of industries is very meager. And its defective planning. As per the figures furnished, it is stated that about 1,40,000 tonnes of mild steel will be produced. The capacity of the present Rolling mill is that it can consume about 16,000 ingot tonnes of steel, thereby you will have a surplus of 60,000 tonnes. What are you going to do with that huge surplus. Previously, there was a plant consuming about 40,000 tonnes. You have to sell steel at competitive rates on par with Tatas and Hindustan Steel. Your cost of produation is about Rs. 700 per tonne, whereas you have to sell it at the rate of Rs. 650 per tonne, losing Rs. 50 per tonne. They say that they have increased their export by Rs. 90 lakhs. It is not correct. I suggest that they should have another Rolling mill on a continous casting machine. I understand that they are commissioning another mill, but it will consume not more than 30,000 tonnes.

They are manufacturing manganese, steel, carbon steel, etc., for the last 25 years. M/s. Ibcons and I.D.C. and Hooth, who are to produce this special steel *i.e.*, (alloy steel) are a burden to the factory; they are all parasites. The Forest Department is also a parasite, because it is taking away nearly one lakh of rupees per month towards supply of charcoal breaze. Which was rejected last year and supplied the same in collabaration with the contractors and thus put the works to heavy losses by this unholy alliance. There is a special officer Mr. Hooth with two assistants, who are drawing nearly Rs. 25 lakhs per annum. Our Hon'ble Minister assured us that this department will be wound up after the completion of erection of the new plant. I hope the Hon'ble Minister will keep up his promise. M/s. Ibcon is another parasite over this factory. They are consuming crores of rupees, whereas the workers are ignord. The workers who were getting 3 months bonus or 20 per cent of their salary, are now getting only 4 per cent bonus. Nearly Rs. 4 crores are wasted over unnecessary expenditure. I suggest that this unnecessary expenditure should be avoided. You can avoid this unnecessary expenditure by getting the work done by our own experienced engineers and workmen. There is discontentment among the rank and file of these workers, thereby production has gone down. The profit during 1965-66 was Rs. 80 lakhs. After the commissioning of the new Steel Plant, the

(SRI ABDUL KHUDDUS ANWAR)

profit remains the same. If unnecessary expenditure is avoided by winding up Ibcon I. D. C. and a vigil is kept over the supply of charcool and purchase of quality scrap, I am sure, there will be a savings of Rs. 2½ crores, and the factory will be in a position to pay substantial bonus to the workers. Recruitment to top posts is going on and there is top heavy expenditure. There were only one or two General Managers before, but now there are many such as General Manager, Additional General Manager, Joint Mangager, Assistant Manager, and so on. There is addition and addition only, but no substraction anywhere. There is no dearth for technical people here. They say that they are not making any purchases from outside and they are self-sufficent in refractaries. It is not correct. They are purchasing magnasite bricks from outside by spending Rs. 1½ crores per annum. I suggest that these bricks should be manufactured in this factory and thereby save at least Rs. 1 crore every year. It is better to wind up Ibcon, I. D. C. and Hooth or Booth—he is a bhootha for me.

It is already 3 months that the new person Mr. Hooth was appointed to be in charge of the new Plant. They have not produced any alloy steel so far ; nor they have rolled any alloy steel and it has not gone to the market. The carbon steel which was being supplied to Hassan and Bombay customers from a long time is being continued. In my opinion, it may take one year to standardise this section if Mr. Hooth gives the technique of manufacture of Alloy-steel to our engineers. I request the Government to appoint a Committee to go into the working of this industry, where the Government has invested nearly 60 crores, and to suggest ways and means of improving it. I feel that our young and energetic Minister will take interest in this and encourage our own engineers, who are already there in service, who have done very good work. Arrangements must be made to post people who are well-versed in the line but not think of posting non-technician General Manager over the helm of affairs. Else the production of Alloy steel will be a force and the present production of Manganese and corbon steel will also godown. The Mining Department is another headache. The purchase policy, I feel, is not correct. There are lot of defects in the purchase of the scrap. There is huge quantity of scrap lying idle. There is some underhand dealings in the purchase of scrap. They purchase it from the railways and supply through some other agency. It is all nothing but rubbish. Unless you have quality scrap you cannot produce Alloy steel. No factory in the world is producing 40,000 tonnes of alloy steel in a single unit of a magnitude of 5 million tonnes capacity. How dare or our people to go to the extent of saying that we will produce 70,000 Tons of special steel ? I challenge, I resign my membership if you produce 70,000 Tons of Alloy steel in a Toy plant of this size. It requires special technicians and quality scrap. We have in our State such technicians who are well-trained. I suggest the Hon Minister to give a chance to our engineers and see that our industries prosper.

There are some other suggestions and I have also written some suggestions to the Hon. Minister, which may also be considered. I also suggest that the Government should try to start another steel industry, so as to solve our unemployment problem and to encourage our young and talented engineers.

With these words, I thank the Hon. Chair and conclude my speech.

†ಶ್ರೀ ಎಂ. ರಾಜಶೇಖರಮೂರ್ತಿ (ಕೈಗಾರಿಕಾ, ವಾರ್ತಾ ಮತ್ತು ಪ್ರಚಾರಶಾಖೆಗಳ ಮಂತ್ರಿಗಳು).—ಸ್ವಾಮಿ, ಈ ಮನೆಯಲ್ಲಿ ಕೈಗಾರಿಕೆಯ ಬಗ್ಗೆ ನಡೆದ ಚರ್ಚೆಯನ್ನು ನಾನು ಬಹಳ ಕುತೂಹಲದಿಂದ ಕೇಳಿದ್ದೇನೆ. ಕೆಲವರು ಕಟುವಾಗಿ ಟೀಕೆ ಮಾಡಿದ್ದಾರೆ. ಅನೇಕ ಮಾನ್ಯಸದಸ್ಯರು ಒಳ್ಳೆಯ ಸಲಹೆಗಳನ್ನೂ ಕೂಡ ಕೊಟ್ಟಿದ್ದಾರೆ. ಅವರು ಕೊಟ್ಟ ಸಲಹೆಗಳನ್ನೆಲ್ಲಾ ಸಂತೋಷದಿಂದ ಸ್ವೀಕರಿಸುತ್ತೇನೆ. ಮಾನ್ಯ ಸದಸ್ಯರು ಕೆಲವರು ಟೀಕೆ ಮಾಡುವ ಕಾಲಕ್ಕೆ ಮೈಸೂರು ಸರ್ಕಾರ ನಡೆಸತಕ್ಕ ಕೈಗಾರಿಕೆಗಳು ನಷ್ಟದಿಂದ ಕೆಲಸ ಮಾಡುತ್ತಾ ಇವೆ ಅಂತ ಅನ್ನುವುದಕ್ಕೆ ಕೆಲವಾರು ಅಂಕಿಅಂಶಗಳನ್ನೂ ಕೂಡ ಕೊಟ್ಟರು. ನಾನೂ ಕೂಡ ಶಾಸನ ಸಭೆಯಲ್ಲಿ 1952ನೇ ಇಸವಿಯಿಂದ ಇದ್ದೇನೆ, 1952ರಿಂದಲೂ ಕೂಡ ಮಾನ್ಯ ಸದಸ್ಯರು ಮಾತನಾಡುವಾಗ ಈ ಕೈಗಾರಿಕೆಗಳೆಲ್ಲಾ ನಷ್ಟದಿಂದ ಕೆಲಸಮಾಡುತ್ತಿವೆ ಅಂತಲೇ ಹೇಳುತ್ತಾ ಇದ್ದಾರೆ. 1952ರಿಂದ ನಮ್ಮ ಕೈಗಾರಿಕೆಗಳು ಯಾವ ಯಾವ ರೀತಿ ಕೆಲಸ ಮಾಡುತ್ತಾ ಇವೆ ಎಂಬುದನ್ನು ಸ್ವಲ್ಪ ಕೂಲಂಕಷವಾಗಿ ವಿಚಾರ ಮಾಡಿ ನೋಡಿದೆ. ನಮ್ಮ ಕೈಗಾರಿಕೆಗಳು ಅವರು ಹೇಳುವ ರೀತಿಯಲ್ಲಿ ನಷ್ಟದಲ್ಲಿ ಕೆಲಸ ಮಾಡುತ್ತಿಲ್ಲ. ಒಂದೆರಡು ಕೈಗಾರಿಕೆಗಳ ಹೊರತು ಬಾಕಿ ಎಲ್ಲಾ ಕೈಗಾರಿಕಗಳೂ ಬಹಳ ಚೆನ್ನಾಗಿ ಕೆಲಸ ಮಾಡುತ್ತಾ ಇವೆ. 1951-52ರಿಂದ 1966-67ರವರೆಗೂ ನಮ್ಮ ಕೈಗಾರಿಕೆಗಳಲ್ಲಿ ಒಟ್ಟು ಬಂದಿರತಕ್ಕ ಲಾಭ 14 ಕೋಟಿ 99 ಲಕ್ಷ 53 ಸಾವಿರರೂಪಾಯಿ. ಒಟ್ಟು ನಷ್ಟ 4 ಕೋಟಿ 26 ಲಕ್ಷ 25 ಸಾವಿರ, ನೆಟ್ ರಿಟರ್ನ್ಸ್ 10 ಕೋಟಿ 73 ಲಕ್ಷ 28 ಸಾವಿರ. ಬ್ಯಾಲೆನ್ಸ್ ಷೀಟು ತಯಾರು ಮಾಡುವಾಗ ಖಾಸಗಿ ಸಂಸ್ಥೆಗಳವರು ಯಾವ ರೀತಿ ತಯಾರುಮಾಡುತ್ತಾರೆಯೋ ಅದೇ ರೀತಿ ಅದೇ ತತ್ವದ ಆಧಾರದ ಮೇಲೆ ನಮ್ಮ ಕೈಗಾರಿಕೆಗಳ ಬ್ಯಾಲೆನ್ಸ್ ಷೀಟನ್ನೂ ಕೂಡ ತಯಾರು ಮಾಡಿದ್ದೇವೆ. 7% ಬಡ್ಡಿ ಇಲ್ಲದೆ ಡಿಪ್ರಿಸಿಯೇಷನ್ ಕೊಡುತ್ತಾ ಇದ್ದೇವೆ. ಇಂಟರೆಸ್ಟ್ ಮತ್ತು ಡಿಪ್ರಿಸಿಯೇಷನ್ನು ಸರ್ಕಾರಕ್ಕೆ ಹೋಗುತ್ತದೆ, ಅದು ಎಷ್ಟು ಎಂಬುದನ್ನು ಹೇಳುತ್ತೇನೆ. 1951-52 ರಿಂದ 1966-67 ರವರೆಗೆ ಕೈಗಾರಿಕೆಗಳಿಂದ ಸರ್ಕಾರಕ್ಕೆ ಕೊಟ್ಟಿರುವ ಒಟ್ಟು ಬಡ್ಡಿ ಮೊಬಲಗು 8 ಕೋಟಿ 3 ಲಕ್ಷ 5 ಸಾವಿರ ರೂಪಾಯಿ. ಡಿಪ್ರಿಸಿಯಷನ್ ರೂಪದಲ್ಲಿ ಕೊಟ್ಟಿರುವ ಮೊಬಲಗು 6 ಕೋಟಿ 50 ಲಕ್ಷ ರೂಪಾಯಿ ಎಂದರೆ ಸರ್ಕಾರದ ಬೊಕ್ಕಸಕ್ಕೆ ಎಲ್ಲಾ ಕೈಗಾರಿಕೆಗಳಿಂದ ಈ ಬಗ್ಗೆ ಹೋಗಿರತಕ್ಕ ಒಟ್ಟು ಮೊಬಲಗು 25 ಕೋಟಿ 23 ಲಕ್ಷ 33 ಸಾವಿರ ರೂಪಾಯಿ. ಇಷ್ಟು ಸರ್ಕಾರಕ್ಕೆ ಲಾಭ ಬಂದ ಹಾಗೆ ಆಯಿತು. ಖಾಸಗಿ ಕೈಗಾರಿಕೆಗಳಲ್ಲಿ ಡಿಪ್ರಿಸಿಯೇಷನ್ ತೆಗೆದಲ್ಲಿ ಅದು ಆ ಕೈಗಾರಿಕಾ ಕಂಪೆನಿಗೆ ಉಳಿಯುತ್ತದೆ. ಅದನ್ನು ಅವರು ರೋಲ್ ಮಾಡಿಕೊಂಡು ಹೋಗುತ್ತಾರೆ ಕಂಪೆನಿಯಲ್ಲಿ ಇನ್‌ವೆಸ್ಟ್ ಮಾಡುತ್ತಾರೆ. ಇಲ್ಲಿ ಹಾಗಲ್ಲ, ಡಿಪ್ರಿಸಿಯೇಷನ್ ತೆಗೆದರೆ ಅದು ಜನರಲ್ ಎಕ್ಸ್‌ಚಕರ್‌ಗೆ ಹೋಗುತ್ತದೆ. ಒಟ್ಟು ಲಾಭ 25 ಕೋಟಿ 23 ಲಕ್ಷ 33 ಸಾವಿರ ರೂಪಾಯಿ ಬಂದಿದೆ, ನಷ್ಟವಾಗಿರುವುದು 4 ಕೋಟಿ 26 ಲಕ್ಷ 25 ಸಾವಿರ ರೂಪಾಯಿ. ಇದರಲ್ಲಿ ಸಿಲ್ಕ್‌ಫಲೇಚರ್ಸ್ ಒಂದರಲ್ಲೇ ಸುಮಾರು 1 ಕೋಟಿ 82 ಲಕ್ಷ 87 ಸಾವಿರ ನಷ್ಟವಾಗಿದೆ. ಉಳಿದ ಎಲ್ಲಾ ಕಾರ್ಖಾನೆಗಳೂ ಸೇರಿ ನಷ್ಟವಾಗಿರುವುದು 2 ಕೋಟಿ 43 ಲಕ್ಷ 38 ಸಾವಿರ ರೂಪಾಯಿ. ಇದನ್ನು ನೋಡಿದರೆ ಸರ್ಕಾರಿ ಕೈಗಾರಿಕೆಗಳು ನಷ್ಟಹೊಂದುತ್ತಿವೆ ಎಂದು ಮಾನ್ಯ ಸದಸ್ಯರು ಮಾಡಿರತಕ್ಕ ಟೀಕೆ ಸತ್ಯಾಂಶಕ್ಕೆ ದೂರವಾದದ್ದು ಎಂದು ಗೊತ್ತಾಗುತ್ತದೆ.

ಮತ್ತು ಕೆಲವು ಸದಸ್ಯರು ಈ ಕೈಗಾರಿಕೆಗಳು ಮೊದಲು ಯಾವ ರೀತಿ ಇತ್ತೋ ಅದೇ ರೀತಿ ಇವೆ ಎಂದು ಹೇಳಿದರು. ಇನ್ನು ಕೆಲವರು ಬಹಳ ಅಧೋಗತಿಗೆ ಹೋಗಿದೆ ಎಂದು ಹೇಳಿದರು. ನಾನು ಆ ರೀತಿ ಅಧೋಗತಿಗೆ ಹೋಗಿದೆ ಎಂದು ಹೇಳುಳುವವನಾಗಿಲ್ಲ, ಕೈಗಾರಿಕೆ ಬೆಳವಣಿಗೆಯಾಗಿದೆ ಎಂದು ಹೇಳುವುದಕ್ಕೆ ಸಾಕಾದಷ್ಟು ಅಂಕಿಅಂಶಗಳನ್ನು ಕೊಡುತ್ತೇನೆ. 1951-52 ರಲ್ಲಿ ನಮ್ಮ ಎಲ್ಲಾ ಕೈಗಾರಿಕೆಗಳ ಒಟ್ಟು ಬಂಡವಾಳ ಇದ್ದದ್ದು 6 ಕೋಟಿ 22 ಲಕ್ಷ 29 ಸಾವಿರ ರೂಪಾಯಿ. 1966-67ರ ಕೊನೆಗೆ 56 ಕೋಟಿ 67 ಲಕ್ಷ 68 ಸಾವಿರ ರೂಪಾಯಿ ಆಗಿದೆ ಎಂದರೆ ಸುಮಾರು ಒಂದಕ್ಕೆ ಹತ್ತರಷ್ಟು ಜಾಸ್ತಿಯಾಗಿದೆ. ಬಹಳ ದೊಡ್ಡ ಪ್ರಮಾಣದಲ್ಲಿ ಬೆಳದಿದೆ. ಆಗಿನ

(ಶ್ರೀ ಎಂ. ರಾಜಶೇಖರಮೂರ್ತಿ)

ಕಾಲದಲ್ಲಿ ಇವು ಸಣ್ಣ ಕೈಗಾರಿಕೆಗಳಾಗಿದ್ದವು, ಇವುಗಳಿಗೆ ಹೆಚ್ಚು ಬಂಡವಾಳವನ್ನು ಹಾಕಿ ಬೆಳೆಸಿಕೊಂಡು ಬಂದಿದ್ದೇವೆ. ಈಗ ಇವೆಲ್ಲಾ ನಮ್ಮ ದೊಡ್ಡ ಕೈಗಾರಿಕೆಗಳಾಗಿವೆ. ಆದರೆ ಒಂದು ದೃಷ್ಟಿಯಿಂದ ಇವು ಈಗಲೂ ಕೂಡ ಸಣ್ಣ ಕೈಗಾರಿಕೆಗಳೇ ಅಂತ ಹೇಳಬೇಕು. ಈಗಿನ ಕೈಗಾರಿಕೆಗಳು 10 ಕೋಟಿ 20 ಕೋಟಿಯಿಂದ 100 ಕೋಟಿಯವರೆಗೂ ಆಗುತ್ತವೆ. ಸ್ಟೀಲ್ ಇಂಡಸ್ಟ್ರೀಗೆ 400–500 ಕೋಟಿ ರೂಪಾಯಿ ಆಗುತ್ತದೆ. ಅದಕ್ಕೆ ಹೋಲಿಸಿದರೆ ಇವು ಸಣ್ಣವೇ ಅಂತ ಹೇಳಬೇಕಾಗುತ್ತದೆ; ನಮ್ಮ ಕೈಗಾರಿಕೆಗಳು ಬೆಳೆದಿವೆ ಎಂಬುದನ್ನು ಬೇರೆ ಕೆಲವು ಅಂಕಿ ಅಂಶಗಳನ್ನು ಆಧಾರವಾಗಿಟ್ಟುಕೊಂಡು ಹೇಳುತ್ತೇನೆ. 1951-52 ರಲ್ಲಿ ನಮ್ಮ ದೇಶದಲ್ಲಿ ಪವರ್ ಕನ್‌ಸಂಪ್ಷನ್ ಎಷ್ಟು, ಎಷ್ಟು ಫ್ಯಾಕ್ಟರಿಗಳು ಇದ್ದವು, ಎಷ್ಟು ಜನ ಕೂಲಿಗಾರರು ಕೆಲಸ ಮಾಡುತ್ತಾ ಇದ್ದರು, ಪರ್‌ಕ್ಯಾಪಿಟಾ ಗ್ರಾಸ್ ಪ್ರೊಡಕ್ಷನ್ ಎಷ್ಟು, 1967-68ರಲ್ಲಿ ಎಷ್ಟಿದೆ ಎಂಬುದನ್ನೆಲ್ಲಾ ಹೇಳಿದರೆ ಮೈಸೂರು ಸಂಸ್ಥಾನದಲ್ಲಿ ಕೈಗಾರಿಕೆಗಳ ಬೆಳವಣಿಗೆ ಬಹಳ ಚೆನ್ನಾಗಿ ಆಗಿದೆ ಎಂದು ಮಾನ್ಯ ಸದಸ್ಯರಿಗೆ ಮನವರಿಕೆಯಾಗುತ್ತದೆ. 1951–51ರಲ್ಲಿ 245 ಮಿಲಿಯನ್ ಕಿಲೋವಾಟ್ ಪವರ್ ಕನ್‌ಸ್ಯೂಂ ಆಗುತ್ತಾ ಇತ್ತು. 1967–68ರಲ್ಲಿ 1152 ಮಿಲಿಯನ್ ಕಿಲೋವಾಟ್ ಪವರ್ ಕನ್‌ಸ್ಯೂಂ ಆಗುತ್ತಾ ಇದೆ. ಸುಮಾರು 500 ಪರ್ಸೆಂಟ್ ಇನ್‌ಕ್ರೀಸ್ ಆಗಿದೆ. ಇದು ಆಕ್ಚುಯಲ್ ಕನ್‌ಸಂಪ್ಷನ್. ಇದಲ್ಲದೆ ಕೈಗಾರಿಕೆಗಳಿಗೆ ಕಮಿಟ್ ಮಾಡಿಕೊಂಡಿದ್ದೇವೆ. ಬೆಳಗಾಂನಲ್ಲಿ ಅಲ್ಯೂಮಿನಿಯಂ ಫ್ಯಾಕ್ಟರಿ, ಮೈಸೂರು ಐರನ್ ಅಂಡ್ ಸ್ಟೀಲ್ ವರ್ಕ್ಸ್ ಹೀಗೆ ಅನೇಕ ಇಂಡಸ್ಟ್ರೀಗಳಿಗೆ ಕಮಿಟ್ ಮಾಡಿಕೊಂಡಿದ್ದೇವೆ. ಈ ವರ್ಷದ ಕೊನೆ ಡಿಸೆಂಬರ್ ಹೊತ್ತಿಗೆ ಅನೇಕ ಕೈಗಾರಿಕೆಗಳು ಪ್ರೊಡಕ್ಷನ್‌ಗೆ ಹೋಗುತ್ತವೆ. ಅವರಿಗೆ ಪವರ್ ಕೊಡುತ್ತೇವೆ ಎಂದು ಏನು ಮಾತು ಕೊಟ್ಟಿದ್ದೇವೆ ಅದು ಇದರಲ್ಲಿ ಸೇರಿಲ್ಲ. ಅದು ಸೇರಿದ ವೇಳೆ ಸುಮಾರು 600 ಪರ್ಸೆಂಟ್ ಜಾಸ್ತಿಯಾಗುತ್ತದೆ. ಇನ್ನು ನಮ್ಮಲ್ಲಿರತಕ್ಕ ರಿಜಿಸ್ಟರ್ಡ್ ಫ್ಯಾಕ್ಟರಿಗಳೆಷ್ಟು ಮತ್ತು ಕೆಲಸ ಮಾಡತಕ್ಕ ಕೂಲಿಗಾರರೆಷ್ಟು ಎಂಬುದರ ಬಗ್ಗೆ ಕೆಲವು ಅಂಕಿಅಂಶಗಳನ್ನು ತಮ್ಮ ಮುಂದಿಡಲು ಇಚ್ಛಿಸುತ್ತೇನೆ. 1951 ರಲ್ಲಿ ರಿಜಿಸ್ಟರಾದ ಫ್ಯಾಕ್ಟರಿಗಳ ಸಂಖ್ಯೆ 453 ಅವುಗಳಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರ ಸಂಖ್ಯೆ 55 ಸಾವಿರ ಇತ್ತು. ಆದರೆ 1960 ರಲ್ಲಿ ರಿಜಿಸ್ಟರಾದ ಫ್ಯಾಕ್ಟರಿಗಳ ಸಂಖ್ಯೆ 2550. ಅವುಗಳಲ್ಲಿ ಒಟ್ಟು ಕೆಲಸ ಮಾಡುತ್ತಿದ್ದ ಕಾರ್ಮಿಕರ ಸಂಖ್ಯೆ ಒಂದು ಲಕ್ಷದ ಎಪ್ಪತ್ತೆರಡು ಸಾವಿರ. 1966ಕ್ಕೆ ಅದೇ ರಿಜಿಸ್ಟರ್ಡ್ ಫ್ಯಾಕ್ಟರಿಗಳ ಸಂಖ್ಯೆ ಎಷ್ಟೆಂದರೆ 2769. ಅಲ್ಲಿ ಕೆಲಸ ಮಾಡತಕ್ಕ ಕಾರ್ಮಿಕರ ಸಂಖ್ಯೆ ಎರಡುಲಕ್ಷದ ನಲವತ್ತುಸಾವಿರ. ಇನ್ನು 1968ರಲ್ಲಿ ರಿಜಿಸ್ಟರಾದ ಫ್ಯಾಕ್ಟರಿಗಳ ಸಂಖ್ಯೆ 3000 ಮತ್ತು ಅಲ್ಲಿ ಕೆಲಸಮಾಡತಕ್ಕ ಕಾರ್ಮಿಕರ ಸಂಖ್ಯೆ ಎರಡುಲಕ್ಷದ ಅರವತ್ತುಸಾವಿರ. ಇನ್ನು ಅವುಗಳಿಂದ ಉತ್ಪತ್ತಿಮಾಡಲಾದ ಟೋಟಲ್ ಗ್ರಾಸ್ ಪ್ರೊಡಕ್ಷನ್ ತೆಗೆದುಕೊಂಡರೆ 1960ರಲ್ಲಿದ್ದದ್ದು 92 ಕೋಟಿ. 1965ಕ್ಕೆ ಇದು 229 ಕೋಟಿಗೇರಿತು. ನಾನು ಈಗ ಕೊಡುತ್ತಿರುವ ಅಂಕಿಅಂಶಗಳೆಲ್ಲಾ ಸೆಂಟ್ರಲ್ ಸ್ಟ್ಯಾಟಿಸ್ಟಿಕಲ್ ಸರ್ವೆ ಡಿಪಾರ್ಟ್‌ಮೆಂಟಿನವರು ತಯಾರಿಸಿದ್ದು. ಅದರ ಒಂದು ಆಧಾರದ ಮೇಲೆ ಹೇಳುತ್ತಿದ್ದೇನೆ, ಇನ್ನು ಆ ಗ್ರಾಸ್ ಔಟ್‌ಪುಟ್ಟಿನ ವ್ಯಾಲ್ಯೂ ತೆಗೆದುಕೊಂಡರೆ 1960ರಲ್ಲಿ ಇದ್ದ ಗ್ರಾಸ್ ವ್ಯಾಲ್ಯೂ 26 ಕೋಟಿ. ಅದು 1966ಕ್ಕೆ 75 ಕೋಟಿಗೇರಿತು. ಇಷ್ಟು ಉತ್ಪಾದನೆಯನ್ನು ತೆಗೆಯುವುದಕ್ಕೆ ಹಾಕಿದ ಪ್ರಿನ್‌ಸಿಪಲ್ ಪರ್‌ಕ್ಯಾಪಿಟಾ ಔಟ್‌ಪುಟ್ 1960 ರಲ್ಲಿ 40 ರೂಪಾಯಿಗಳು ಇದ್ದದ್ದು 1965ಕ್ಕೆ 88 ರೂಪಾಯಿಗಳಿಗೇರಿತು. ಇದಕ್ಕೆ ಪರ್‌ಕ್ಯಾಪಿಟಾ ವ್ಯಾಲ್ಯೂ ಆಡ್ ಮಾಡಿದರೆ 1960 ರಲ್ಲಿ 11 ರೂ.ಗಳು ಇದ್ದದ್ದು 1965 ರಲ್ಲಿ 29 ರೂಪಾಯಿಗಳು. ನಾವು ಆಲಿಂಡಿಯಾ ಆವರೇಜ್ ಪರ್‌ಕ್ಯಾಪಿಟಾ ಇನ್‌ಕಂ ತೆಗೆದುಕೊಂಡರೆ 138·6 ಪರ್ಸೆಂಟ್ ಇದ್ದರೆ ನಮ್ಮ ಮೈಸೂರಿನ ಇನ್‌ಕಂ 186.3 ಪರ್ಸೆಂಟಿದೆ. ಆದರೆ ಮೈಸೂರಿನ ಜನರಲ್ ಆವರೇಜ್ all India averageಗಿಂತ ಜಾಸ್ತಿಯಿರುತ್ತದೆ. ಈ ಅಂಕಿಅಂಶಗಳನ್ನೆಲ್ಲಾ ಪರಿಶೀಲಿಸಿ ನೋಡಿದರೆ ನಮ್ಮ ರಾಜ್ಯದಲ್ಲಿ ಸಾಕಾದಷ್ಟು ಕೈಗಾರಿಕಾ ಪ್ರಗತಿಯಾಗಿದೆ ಎಂದು ಗೊತ್ತಾಗುತ್ತದೆ.

ಇನ್ನು ಲೈಸೆನ್ಸ್‌ಗಳ ಬಗ್ಗೆ ಕೆಲವು ಮಾನ್ಯ ಸದಸ್ಯರು ಮಾತನಾಡಿದ್ದಾರೆ. 1951ರಿಂದ 1968ರವರೆಗೆ ಒಟ್ಟು 1034 ಅರ್ಜಿಗಳು ಬಂದಿವೆ. ಅ ಪೈಕಿ ಕೇಂದ್ರಕ್ಕೆ ನಾವು ಶಿಫಾರಸ್ ಮಾಡಿದ್ದುದು 776 ಅರ್ಜಿಗಳು. ಹಾಗೆ ಶಿಫಾರಸ್ ಮಾಡಲಾಗಿದ್ದ ಅರ್ಜಿಗಳಲ್ಲಿ ಲೈಸೆನ್ಸ್ ಮಂಜೂರಾದದ್ದು 425. ಹಾಗೆ ಮಂಜೂರಾದ ಅರ್ಜಿಗಳಲ್ಲಿ ಕಾರ್ಯಾರಂಭ ಮಾಡತಕ್ಕ ಲೈಸೆನ್ಸ್‌ಗಳ ಸಂಖ್ಯೆ 54. ಈ 54ರಲ್ಲಿ ನಮ್ಮ ಮೈಸೂರು ರಾಜ್ಯದ ಉದ್ಯಮಿಗಳಿಗೆ ಸೇರಿದ್ದು 36. ಇನ್ನುಳಿದವು ಬೇರೆ ರಾಜ್ಯದ ಉದ್ಯಮಿಗಳಿಗೆ ಸೇರಿದವುಗಳು. ಈ ಡಿಮ್ಯಾಂಡುಗಳ ಸಂದರ್ಭದಲ್ಲಿ ಮಾತನಾಡಿದ ಅನೇಕ ಮಾನ್ಯ ಸದಸ್ಯರು ನಮ್ಮ ರಾಜ್ಯದವರಿಗೇ ಇಲ್ಲಿ ಕೈಗಾರಿಕೆಗಳನ್ನು ನಡೆಸುವುದಕ್ಕೆ ಒಂದು ಹೆಚ್ಚಿನ ಪ್ರೋತ್ಸಾಹ

ನೀಡಬೇಕೆಂದು ಒತ್ತಾಯ ಮಾಡಿದ್ದಾರೆ. ನಿಜ. ಅದು ನಮ್ಮ ಮನಸ್ಸಿನಲ್ಲೂ ಇದೆ. ನಮ್ಮ ರಾಜ್ಯದಲ್ಲಿ ಒಳ್ಳೆಯ ಖನಿಜ ಸಂಪತ್ತಿದೆ, ಅರಣ್ಯ ಸಂಪತ್ತಿದೆ. ಜಲ ಸಂಪತ್ತಿದೆ. ಸಮುದ್ರತೀರವಿದೆ, ಒಳ್ಳೆಯ ಹವಾಗುಣ ಇದೆ. ಇಷ್ಟೆಲ್ಲಾ ಪ್ರಕೃತಿ ಸಂಪತ್ತುಗಳಿದ್ದರೂ ಮಂಜೂರಾದ ಲೈಸೆನ್ಸ್‌ದಾರರಲ್ಲಿ ನಮ್ಮ ರಾಜ್ಯದ 36 ಉದ್ಯಮಿಗಳು ಕಾರ್ಯವನ್ನು ಆರಂಭಮಾಡಲಿಲ್ಲ. ಆ ದೃಷ್ಟಿಯಿಂದ ಹಾಲಿ ಇರತಕ್ಕ ಮುಖ್ಯ ಮಂತ್ರಿಗಳೂ ಮತ್ತು ಮಾಜಿ ಮುಖ್ಯ ಮಂತ್ರಿಗಳೂ ಬೇರೆ ರಾಜ್ಯಗಳಿಗೆ ಹೋಗಿ ಕೈಗಾರಿಕಾ ಉದ್ಯಮಿಗಳನ್ನು ಆಹ್ವಾನ ಮಾಡಬೇಕಾಯಿತು. ನಾವು ಎಷ್ಟೇ ಪ್ರೋತ್ಸಾಹ ನೀಡುವುದಾಗಿ ಹೇಳಿದರೂ ನಮ್ಮ ಜನರು ಮುಂದೆ ಬರುತ್ತಿಲ್ಲ. ಆದರೆ ನಾವೆಲ್ಲರೂ ಒಟ್ಟಿನಲ್ಲಿ ಭಾರತೀಯರು ಎಂಬುದನ್ನು ಯಾರೂ ಮರೆಯಬಾರದು. ನಾವು ಬೇರೆ ರಾಜ್ಯಗಳವರಿಗೆ ಇಲ್ಲಿ ಸೌಕರ್ಯಗಳನ್ನು ಕೊಡಲೇಬೇಕು. ಹಾಗೆ ಬೇರೆ ರಾಜ್ಯಗಳವರು ನಮ್ಮ ರಾಜ್ಯದವರಿಗೂ ಅವರ ರಾಜ್ಯದಲ್ಲಿ ಕೈಗಾರಿಕೆಗಳನ್ನು ನಡೆಸುತ್ತೇವೆಂದರೆ ಪ್ರೋತ್ಸಾಹ ನೀಡಲೇಬೇಕು. ನಮ್ಮಲ್ಲಿ ತಾರತಮ್ಯ ಭಾವನೆಗಳು ಬರಬಾರದು. ನಾವೆಲ್ಲರೂ ಒಂದೇ, ಭಾರತ ದೇಶದವರು, ಎಂಬ ವಿಶಾಲ ದೃಷ್ಟಿಯಿಂದ ವರ್ತಿಸಬೇಕು.

ಇನ್ನು ಕೆಲವು ಸದಸ್ಯರು ನಮ್ಮ ರಾಜ್ಯದಲ್ಲಿ ಕೈಗಾರಿಕೆಗಳು ಅಭಿವೃದ್ಧಿಯಾಗಲಿಲ್ಲಾ ಎಂದು ಟೀಕೆ ಮಾಡಿದ್ದಾರೆ ಇನ್ನು ಕೆಲವರು ಅಭಿವೃದ್ಧಿ ಆಗಿದೆ, ಆದರೆ ಅದು ಸಾಲದು ಇನ್ನೂ ಹೆಚ್ಚು ಅಭಿವೃದ್ಧಿ ಆಗಬೇಕೆಂದು ಹೇಳಿದ್ದಾರೆ. ಈ ಕೈಗಾರಿಕೆಗಳ ಅಭಿವೃದ್ಧಿಯ ಬಗ್ಗೆ ನಾನು ತಮ್ಮಲ್ಲಿ ಒಂದು ಮಾತನ್ನು ಹೇಳುವುದಾದರೆ 1956 ರಿಂದ 1968ರವರೆಗೆ ಆ 12 ವರ್ಷಗಳ ಅವಧಿಯಲ್ಲಿ ನಮ್ಮಲ್ಲಿ ಪವರ್ ಷಾರ್ಟೇಜಿತ್ತು. ಕೇಂದ್ರ ಸರ್ಕಾರದವರು ಯಾವ ಒಂದಾನೊಂದು ಕಾಲದಲ್ಲಿ ಧಾರಾಳವಾಗಿ ಲೈಸನ್ಸುಗಳನ್ನು ಕೊಡುತ್ತಿದ್ದರೋ ಅಂಥಾ ಕಾಲದಲ್ಲಿ ನಮ್ಮಲ್ಲಿ ಪವರ್ ಷಾರ್ಟೇಜಿತ್ತು. ಆ ಕಾಲದಲ್ಲಿ ಕೆಲವು ಕೈಗಾರಿಕೆಗಳಿಗೆ ಷಿಫ್ಟ್ ಸಿಸ್ಟಂ ಕೂಡ ಅಗ ಮಾಡಲಾಗಿತ್ತು. ಅಲ್ಲದೆ ಕೈಗಾರಿಕೆಗೆ ಪಂಚವಾರ್ಷಿಕ ಯೋಜನೆಗಳಲ್ಲಿ ಸಾಕಷ್ಟು ಹಣವನ್ನು ಒದಗಿಸಲಿಲ್ಲ. ಮೊದಲನೆಯ ಪಂಚವಾರ್ಷಿಕ ಯೋಜನೆಗೆ ಒದಗಿಸಿದ ಹಣ 40 ಕೋಟಿ 50 ಲಕ್ಷ ರೂಪಾಯಿ. ಅದರಲ್ಲಿ ಕೈಗಾರಿಕೆಗೆ ಖರ್ಚಾದದ್ದು ಒಂದು ಕೋಟಿ 23 ಲಕ್ಷ ಮಾತ್ರ. ಅಂದರೆ ಯೋಜನೆಗೆ ಒದಗಿಸಿದ ಒಟ್ಟು ಹಣದಲ್ಲಿ ಶೇಕಡ 3ರ ರಷ್ಟಾಯಿತು. ದ್ವಿತೀಯ ಪಂಚವಾರ್ಷಿಕಯೋಜನೆಯ ಅಂದಾಜು 150 ಕೋಟಿ 10 ಲಕ್ಷ ರೂಪಾಯಿ. ಅದರಲ್ಲಿ ಕೈಗಾರಿಕೆಗೆ ಖರ್ಚಾದದ್ದು 7.36 ಕೋಟಿ ರೂಪಾಯಿ. ಇದು ಶೇಕಡ 5 ರಷ್ಟಾಗುತ್ತದೆ. ಇನ್ನು ತೃತೀಯ ಪಂಚವಾರ್ಷಿಕ ಯೋಜನೆಯ ಅಂದಾಜು ಮೊಬಲಗು 264 ಕೋಟಿ 12 ಲಕ್ಷ ಅದರಲ್ಲಿ ಕೈಗಾರಿಕೆಗೆ ಖರ್ಚಾದದ್ದು 14 ಕೋಟಿ 89 ಲಕ್ಷ. ಅಂದರೆ ಒದಗಿಸಿದ ಹಣದಲ್ಲಿ ಇದು ಶೇಕಡ 5.6 ಆಗುತ್ತದೆ. Power Shortage ಜತೆಗೆ ನಮ್ಮಲ್ಲಿ ಕೈಗಾರಿಕೆಗಳು ಬೆಳೆಯದಿರುವುದಕ್ಕೆ ಪಂಚವಾರ್ಷಿಕ ಯೋಜನೆಗಳಲ್ಲಿ ಸಾಕಾದಷ್ಟು ಹಣವನ್ನು ಕೈಗಾರಿಕಾ ಬೆಳವಣಿಗೆಗೆ ಒದಗಿಸದಿರುವುದು ಒಂದು ಮುಖ್ಯಕಾರಣ.

ಕೆಲವು ಸದಸ್ಯರು ಭದ್ರಾವತಿಯ ಐರನ್ ಅಂಡ್ ಸ್ಟೀಲ್ ಫ್ಯಾಕ್ಟರಿಯ ಬಗ್ಗೆ ಮಾತನಾಡಿದ್ದಾರೆ. ಅಲ್ಲಿ ಕೂಲಿಗಾರರಿಗೆ ಕೊಡತಕ್ಕ ಕೂಲಿ ಕಡಮೆಯಾದರೂ ಅಲ್ಲಿ ಇತರೇ ಓವರ್ ಹೆಡ್ ಛಾರ್ಜುಗಳು ಬಹಳ ಜಾಸ್ತಿಯಾಗಿರುವುದರಿಂದ ಹೆಚ್ಚು ಲಾಭ ಗಳಿಸುವುದಕ್ಕಾಗುತ್ತಿಲ್ಲವೆಂದು ಶ್ರೀ ಅನ್‌ವಾರ್ ಅವರು ಹೇಳಿದರು. ಬಹುಶಃ ಅವರು ಆ ಕಾರ್ಖಾನೆಯ ಬಂಡವಾಳ 5 ಕೋಟಿ ಹಾಕಿದ್ದಾಗ ಏನು ಪರಿಸ್ಥಿತಿ ಇತ್ತೋ ಅದೇ ಪರಿಸ್ಥಿತಿ ಈಗಲೂ ಇದೆ ಎಂದು ಅವರು ಭಾವಿಸಿರುವಂತೆ ಕಾಣುತ್ತಿದೆ. ಆದರೆ ಈ ದಿವಸ ಅದಕ್ಕೆ ಹಾಕಿರತಕ್ಕ ಬಂಡವಾಳ 55 ಕೋಟಿ. ಆದ್ದರಿಂದ ಅವರ ವಾದಕ್ಕೆ ಇಂದು ಬಿಡವಿಲ್ಲ. ಆದರೆ ನಮಗೆ ಆ ಕಾರ್ಖಾನೆಯಿಂದ 1951–52 ರಿಂದ 1967–68ಕ್ಕೆ ಒಂದು ವರ್ಷ ಕೂಡ ನಷ್ಟವುಂಟಾಗಿಲ್ಲ ಎಂದು ಹೇಳುತ್ತಿದ್ದೇನೆ. 1967–68ರಲ್ಲಿ Expantion ಪ್ರಯುಕ್ತ ಹೆವಿ ಡಿಪ್ರಿಸಿಯೇಷನ್ ತೆಗೆಯಬೇಕಾಗಿತ್ತು. ಅಲ್ಲದೆ ಇಂಟರೆಸ್ಟ್ ಕೊಡಬೇಕಾಗಿತು. ಇನ್ನು ಸ್ಪೆಷಲ್ ಸ್ಟೀಲನ್ನು 77 ಸಾವಿರ ಟನ್ನುಗಳಷ್ಟು ಉತ್ಪನ್ನ ಮಾಡಬೇಕೆಂದಿದ್ದೇವೆ. ಆ ಟಾರ್ಗೆಟ್‌ಗೆ ಮುಟ್ಟಿದರೆ ಕಾರ್ಖಾನೆಗೆ ಲಾಭ ಬರುತ್ತರೆಂದು ಖಚಿತವಾಗಿ ಹೇಳುತ್ತೇನೆ.

6-30 P.M.

Sri ABDUL KHUDDUS ANWAR.—I challenge that Mill is not capable of producing 77,000 tons. Experts will give you the same opinion.

ಶ್ರೀ ಎಂ. ರಾಜಶೇಖರಮೂರ್ತಿ—ನೀವು ಛಾಲೆಂಜ್ ಮಾಡಬಹುದು. Expansion programme ಪ್ರಕಾರ ಮುಗಿದರೆ ಕಂಪೆನಿಯು 77 ಸಾವಿರ ಟನ್ನುಗಳಷ್ಟು ಸ್ಪೆಷಲ್ ಸ್ಟೀಲನ್ನು ಉತ್ಪನ್ನ ಮಾಡುವುದು ಸಾಧ್ಯವಾಗುತ್ತದೆ. 77 ಸಾವಿರ ಟನ್ನುಗಳ ಟಾರ್ಜೆಟ್ ಪೈಕಿ ಈ ವರ್ಷ 20 ಸಾವಿರ ಟನ್ನುಗಳಷ್ಟು ಸ್ಪೆಷಲ್ ಸ್ಟೀಲನ್ನು ಉತ್ಪತ್ತಿಮಾಡಲಾಗುತ್ತದೆ. 1969-70ಕ್ಕೆ ಇದು 40,000 ಟನ್ ಮುಟ್ಟಿ 1970-71ನೇ ಇಸವಿಯಲ್ಲಿ ನಮ್ಮ ಒಂದು ಯೋಜನೆಯ ಪ್ರಕಾರ ನಮ್ಮ ಟಾರ್ಜೆಟ್ಟನ್ನು ಮುಟ್ಟಲು ಪ್ರಯತ್ನಿಸುತ್ತೇವೆ.

ಶ್ರೀ ಎಸ್. ಶಿವಪ್ಪ.—ಆ ಇಮ್ಯಾಜಿನರಿ ಫಿಗರ್ಸ್ ಬೇಡ. ಅದಕ್ಕೆ ಬಂಡವಾಳ ಎಷ್ಟು ಕೋಟಿ ಹಾಕಿದ್ದೀರಿ ? ಅಲ್ಲಿ ಅಷ್ಟು ಲಾಭ ಬರುವುದಿಲ್ಲ.

ಶ್ರೀ ಎಚ್. ಸಿದ್ಧವೀರಪ್ಪ.—ಅಡಿಗೆ ಮಾಡುವವ ಒಬ್ಬ. ಹದ ಹಿಡಿಯುವವರು 9 ಜನರು.

ಶ್ರೀ ಬಿ. ಪಿ. ಗಂಗಾಧರ್.—1970-71ಕ್ಕೆ ಅವರು ಈ ಕಡೆಯಲ್ಲಿರುತ್ತಾರೆ.

ಶ್ರೀ ಎಂ. ರಾಜಶೇಖರಮೂರ್ತಿ.—1970-71ರ ಹೊತ್ತಿಗೆ ಕಾರ್ಖಾನೆಯ ಬಡಾವಣೆ ಮುಗಿದು ಟಾರ್ಜೆಟ್ ಪ್ರಕಾರ ಸ್ಪೆಷಲ್ ಸ್ಟೀಲ್ ತಯಾರು ಮಾಡಿದ ಬ್ರೇಕ್-ಈವನ್ ಪಾಯಿಂಟಿಗೆ ಹೋಗುತ್ತೇವೆ. ಅದುವರೆಗೆ ಮಾನ್ಯ ಸದಸ್ಯರು ತಾಳ್ಮೆಯಿಂದ ಇರಬೇಕು.

Sri ABUDUL KHUDDUS ANWAR.—You can manufacture carbon steel and magnet steel.

ಶ್ರೀ ಎಂ. ರಾಜಶೇಖರಮೂರ್ತಿ.—ಯಾವ ಸ್ಟೀಲ್ ಕಾರ್ಖಾನೆಯೂ ಪ್ರಾರಂಭವಾಗಿ 13-14 ವರ್ಷಗಳವರೆಗೂ ಲಾಭಗಳಿಸುವುದಿಲ್ಲ. ಭದ್ರಾವತಿ ಕಾರ್ಖಾನೆ 1923ರಲ್ಲಿ ಸ್ಥಾಪನೆ ಯಾದುದು. 1936ರ ವರೆಗೂ ಅದರಿಂದ ಒಂದು ಕಾಸೂ ಲಾಭ ಬರಲಿಲ್ಲ. ಹಿಂದೂಸ್ಥಾನ್ ಸ್ಟೀಲ್ ಕಂಪನಿಗೆ ಒಂದು ಸಾವಿರ ಕೋಟಿ ರೂಪಾಯಿಗಳನ್ನು ಇನ್‌ವೆಸ್ಟ್ ಮಾಡಿದ್ದಾರೆ. ಅದನ್ನು ಸ್ಥಾಪನೆಮಾಡಿ ಎಷ್ಟೋ ವರ್ಷಗಳಾದುವು. ಅದು ಇನ್ನೂ ಲಾಭದಾಯಕವಾಗಿ ಕೆಲಸ ಮಾಡುತ್ತಾ ಇಲ್ಲ ಆದರೆ ಈ ಕಾರ್ಖಾನೆಯ ಎಕ್ಸ್‌ಪ್ಯಾನ್‌ಶನ್ ಸ್ಕೀಮ್ಸ್ ಪ್ರಾರಂಭವಾದ ಕೇವಲ ಕೆಲವೇ ವರ್ಷಗಳಲ್ಲಿ ಆ ಟಾರ್ಜೆಟ್ ಮುಟ್ಟುತ್ತೇವೆ.

ಇನ್ನು ನಮ್ಮಲ್ಲಿ ಯಾರೋ ಬೂತ ಎಂಬುವರು ಇದ್ದಾರೆ. ಭೂತ ಇದ್ದಹಾಗೆ. Mr. Huth is a metallurgist of international repute. He has organised steel industry in Brazil at the request of Brazillian Government. He stayed there for 15 years. The Government of India secured his sevrices for the Rueıkela Steel Industry. After the expiry of the contract, we engaged his service and he is now working with us. He is a genius and is an asset to the Mysore Iron and Steel Works.

ಇನ್ನು ಐ.ಡಿ.ಸಿ. ಬಗ್ಗೆ ಕೆಲವು ಮಾನ್ಯ ಸದಸ್ಯರು ಹೇಳಿದರು. ದೊಡ್ಡ ಮನುಷ್ಯರು ಹೆಸರನ್ನು ಹೇಳಿದರು. ಅವರಿಗೂ, ಇವರಿಗೂ ಯಾವ ವಿಧವಾದ ಸಂಬಂಧವೂ ಇಲ್ಲ. ನಮ್ಮ ದೇಶದಲ್ಲಿ ಕನ್‌ಸಲ್‌ಟೆಂಟ್ಸ್ ಏನಿದ್ದಾರೆಯೋ ಅವರನ್ನು ಡೆವಲಪ್ ಮಾಡಬೇಕು, ಮತ್ತು ಅವರಿಗೆ ಸಾಕಷ್ಟು ಅವಕಾಶಗಳನ್ನು ಕೊಟ್ಟು ಬೆಳೆಸಬೇಕು. ದೆಹಲಿಯಲ್ಲಿ ಒಂದು ಮೀಟಿಂಗ್ ಆದಾಗ ಕೇಂದ್ರ ಸರ್ಕಾರದ ಮಂತ್ರಿಗಳಾದ ಮಾನ್ಯ ಶ್ರೀ ಫಕ್ರುದ್ದೀನ್ ಅಲಿ ಅಹಮದ್ ಅವರು ಮಾಡಿದ ಭಾಷಣವನ್ನು ನಾನು ಕೇಳಿದ್ದೆ. ಇಂಡಿಯಾ ದೇಶದಲ್ಲಿ ಕನ್‌ಸಲ್‌ಟೆಂಟ್ಸ್ ಡೆವಲಪ್ ಮಾಡಬೇಕು. ಆ ರೀತಿ ಡಿವಲಪ್ ಮಾಡಿದರೆ ಫಾರಿನ್ ಎಕ್ಸ್‌ಚೇಂಜ್‌ನ್ನು ಸೇವ್ ಮಾಡಬಹುದು. ಅದು ಇಲ್ಲದಿದ್ದರೆ ಫಾರಿನ್ ಎಕ್ಸ್‌ಚೇಂಜ್ ವೇಸ್ಟ್ ಆಗುತ್ತದೆ. ಕನ್‌ಸಲ್‌ಟೆಂಟ್ಸನ್ನು ಖಂಡಿತವಾಗಿ ಬೆಳಸಿಕೊಂಡು ಬರಬೇಕೆಂದು ಹೇಳಿದ್ದಾರೆ.

Sri H. SIDDAVEERAPPA.—Have you gone there? What is the work the IDC Consortium has done there ? What is the progress they have shown ? How in your opinion has it been doing any good service? I want the Hon. Minister to examine it from the interests of the State. We have nothing to do with personalities. There is wide complaint that

this IDC has been bagging huge commission without giving any return to the industry. That is the feeling.

ಶ್ರೀ ಎಂ. ರಾಜಶೇಖರಮೂರ್ತಿ.—ನಾನು ಅವರು ಮಾಡಿರತಕ್ಕ ಕೆಲಸಗಳನ್ನು ಕೂಲಂಕಷ ವಾಗಿ ಪರಿಶೀಲನೆ ಮಾಡಿದ್ದೇನೆ. ನಾನು ಆ ಕಂಪನಿಗೆ ಹೋಗಿದ್ದೇನೆ. ಅವರು ಏನೇನು ಕೆಲಸ ಗಳನ್ನು ಮಾಡಿದ್ದಾರೋ ಅವನ್ನು ನೋಡಿದ್ದೇನೆ. ನಾವು ಅವರಿಗೆ ಕೊಟ್ಟಿರುವುದು ಸೇಕಡ 2ಕ್ಕೆ ಜಾಸ್ತಿಯಾಗಿಲ್ಲ. ಬಾಕಿಯವರು ಜಾಸ್ತಿ ಕೊಟ್ಟಿದ್ದಾರೆ, ಇದು ಬಹಳ ಜಾಸ್ತಿ ಎಂದು ನಾನು ಹೇಳುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಮೊದಲಿನಿಂದ ಇರುವವರು ನಮ್ಮ ಇಂಜನಿಯರ್ಸ್ ಏನು ಮಾಡುತ್ತಿದ್ದಾರೆ ;

ಶ್ರೀ ಎಂ. ರಾಜಶೇಖರಮೂರ್ತಿ.—ನಾವು ಈಗ ಕನ್‌ಸಲ್‌ಟೆಂಟ್ಸನ್ನು ನೇಮಕ ಮಾಡದೇ ಇದ್ದರೆ, ಸ್ಪೆಷಲ್ ಇಂಜನಿಯರುಗಳನ್ನು ನೇಮಕ ಮಾಡಬೇಕಾದ ಪರಿಸ್ಥಿತಿ ಬರುತ್ತಾ ಇತ್ತು. ಅಲ್ಲದೆ ಅದಕ್ಕೆ ಪ್ರತ್ಯೇಕವಾಗಿ ಇತರ ಸಿಬ್ಬಂದಿಯನ್ನು ಸಹಾ ನೇಮಕಮಾಡಬೇಕಾಗುತ್ತಿತ್ತು. ಒಂದು ಸಾರಿ ಹಂಗಾಮಿಯಾಗಿ ಅವರನ್ನು ನೇಮಕಮಾಡಿದಮೇಲೆ ಅವರನ್ನು ಹೊರಗಡೆಗೆ ಕಳುಹಿಸುವುದಕ್ಕಾಗುವುದಿಲ್ಲ. ಖರ್ಚಿನ ದೃಷ್ಟಿಯಿಂದ ಬೇರೆ ಸಿಬ್ಬಂದಿಯನ್ನು ನೇಮಕ ಮಾಡುವುದ ಕ್ಕಿಂತ Consultantsನ್ನು ನೇಮಕ ಮಾಡುವುದು ಸೂಕ್ತವಾದದ್ದು.

ಶ್ರೀ ಎಚ್. ಸಿದ್ಧವೀರಪ್ಪ.—ನಮ್ಮ ಸರಕಾರದ ದುಡ್ಡು. ನಮ್ಮ ದುಡ್ಡು ಕೊಟ್ಟು ಬಂಡ ವಾಳವಿಲ್ಲದ ಬಡಾಯಿ ಮಾಡುವ ಕೆಲಸ ಚೆನ್ನಾಗಿರುತ್ತದೆಂದು ಹೇಳುತ್ತಾರೆ !

ಶ್ರೀ ಎಂ. ರಾಜಶೇಖರಮೂರ್ತಿ.—ಕೆಲವು ಸದಸ್ಯರು IBCON ವಿಚಾರ ಪ್ರಸ್ತಾಪ ಮಾಡಿ ದ್ದಾರೆ. ಇವರ ಕೆಲಸ ವರ್ಕ್‌ಲೋಡ್ ಫಿಕ್ಸ್‌ಮಾಡುವುದು, ಪ್ರೊಡಕ್ಟಿವಿಟಿ ಜಾಸ್ತಿ ಮಾಡುವುದು, ಇವರು ಒಂದು ಸ್ಕೀಮನ್ನು ಕೊಟ್ಟಿದ್ದಾರೆ. ಇದನ್ನು ಜಾರಿಗೆ ಕೊಟ್ಟಿದ್ದೇವೆ—ಇದರಿಂದ ಫ್ಯಾಕ್ಟರಿಗೆ ಬಹಳ ಹಣ ಉಳಿತಾಯವಾಗಿದೆ. 1960-61ರಲ್ಲಿ 8,540 ಜನ ವರ್ಕರ್ಸ್ ಇದ್ದರು. ಪ್ರೊಡಕ್ಷನ್ 4 ಕೋಟಿ 70 ಲಕ್ಷ ರೂಪಾಯಿಗಳಷ್ಟು. IBCON reportನ ಶಿಫಾರಸನ್ನು ಜಾರಿಗೆ ಕೊಟ್ಟಿದ್ದರ ಫಲವಾಗಿ ಕೇವಲ 9,322 ಕೂಲಿಗಾರರು 1967-68ರಲ್ಲಿ 10 ಕೋಟಿ 30 ಲಕ್ಷ ರೂಪಾಯಿಗಳಷ್ಟು production ಕೊಟ್ಟಿದ್ದಾರೆ. ಸ್ವಲ್ಪ ಹೆಚ್ಚು ಕಡಿಮೆ ವರ್ಕರ್ಸ್ ಮಾತ್ರ ಮೊದಲಿದ್ದಷ್ಟೇ ಇದ್ದಾರೆ. ಆದರೆ ಪ್ರೊಡಕ್ಷನ್ ಜಾಸ್ತಿ ಇದೆ. IBCON ಶಿಫಾರಸ್‌ನಿಂದ ಕಂಪೆನಿಗೆ ಅನುಕೂಲವಿಲ್ಲ ಎಂಬ ಮಾತು ಸರಿಯಲ್ಲ.

ಶ್ರೀ ಅಬ್ದುಲ್ ಖುದೂಸ್ ಅನ್ವಾರ್.—ಇದು ಪುಸ್ತಕದ ಬದನೇಕಾಯಿ ಇದ್ದಹಾಗೆ ಇದೆ ಅಲ್ಲ ನಮ್ಮ ಜನ ಕೆಲಸಮಾಡುತ್ತಾರೆ. ಆದ್ದರಿಂದ ಅದು ಅಭಿವೃದ್ಧಿಯಾಗುತ್ತಿದೆ. It is not correct to say that it is on account of IBCON. I will give you instances of some departments. Production in 1966 went down by 2000 tons, on account of the implementation of their suggestion. 1966ರಲ್ಲಿ ಪ್ರೊಡಕ್ಷನ್ ಕೆಡಿಸಿದ್ದಾರೆ ಮತ್ತು ಅವರು ಹಾಳುಮಾಡಿದ್ದಾರೆ.

Sri M. S. KRISHNAN.—Are you aware that IBCON submitted some reports to Central Government ? Those reports were scrapped because they could not be implemented. The method followed by IBCON is unilaterally to fix it and not by consultation. ಕನ್‌ಸಲ್‌ಟೆಂಟ್ಸ್ ಅವರು ಏನು ವರದಿಯನ್ನು ಕೊಟ್ಟಿದ್ದಾರೋ ಅದನ್ನು ಇನ್ನೂ ಇಂಪ್ಲಿಮೆಂಟ್ ಮಾಡಿಲ್ಲ.

ಶ್ರೀ ಎಂ. ರಾಜಶೇಖರಮೂರ್ತಿ.—ನಮ್ಮ ಫ್ಯಾಕ್ಟರಿಯೊಳಗೆ ಕೊಟ್ಟ ಅಡ್ವೈಸ್ ಏನಿದೆಯೋ ಅದನ್ನು ಇಂಪ್ಲಿಮೆಂಟ್ ಮಾಡಿದ್ದರಿಂದ ವರ್ಷ ಒಂದಕ್ಕೆ 14,50,311 ರೂಪಾಯಿಗಳಷ್ಟು ಉಳಿತಾಯ ವಾಗಿದೆ. ಖರ್ಚುಮಾಡಿರುವುದು 7,20,918 ರೂಪಾಯಿಗಳು. We are going to terminate their services. We are not continuing them.

Sri S. SIVAPPA.—It has become a permanent feature,

Sri M. S. KRISHNAN.—Will you consider taking leaders of workers into confidence in fixing the workloads? If this is done all these losses of 7 lakhs and 10 lakhs will vanish.

Sri M. RAJASHEKHARA MURTHY.—We are shortly terminating their services because the work is over.

ಶ್ರೀ ಸಿದ್ದಯ್ಯನವರು ಮತ್ತು ಇತರರು ಕೈಗಾರಿಕೆಯ ನೀತಿಯ ಬಗ್ಗೆ ಪ್ರಸ್ತಾಪ ಮಾಡಿದರು. ಇದು ಸಮಾಜವಾದೀ ಸಮಾಜ, ಆದ್ದರಿಂದ ಸರ್ಕಾರದ ವತಿಯಲ್ಲಿ ಏನು ಕೈಗಾರಿಕೆಗಳು ಇವೆ, ಅವನ್ನು ಖಾಸಗಿಯವರಿಗೆ ಕೊಡಕೂಡದು ಎಂದು ಹೇಳಿದ್ದಾರೆ. ಅವನ್ನು ಕೊಡುತ್ತೇವೆಂದು ನಾವು ಎಲ್ಲೂ ಹೇಳಿಲ್ಲ. If it is not possible to improve the industries ಆವಾಗ ಪ್ರೈವೇಟ್ ಏಜೆನ್ಸಿಯವರ ಅಸೋಸಿಯೇಶನ್ ಮಾಡತಕ್ಕ ಸಂದರ್ಭ ಬರಬಹುದು ಎಂದು ಹೇಳಿದ್ದೇವೆ. It is not a decision.

ಶ್ರೀ ಡಿ. ಎಂ. ಸಿದ್ದಯ್ಯ.—ಮಾನ್ಯ ಅರ್ಥಿಕ ಮಂತ್ರಿಯವರು, ಕಳೆದ ಎರಡು ವರ್ಷಗಳಿಂದ ಸುಧಾರಣೆ ಮಾಡಲು ಬಹಳ ಪ್ರಯತ್ನ ಮಾಡಿದ್ದೇವೆ ಎಂದು ಹೇಳಿದ್ದಾರೆ. ಸುಧಾರಣೆ ಮಾಡುವುದಕ್ಕೆ ಎರಡು ವರ್ಷಗಳಿಂದ ಮಾಡಿದ ಅನುಭವದಿಂದ ತಾವು ನಿರಾಶರಾಗಿ, ಪ್ರೈವೇಟ್ ಏಜೆನ್ಸಿಗೆ ಕೊಡುವುದಕ್ಕೆ ಹೊರಟಿದ್ದಾರೆ ಎಂದು ಅರ್ಥವಾಗುತ್ತದೆ.

Sri M. RAJASHEKHARA MURTHY.—"If it is found that any undertaking cannot be made to run on profit, Government will not hesitate to come to some arrangement with private entrepreneurs in the interest of industry and public finances." It is a qualified statement. ಈಗ ಕೈಗಾರಿಕೆಯ ನೀತಿಯಲ್ಲಿ ಸರ್ಕಾರದವರು ಪ್ರತ್ಯೇಕವಾದ ನೀತಿಯನ್ನು ಮಾಡುವುದಕ್ಕಾಗುವುದಿಲ್ಲ. ಯಾವ ಪ್ರಾಂತ್ಯ ಸರ್ಕಾರದವರು ಇಷ್ಟ ಬಂದ ಹಾಗೆ ಮಾಡುವುದಕ್ಕಾಗುವುದಿಲ್ಲ. ಇದಕ್ಕೆ ಪಾರ್ಲಿಮೆಂಟಿನಲ್ಲಿ ಒಂದು ರಿಸೊಲ್ಯೂಶನ್ ಇದೆ. 1956ರಲ್ಲಿ ಒಂದು ರಿಸೊಲ್ಯೂಶನ್ ಮಾಡಿದ್ದಾರೆ. ಅದರಲ್ಲಿ ಶೆಡ್ಯೂಲ್ (ಎ) ಶೆಡ್ಯೂಲ್ (ಬಿ) ಎಂದು ಮಾಡಿದ್ದಾರೆ. ಶೆಡ್ಯೂಲ್ (ಎ) ಯಲ್ಲಿ ಯಾವ್ಯಾವ ಕೈಗಾರಿಕೆಗಳನ್ನು ಸರ್ಕಾರದವರು ನಡೆಸಬೇಕು ಎಂದು ಇದೆ. ಶೆಡ್ಯೂಲ್ (ಬಿ) ಯಲ್ಲಿ ಸರ್ಕಾರ ಮತ್ತು ಖಾಸಗಿಯವರು ಇಬ್ಬರೂ ನಡೆಸತಕ್ಕಂತದ್ದು ಇದೆ. ಉಳಿದ ಎಲ್ಲಾ ಕೈಗಾರಿಕೆಗಳನ್ನು ಖಾಸಗೀಯವರು ನಡೆಸಬೇಕೆಂದು ರಿಸೊಲ್ಯೂಶನಿನಲ್ಲಿ ಹೇಳಿದ್ದಾರೆ. ನಾವು ಈ ಪಾಲಿಸಿ ಏನಿದೆ, ಅದರ ವಿರುದ್ಧವಾಗಿ ಹೋಗಬಾರದು. ಪಾಲಿಸಿಗೆ ಅನುಗುಣವಾಗಿರಬೇಕು, ಮತ್ತು ಸರ್ಕಾರಕ್ಕೆ ನಷ್ಟವಾಗಬಾರದು. 56ರ ರೆಸೊಲ್ಯೂಶನ್ ಏನಿದೆ, ಅದಕ್ಕನುಗುಣವಾಗಿ, ವಿರೋಧವಿಲ್ಲದಂತೆ, ಖಾಸಗೀಯವರ ಸಹಾಯವನ್ನು ತೆಗೆದುಕೊಳ್ಳುವುದಕ್ಕೆ ಸಿದ್ಧವಾಗಿದ್ದೇವೆ.

Sri M. S. KRISHNAN.—Have you adopted that policy? You are giving up that policy?

Sri H. SIDDAVEERAPPA.—There are only two alternatives. You have to implement what you have stated; if you cannot, you must resign. If the policy fails, it is a failure of the Government. You cannot have the cake and eat it too.

Sri M. RAJASEKHARA MURTHY.—It is only an indication of......

Sri H. SIDDAVEERAPPA.—It is the statement of the Finance Minister who is having the entire finances of the State. He has to husband it. Now the Hon. Minister is striking a discordant note. That means there is no harmony.

Sri M. RAJASEKHARA MURTHY.—There is perfect harmony. I have not stated anything different from what he has stated. I am only explaining the implications of it. ಸರ್ಕಾರಕ್ಕೆ ಧೈರ್ಯ ಇದೆ, ಶಕ್ತಿ ಇದೆ, ಆ ತತ್ವದ ಮೇಲೆ ನಂಬಿಕೆ ಇದೆ. ಆ ತತ್ವ 1956ನೇ ಇಸವಿಯ ರಿಸೊಲ್ಯೂಷನಿನಲ್ಲಿ ಅಡಕವಾಗಿದೆ. ಕೈಗಾರಿಕೆಯ ನೀತಿ ಅದರಲ್ಲಿ ಇದೆ. ಅದಕ್ಕನುಗುಣವಾಗಿ ನಾವು ಹೋಗುತ್ತೇವೆ.

ಶ್ರೀ ಎಂ. ಎಸ್. ಕೃಷ್ಣನ್.—ನಿಮ್ಮ ಈಗಿನ ನೀತಿ ಅದಕ್ಕೆ ವಿರೋಧವಾಗಿರುವುದರಿಂದ ಇವತ್ತಿನ ದಿವಸ ರಾಜಿನಾಮೆ ಕೊಡುತ್ತೀರಾ ?

ಶ್ರೀ ಎಂ. ರಾಜಶೇಖರಮೂರ್ತಿ.—ನಮ್ಮ ನೀತಿ ಅದಕ್ಕೆ ವಿರೋಧವಾಗಿಲ್ಲ. ಆರ್ಥಿಕ ಮಂತ್ರಿಗಳು ಹೇಳಿದ್ದು ತೀರ್ಮಾನವಲ್ಲ. ಅದು ಒಂದು ಇಂಡಿಕೇಶನ್ ಅಷ್ಟೆ. ಸರ್ಕಾರ ತೀರ್ಮಾನ ತೆಗೆದುಕೊಂಡಿದ್ದ ಪಕ್ಷದಲ್ಲಿ ಅದು ಇಲ್ಲಿ ಶಾಸನ ಸಭೆಯಲ್ಲಿ ಬರುತ್ತಾ ಇರಲಿಲ್ಲ. ಅವರ ಹೇಳಿಕೆಯನ್ನು ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಅರ್ಥಮಾಡಿಕೊಂಡಿದ್ದಾರೆ. ಕೆಲವರು ಯಾರೋ ದೊಡ್ಡವರು ಬರುತ್ತಾರೆ, ಅವರಿಗೆ ಕೊಡಬೇಕೆಂದು ಹೇಳುತ್ತಾರೆ, ಕೆಲವರು ಏನೋ ನಷ್ಟವಾಗಿದೆ ಹಾಗೆ ಕೊಡುತ್ತಿದ್ದಾರೆಂದು ಹೇಳುತ್ತಾರೆ. ಹೀಗೆ ನಾನಾ ರೀತಿಯಲ್ಲಿ ಯೋಚನೆ ಮಾಡುತ್ತಿದ್ದಾರೆ. ನಾವು ಕೈಗಾರಿಕೆಯ ನೀತಿ ಏನಿದೆ, 1956ರ ರಿಸೊಲ್ಯೂಶನ್‌ನಲ್ಲಿ, ಅದಕ್ಕನುಗುಣವಾಗಿ ಹೋಗುತ್ತಿದ್ದೇವೆ. ಶೆಡ್ಯೂಲ್ (ಎ) ಯಲ್ಲಿ ಇರತಕ್ಕ ಯಾವ ಕೈಗಾರಿಕೆಯನ್ನು ನಾವು ನಡೆಸುತ್ತೇವೆ, ಅದನ್ನು ಯಾರಿಗೂ ಕೊಡುವುದಕ್ಕೆ ಹೋಗುವುದಿಲ್ಲ.

Sri M. MALLIKARJUNASWAMY (Malavalli).—Are we to understand from the statement of the Finance Minister regarding the Industrial policy pursued by the Government of Mysore that he is expressing the feeling of a physiocrat ?

ಶ್ರೀ ಎಂ. ರಾಜಶೇಖರಮೂರ್ತಿ.—ಫಿಸಿಯೋಕ್ರೇಟ್, ಬ್ಯೂರೋಕ್ರೇಟ್ Technocrat, ಎಂಬ controversy ಬೇಡ. ಇದರಿಂದಲೇ ಈ ಅಧೋಗತಿಗೆ ಬಂದಿರುವುದು. ಇದಕ್ಕೆ ಅಪಾರ್ಥ ಕಲ್ಪನೆ ಮಾಡುವುದಾಗಲೀ ರಾಜಕೀಯ ಬೆರಸುವುದಾಗಲೀ ಬೇಡ.

Sri M. S. KRISHNAN.—The point is, schedule A speaks only of industries of the State. What has happened here is, even the industries in the State sector have been transferred.

ಶ್ರೀ ಎಂ. ರಾಜಶೇಖರಮೂರ್ತಿ.—ಇನ್ನು ಈ ಎನ್.ಜಿ.ಇ.ಎಫ್.ನ ಬಗ್ಗೆ ಕೆಲವರು ಮಾತನಾಡಿದ್ದಾರೆ. ಇದು ಹೊಸತಾಗಿ ಪ್ರಾರಂಭ ಮಾಡಿರತಕ್ಕ ಕಾರ್ಖಾನೆ. ಇದರಲ್ಲಿ ಸುಮಾರು 8 ಕೋಟಿ 30 ಲಕ್ಷ ರೂಪಾಯಿ ಬಂಡವಾಳ ಹಾಕಿದ್ದೇವೆ. ಸರ್ಕಾರಕ್ಕೆ ಆಗಲೇ, ಇಂಟರೆಸ್ಟ್ ರೂಪದಲ್ಲಿ 86 ಲಕ್ಷ 83 ಸಾವಿರ ರೂಪಾಯಿ ಕೊಟ್ಟಿದ್ದಾರೆ. 7 ಪರ್ಸೆಂಟ್ ಪ್ರಕಾರ ಬಡ್ಡಿ ಕೊಡುತ್ತಿದ್ದಾರೆ. ಈಗ 1967–68 ರಲ್ಲಿ ಉತ್ಪಾದನೆ 4 ಕೋಟಿ 58 ಲಕ್ಷ ಆಗಿದೆ. 1968–69 ರಲ್ಲಿ ಸುಮಾರು 7 ಕೋಟಿ ರೂಪಾಯಿಯಷ್ಟು ಉತ್ಪಾದನೆಯಾಗಿದೆ. 1969–70 ರಲ್ಲಿ 9 ಕೋಟಿ ರೂಪಾಯಿ ಉತ್ಪಾದನೆಯಾಗುತ್ತದೆ. ಉತ್ಪಾದನೆ ಜಾಸ್ತಿ ಮಾಡುವುದರ ಜೊತೆಗೆ ಹೊರಗಡೆ ಕೂಡ ರಫ್ತು ಮಾಡುತ್ತಿದ್ದೇವೆ. ಸುಮಾರು 30–40 ಲಕ್ಷ ರೂಪಾಯಿಯ ಸಾಮಾನುಗಳನ್ನು ರಫ್ತು ಮಾಡಿದ್ದಾರೆ. ಮುಂದಿನ ವರ್ಷ 60 ಲಕ್ಷ ರೂಪಾಯಿಯ ಸಾಮಾನು ರಫ್ತು ಮಾಡಬಹುದು. ಇದು ಹೊಸದಾಗಿ ಸರ್ಕಾರಿ ಕ್ಷೇತ್ರದಲ್ಲಿ ಸ್ಥಾಪನೆ ಮಾಡಿದಂತಹ ಒಳ್ಳೆಯ ಕಾರ್ಖಾನೆ. ಯಾವುದೇ ಕೈಗಾರಿಕೆಯನ್ನು ಸ್ಥಾಪನೆ ಮಾಡಿದರೆ ಪ್ರಾರಂಭದಲ್ಲಿ ಅದು ಹೆಚ್ಚು ಲಾಭ ಸಂಪಾದನೆ ಮಾಡುವುದಕ್ಕಾಗುವುದಿಲ್ಲ. ಅದು ಅಭಿವೃದ್ಧಿಯಾಗಬೇಕಾದರೆ ಕೆಲವು ವರ್ಷ ಬೇಕಾಗುತ್ತದೆ. 4–5 ವರ್ಷ ಆದಮೇಲೆ ಅದು ಲಾಭವನ್ನು ಸಂಪಾದನೆ ಮಾಡುತ್ತದೆ. ಒಳ್ಳೆಯ ಸಲಹೆಗಳನ್ನು ಮಾನ್ಯ ಸದಸ್ಯರು ಕೊಟ್ಟಿದ್ದಾರೆ, ಅದನ್ನೆಲ್ಲಾ ಗಮನಕ್ಕೆ ತೆಗೆದುಕೊಂಡು ಸಾಧ್ಯವಾದಷ್ಟು ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡುತ್ತೇವೆ.

Sri C. K. RAJAIAH SHETTY.—May I know what happened to the proposal of starting a Steel Plant at Hospet, starting of a fertiliser plant at Mangalore and Small car project, which the ex-Chief Minister had assured ? What happened to all these things ?

ಶ್ರೀ ಎಂ. ರಾಜಶೇಖರಮೂರ್ತಿ.—5 ನೇ ಉಕ್ಕಿನ ಕಾರ್ಖಾನೆಯ ಸ್ಥಾಪನೆಯ ಬಗ್ಗೆ ಬಹಳ ದಿವಸಗಳಿಂದ ಎಜಿಟೇಷನ್ ಇದೆ. ಮದ್ರಾಸಿನವರು ನಮಗೆ ಬೇಕು ಎಂದು ಹೇಳುತ್ತಿದ್ದಾರೆ. ಆಂಧ್ರದವರು ನಮಗೆ ಬೇಕು ಎಂದು ಹೇಳುತ್ತಿದ್ದಾರೆ. 5 ನೇ ಉಕ್ಕಿನ ಕಾರ್ಖಾನೆಯನ್ನು ರಾಜ್ಯದಲ್ಲಿ ಸ್ಥಾಪಿಸುವ ಸಂಬಂಧವಲ್ಲಿ ತಜ್ಞರಿಂದ ವರದಿಯನ್ನು ತರಿಸಿಕೊಂಡು ಅದನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದೇವೆ. ಕೇಂದ್ರ ಸರ್ಕಾರದವರು ಈ ಸ್ಟೀಲ್ ಪ್ಲಾಂಟ್ ಯೋಜನೆಯನ್ನು ನಾಲ್ಕನೆ ಪಂಚವಾರ್ಷಿಕ ಯೋಜನೆಯಲ್ಲಿ ತೆಗೆದುಕೊಳ್ಳುವುದಕ್ಕಾಗುವುದಿಲ್ಲ ಎಂದು ಹೇಳುತ್ತಿದ್ದಾರೆ. ಅದು 5ನೇ ಯೋಜನೆಯಲ್ಲಿ ಬಂದರೂ ಬರಬಹುದು. ಕೇಂದ್ರ ಸರ್ಕಾರ ಉಕ್ಕಿನ ಕಾರ್ಖಾನೆ ಬಗ್ಗೆ ಬಹಳ ಕಾಷಸ್ ಆಗಿ ಹೋಗಬೇಕು ಎನ್ನುವ ಮನೋಭಾವನೆಯನ್ನು ತಾಳಿದ್ದಾರೆ. ಹಾಗೇನಾದರೂ ಉಕ್ಕಿನ ಕಾರ್ಖಾನೆ ಸ್ಥಾಪನೆ ಮಾಡುವ ಸನ್ನಿವೇಶ ಬಂದರೆ ಅದು Hospet ಹತ್ತಿರ ಆಗಬೇಕೆಂದು ಕೇಂದ್ರಕ್ಕೆ ಒತ್ತಾಯಪಡಿಸುತ್ತೇನೆ.

ಶ್ರೀ ಬಿ. ಗಂಗಣ್ಣ (ಕಳ್ಳಂಬೆಳ್ಳ).—ಸ್ವಾಮಿ (ಎ) ಮತ್ತು (ಬಿ) ಯಲ್ಲಿ ಹೇಳಿರುವ ತತ್ವದ ಪ್ರಕಾರ ಸರ್ಕಾರದ ಕೈಗಾರಿಕೆಗಳನ್ನು ಅಭಿವೃದ್ಧಿ ಮಾಡಬೇಕೆಂದು ಹೇಳಿದ್ದೀರಿ. ಆ ಪ್ರಕಾರ ಈಗ ಗ್ರಾಮಾಂತರ ಪ್ರದೇಶಗಳಲ್ಲಿ ಎಷ್ಟು ಪರ್ಸೆಂಟ್ ಕೈಗಾರಿಕೆ ಡೆವಲಪ್ ಆಗಿವೆ, ಮತ್ತು ಎಷ್ಟು ಪರ್ಸೆಂಟ್ ಡೆವಲಪ್ ಮಾಡಬೇಕೆಂದಿದ್ದೀರಿ ?

ಶ್ರೀ ಎಂ. ರಾಜಶೇಖರಮೂರ್ತಿ.—ಅದಕ್ಕೆ ಮಾನ್ಯ ಉಪಮಂತ್ರಿಗಳು ಉತ್ತರವನ್ನು ಹೇಳುತ್ತಾರೆ.

ಇನ್ನು ಮಂಗಳೂರಿನಲ್ಲಿ ಫರ್ಟಿಲೈಜರ್ಸ್ ಫ್ಯಾಕ್ಟರಿಯು ಬಹಳ ವರ್ಷಗಳಿಂದ ಆಗಬೇಕೆಂದು ನಾವು ಕೇಳುತ್ತಿದ್ದೆವು. ಈ ಬಗ್ಗೆ ಅಮೇರಿಕಾದವರ ಜೊತೆಯಲ್ಲಿ ಕೊಲಾಬರೇಷನ್ ಮಾಡಿಕೊಳ್ಳಲಾಗಿತ್ತು. ಆದರೆ ಮಂಗಳೂರಿನ ಪೋರ್ಟ್ ರಚನೆ ಮತ್ತು ಪೋರ್ಟ್ ಡೆವಲಪ್‌ಮೆಂಟ್ ನಿಧಾನವಾದ್ದರಿಂದ ಈ ಪ್ರಾಜೆಕ್ಟನ್ನು ಇಂಪ್ಲಿಮೆಂಟ್ ಮಾಡುವುದಕ್ಕಾಗಲಿಲ್ಲ, ಅಮೇರಿಕಾದವರ ಕೊಲಾಬರೇಷನ್ ಬಿಟ್ಟುಬಿಡಬೇಕಾಗಿ ಬಂತು. ನಂತರ ಈ ಪ್ರಾಜೆಕ್ಟನ್ನು 2 ಭಾಗ ಮಾಡಬೇಕೆಂದು ಯೋಚನೆ ಮಾಡಿದ್ದೇವೆ. ಮೊದಲನೇ ಹಂತದಲ್ಲಿ ಪೋರ್ಟಿನ ಅಗತ್ಯವೇ ಇಲ್ಲದಂತೆ 40 crores ಪ್ರಾಜೆಕ್ಟ್ ಇಂಪ್ಲಿಮೆಂಟ್ ಮಾಡತಕ್ಕದ್ದು, ಅಮೋನಿಯಾ, ಯೂರಿಯವನ್ನು ಪ್ರೊಡ್ಯೂಸ್ ಮಾಡತಕ್ಕದ್ದು ಈ ಹಂತವಲ್ಲಿ ನಡೆಯುತ್ತದೆ. ಎರಡನೇ ಹಂತದಲ್ಲಿ 25 ಕೋಟಿ ರೂಪಾಯಿಗಳ ಫಾಸ್ಫೇಟ್ ಗೊಬ್ಬರಗಳ ಪ್ರೊಡ್ಯೂಸ್ ಮಾಡತಕ್ಕದ್ದು ನಡೆಯುತ್ತದೆ. ಈ ಯೋಜನೆಗೆ ಜಪಾನಿನ ನೆರವು ಸಿಕ್ಕಲಿಲ್ಲ. ಅದಕ್ಕಾಗಿ ಇಂಗ್ಲೆಂಡಿನ ಹಂಫ್ರೆ ಮತ್ತು ಗ್ಲಾಸ್ಗೋ ಹಾಗೂ ಹಾಲೆಂಡಿನ ಸ್ಟೆಮಿ ಕಾರ್ಬನ ಸಂಸ್ಥೆಯವರು ಈ ಯೋಜನೆಗೆ ನೆರವು ನೀಡಲು ಪ್ರಿಲಿಮಿನರಿ ಅಗ್ರಿಮೆಂಟಿನ ಬಗ್ಗೆ ಕೇಂದ್ರ ಸರ್ಕಾರದ ಒಪ್ಪಿಗೆಯ ಟೆಲೆಕ್ಸ್ ಸಂದೇಶ ನಿನ್ನೆ ದಿವಸ ನಮಗೆ ಬಂದಿದೆ. ಅದು ಈ ರೀತಿ ಇದೆ. The Cabinet Sub-Committee has cleared the Project, and approval is given both for the terms and conditions and the collaboration agreement, and also for the amendment of the licence. It means splitting the project into two stages, whereby the first stage contains only the ammonia urea project and the second stage, the Phosphate Fertilizer Project. ಎರಡು ಮುಖ್ಯವಾದ ಅದಿರು ಪ್ರಾಜೆಕ್ಟ್‌ಗಳಿಗೆ ಕೇಂದ್ರ ಸರ್ಕಾರದವರು ಕ್ಲಿಯರೆನ್ಸ್ ಕೊಟ್ಟಿದ್ದಾರೆ. ಅದರಲ್ಲಿ 65 ಕೋಟಿ ರೂಪಾಯಿಗಳ ಕುದರೆಮುಖದ pilot plant ಯೋಜನೆ ಒಂದು. ಇನ್ನೊಂದು 26 ಕೋಟಿ ರೂಪಾಯಿಗಳ ದೋಣಿಮಲೈ ಯೋಜನೆ. ಈ ವರ್ಷ ಸುಮಾರು 10–12 ಕಂಪೆನಿಗಳು ಪ್ರೊಡಕ್ಷನ್ ಸ್ಟಾರ್ಟ್ ಮಾಡಿವೆ. 15 ಹೊಸ ಯೋಜನೆಗಳಿಗೆ ಏಪ್ರಿಲ್ ಒಂದನೇ ತಾರೀಖಿನಿಂದ ಈವರೆವಿಗೆ ಕೇಂದ್ರ ಸರ್ಕಾರದವರು ಲೈಸನ್ಸ್ ಕೊಟ್ಟಿದ್ದಾರೆ. ಈ ಸಂಬಂಧದಲ್ಲಿ ಇನ್ನೂ 47 ಅಪ್ಲಿಕೇಷನ್‌ಗಳು ಕೇಂದ್ರ ಸರ್ಕಾರದಲ್ಲಿ ಪೆಂಡಿಂಗ್‌ನಲ್ಲಿವೆ. ಅವುಗಳಿಗೂ ಸಹ ಒತ್ತಾಯ ಮಾಡಿ ಆದಷ್ಟು ಜಾಗ್ರತೆ ಲೈಸನ್ಸ್ ಪಡೆಯುವುದಕ್ಕೆ ನಾವು ಪ್ರಯತ್ನ ಮಾಡುತ್ತಿದ್ದೇವೆ.

Sri H. SIDDAVEERAPPA.—Of course, the Hon. Minister has given a rosy picture about industries, about which I do not want to enter into arguments. I want clarification with regard to these private industrialists whom the Government are trying to invite them to come to

Mysore. Have they got any policy or are they allowing all and sundry who want to come to Mysore, or are they trying to have any screening about them? From what we see, there is lot of controversy about some private industrialists. Even in the Lok Sabha we have been seeing lot of discussion about them. For instance, they can take the Birla Group of concerns. I would like to know whether there is any policy this Government would like to have in trying to invite these private industrialists into Mysore because in our extreme anxiety to industrialise, we should not try to bargain for some trouble. I hope the Hon. Mimister will appreciate the purpose with which I am putting the questien and give a reply.

ಶ್ರೀ ಎಂ. ರಾಜಶೇಖರಮೂರ್ತಿ.—ಒಂದು ಕಡೆ ಇಂಡಸ್ಟ್ರಿ ಬರಬೇಕು ಎಂದು ಹೇಳುತ್ತಾರೆ. ಇನ್ನೊಂದು ಕಡೆ ಇಂಥವರಿಗೇ encouragement ಕೊಡಕೂಡದು, ಇಂಥವರಿಗೆ ಎನ್‌ಕರೇಜ್‌ಮೆಂಟ್ ಮಾಡಬೇಕೆಂದು ಹೇಳುತ್ತಾರೆ. ಇದು ಬಹಳ ಕಷ್ಟವಾಗುತ್ತದೆ. ನಮ್ಮ ರಾಜ್ಯಕ್ಕೆ ಕೈಗಾರಿಕೆಗಳು ಬಂತಕ್ಕ ಕಾಲದಲ್ಲಿ ಯಾವ ತರದ ಮಾನಾಪಲಿ ಕ್ರಿಯೇಟ್ ಮಾಡಬಾರದು. ಈ ಬಗ್ಗೆ ನಿರ್ದಿಷ್ಟವಾಗಿ ತೀರ್ಮಾನ ತೆಗೆದುಕೊಳ್ಳುವಾಗ ಕೇಂದ್ರ ಸರ್ಕಾರದವರ ಸೂಚನೆ ಹಾಗೂ ನಮ್ಮ ರಾಜ್ಯಕ್ಕೆ ಸಂಬಂಧಪಟ್ಟ ಕೆಲವು ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ. ಬೇರೆ ಪ್ರಾಂತ್ಯದವರು ನಮ್ಮ ರಾಜ್ಯದಲ್ಲಿ ಕೈಗಾರಿಕೆಯನ್ನು ಸ್ಥಾಪನೆ ಮಾಡುವಾಗ ನಮ್ಮ ರಾಜ್ಯದ ಎಂಪ್ಲಾಯಿಗಳನ್ನು ನೇಮಕ ಮಾಡಿಕೊಳ್ಳುವುದಕ್ಕೆ ಸ್ವಲ್ಪ ಹೆಚ್ಚಿನ ಪ್ರಾಶಸ್ತ್ಯ ಕೊಡಬೇಕು, ಕೈಗಾರಿಕೆ ಚೆನ್ನಾಗಿ ಬೆಳೆಯಬೇಕು, ಜನಗಳಿಗೆ ಕೂಲಿ ಸಿಕ್ಕಬೇಕು, ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಯಾರಿಗೆ ಎನ್‌ಕರೇಜ್‌ಮೆಂಟ್ ಕೊಡಬೇಕು, ಯಾರಿಗೆ ಎನ್‌ಕರೇಜ್‌ಮೆಂಟ್ ಕೊಡಬಾರದು ಎಂಬುದನ್ನು ಪರಿಶೀಲನೆ ಮಾಡಿ ಇಂಡಿವಿಜುಯುಲ್ ಕೇಸ್ merit ಪ್ರಕಾರ ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ. ಈ ಇಲಾಖೆಗೆ ಸಂಬಂಧಪಟ್ಟ ಹಾಗೆ ಮಾನ್ಯ ಸದಸ್ಯರು ಕೊಟ್ಟಂಥಾ ಸಲಹೆಗಳಿಗಾಗಿ ನಾನು ಅವರನ್ನು ವಂದಿಸುತ್ತೇನೆ. ಇಷ್ಟು ಹೇಳಿ ನನ್ನ ಇಲಾಖೆಗೆ ಸಂಬಂಧಪಟ್ಟ ಬೇಡಿಕೆಗಳಿಗೆ ಮಾನ್ಯ ಸದಸ್ಯರು ಒಮ್ಮತದ ಒಪ್ಪಿಗೆಯನ್ನು ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಂಡು ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎ. ಪಿ. ಅಪ್ಪಣ್ಣ (ಕೈಗಾರಿಕಾ ಶಾಖೆಯ ಉಪಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಇವೊತ್ತಿನದಿವಸ ಈ ಚರ್ಚೆಯಲ್ಲಿ ಅತ್ಯಧಿಕವಾಗಿ ಮಾತನಾಡಿದಂತಹ ಮಾನ್ಯ ಸದಸ್ಯರು ತಮ್ಮ ಬಿಲ್ಲುಬತ್ತಳಿಕೆಯನ್ನು ದೊಡ್ಡ ಕೈಗಾರಿಕೆಗಳ ಮೇಲೆ ಬಿಡುತ್ತಾ ಎಲ್ಲೋ ಅಲ್ಲೊಂದಿಷ್ಟು ಇಲ್ಲೊಂದಿಷ್ಟು ನನ್ನ ಬೇಡಿಕೆಗಳಿಗೂ ತಲುಪಿದೆ. ಬಹುಶಃ ಸಣ್ಣ ಕೈಗಾರಿಕೆಗಳು, ಮತ್ತು ಖಾದಿಬೋರ್ಡಿನ ವಿಚಾರವಾಗಿ ಮಾನ್ಯ ಸದಸ್ಯರಿಗೆ ಆಸಕ್ತಿ ಕಡಿಮೆಯಾಗಿದೆಯೋ ಏನೋ ಅಥವಾ ಆ ಕೈಗಾರಿಕೆಗಳಲ್ಲಿ ಈಗ ನಡೆಯುತ್ತಾ ಇರುವಂಥಾ ಕಾರ್ಯಗಳು ಉತ್ತಮಗೊಂಡಿವೆ ಎನ್ನುವ ಸಮಾಧಾನದಿಂದಲೋ ಏನೋ ಈ ಕೈಗಾರಿಕೆಗಳ ಮೇಲೆ ಟೀಕೆ ಟಿಪ್ಪಣಿಗಳು ಹೆಚ್ಚಿಗೆ ಕಾಣದೇ ಇರುವುದು ನನಗೆ ಬಹಳ ಆಶ್ಚರ್ಯವನ್ನುಂಟು ಮಾಡಿದೆ. ಇದರಲ್ಲಿ ಕೆಲವು ಮಾನ್ಯ ಸದಸ್ಯರು ನನ್ನ ಬೇಡಿಕೆಗೆ ಸಂಬಂಧಪಟ್ಟ ಹಾಗೆ ಎತ್ತಿದಂತಹ ಆರೋಪಣೆಗಳಿಗೆ ಈಗ ನಾನು ಉತ್ತರವನ್ನು ಕೊಡಬೇಕಾಗಿದೆ. ಶ್ರೀಮಾನ್ ಜ್ವಾಲಯ್ಯನವರು ಸಣ್ಣ ಕೈಗಾರಿಕೆಗಳ ವಿಚಾರವಾಗಿ ಮಾತನಾಡಿ ಅವಕ್ಕೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡಬೇಕೆಂದು ಹೇಳಿದ್ದಾರೆ.

7-00 P.M.

ಬಜೆಟ್‌ನಲ್ಲಿ ಸಣ್ಣ ಕೈಗಾರಿಕೆಗಳಿಗೆ ಒದಗಿಸಿರುವ ಹಣವನ್ನು ನೋಡಿ ಅದರಿಂದ ಯಾವ ರೀತಿ ಪ್ರೋತ್ಸಾಹ ಸಿಗುತ್ತಿದೆ ಎಂಬ ಬಗ್ಗೆ ನಾವು ಅಳೆಯುವುದಕ್ಕೆ ಪ್ರಯತ್ನ ಮಾಡಿದರೆ ತಪ್ಪಾಗುತ್ತದೆ. ಈಗ ಕೇಂದ್ರ ಸರ್ಕಾರದವರು ಮತ್ತು ರಾಜ್ಯ ಸರ್ಕಾರದವರು ಸಣ್ಣ ಕೈಗಾರಿಕೆಗಳಿಗೆ ಸಹಾಯ ಮತ್ತು ಪ್ರೋತ್ಸಾಹವನ್ನು ನೇರವಾಗಿ ಕೊಡದೆ ಕಾರ್ಪೊರೇಷನ್ ಅಥವಾ ಸಂಸ್ಥೆಗಳ ಮೂಲಕ ಕೊಡುತ್ತಿದ್ದಾರೆ. ಇದನ್ನು ನಾವು ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕಾಗುತ್ತದೆ. ಈ ಕಾರ್ಪೊರೇಷನ್‌ಗಳು ಮತ್ತು ಸಂಸ್ಥೆಗಳು ಯಾವ ರೀತಿ ಕೆಲಸ ಮಾಡುತ್ತಿವೆ ಮತ್ತು ಸಣ್ಣ ಕೈಗಾರಿಕೆಗಳಿಗೆ ಯಾವ ರೀತಿ ಪ್ರೋತ್ಸಾಹ ಕೊಡುತ್ತಿವೆ ಎಂಬುದನ್ನು ನಾವು ನೋಡಬೇಕಾಗಿದೆ. State Aid to

(ಶ್ರೀ ಎ. ಪಿ. ಅಪ್ಪಣ್ಣ)

Industries ಮೂಲಕ ಸಣ್ಣ ಕೈಗಾರಿಕೆಗಳಿಗೆ 1968–69ರಲ್ಲಿ 20 ಲಕ್ಷ ರೂಪಾಯಿಗಳನ್ನು ಸಾಲವಾಗಿ ಕೊಡಲಾಗಿದೆ. ಇದು ಬಹಳ ಕಡಿಮೆ ಎಂದು ಯಾರೂ ತಿಳಿದುಕೊಳ್ಳಬಾರದು. ಏಕೆಂದರೆ ಇದರ ಜೊತೆಗೆ State Finance Corporation ಅವರು ಸಹ ಪ್ರತಿವರ್ಷ ಸಣ್ಣ ಕೈಗಾರಿಗಳಿಗೆ ಹಣವನ್ನು ಸಾಲದ ರೂಪದಲ್ಲಿ ಕೊಡುತ್ತಿದ್ದಾರೆ. ಅಲ್ಲದೆ National Small Industries Corporation ಅವರು ಸಹ ಮೈಸೂರು ರಾಜ್ಯದಲ್ಲಿ ಹೈರ್ ಪರಚೇಸ್ ಮೂಲಕ ಯಂತ್ರಗಳನ್ನು ಖರೀದಿ ಮಾಡುವುದಕ್ಕೆ ಹಣದ ಸಹಾಯ ಮಾಡುತ್ತಿದ್ದಾರೆ. ಸಣ್ಣ ಕೈಗಾರಿಕೆಗಳವರು ರಾ–ಮೆಟೀರಿಯಲ್ಸ್‌ನ್ನು ಖರೀದಿ ಮಾಡುವುದಕ್ಕೆ ನಮ್ಮ ಸರ್ಕಾರದವರು ಬಡ್ಜೆಟ್‌ನಲ್ಲಿ ಹಣವನ್ನೇ ಇಟ್ಟಿಲ್ಲವೆಂದು ಮಾನ್ಯ ಸದಸ್ಯರುಗಳು ಕೇಳಬಹುದು. 1967-68ರಲ್ಲಿ Mysore Small Industries Corporation ಅವರು ಒಂದೇ ವರ್ಷದಲ್ಲಿ 76 ಲಕ್ಷ ರೂಪಾಯಿಗಳಷ್ಟು ರಾ–ಮೆಟೀರಿಯಲ್‌ಗಳನ್ನು ಸಣ್ಣ ಕೈಗಾರಿಕೆಗಳವರು ಕೊಂಡುಕೊಳ್ಳಲು ಸಹಾಯ ಮಾಡಿದ್ದಾರೆ. ಸಣ್ಣ ಕೈಗಾರಿಕೆಗಳಿಗೆ ಪ್ರೋತ್ಸಾಹ ಕೊಡಲು ಒಂದೊಂದು ವಿಭಾಗದಲ್ಲಿ ಕಾರ್ಪೊರೇಷನ್‌ಗಳನ್ನು ಅಥವಾ ಸಂಸ್ಥೆಗಳನ್ನು ನಿರ್ಮಾಣ ಮಾಡಿರುವುದರಿಂದ, ಮತ್ತು ಆ ಸಂಸ್ಥೆಗಳಿಗೆ ಷೇರು ಬಂಡವಾಳ ಮತ್ತು ಗ್ರ್ಯಾಂಟನ್ನು ಕೊಟ್ಟಿರುವುದರಿಂದ, ಅವುಗಳು ಯಾವ ರೀತಿ ವ್ಯವಹಾರ ಮಾಡುತ್ತಿವೆ, ಮತ್ತು ಸಣ್ಣ ಕೈಗಾರಿಕೆಗಳಿಗೆ ಯಾವ ರೀತಿ ಪ್ರೋತ್ಸಾಹ ಕೊಡುತ್ತಿವೆ ಎಂಬುದನ್ನು ನಾವು ನೋಡಬೇಕಾಗುತ್ತದೆ. ಮತ್ತು ಆ ಬಗ್ಗೆ ವಿಚಾರ ಮಾಡಬೇಕಾಗುತ್ತದೆ. ಶ್ರೀಮಾನ್ ಜ್ವಾಲನಯ್ಯನವರು State Aid to Industries Act ಪ್ರಕಾರ ಈ ಸಂಸ್ಥೆಗಳಿಗೆ ಕೊಡುತ್ತಿರುವ ಹಣ ಸಾಲದು, ಹೆಚ್ಚು ಮಾಡಬೇಕೆಂದು ಹೇಳಿದರು. ಈಗ ಈ State Aid to Industries Act ನ್ನು ಅಮೆಂಡ್‌ಮೆಂಟ್ ಮಾಡಿ 10 ಸಾವಿರ ರೂಪಾಯಿಗಳನ್ನು ಕೊಡಬೇಕೆಂದು ಇದ್ದಿದ್ದನ್ನು 25 ಸಾವಿರಕ್ಕೆ ಏರಿಸಿದ್ದೇವೆ. ಮತ್ತು,

Director of Industries :	25,000 Rupees
Joint Director :	10,000 Rupees
Deputy Director :	5,000 Rupees
Assistant Director :	2,000 Rupees

ಕೊಡುವಂತೆ ಅಮೆಂಡ್‌ಮೆಂಟನ್ನು ಜಾರಿಗೆ ತಂದಿದ್ದೇವೆ. ಈ ಮೊದಲು ಈ ರೀತಿ ಕೊಡುತ್ತಿದ್ದ ಹಣವನ್ನು ಸಂಬಂಧಪಟ್ಟ ಅಧಿಕಾರಿಗಳು ಸರಿಯಾಗಿ ಉಪಯೋಗ ಮಾಡದೆ ಹಣ ಲ್ಯಾಪ್ಸ್ ಆಗುತ್ತಿತ್ತು. ಇನ್ನು ಮುಂದೆ ಹಣ ಲ್ಯಾಪ್ಸ್ ಆಗದಂತೆ ನೋಡಿಕೊಳ್ಳಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶ ಕೊಡಲಾಗಿದೆ. ಕೇಂದ್ರ ಸರ್ಕಾರದಿಂದ ಮತ್ತು ರಾಜ್ಯಸರ್ಕಾರದಿಂದ ಸಣ್ಣ ಕೈಗಾರಿಕೆಗಳಿಗೆ ಕೊಡುತ್ತಿರುವ ಉತ್ತೇಜನ ಜಾಸ್ತಿಯಾಗುತ್ತಿದೆ. ಮತ್ತು ಈ ಸಣ್ಣ ಕೈಗಾರಿಕೆಗಳಿಗೆ ಷೆಡ್ಯೂಲ್ ಬ್ಯಾಂಕ್‌ನವರು ತಮ್ಮ ಸಹಾಯವನ್ನು ಮಾಡುವುದರ ಮೂಲಕ ತಮ್ಮ ಕರ್ತವ್ಯವನ್ನು ನಿರ್ವಹಿಸಬೇಕೆಂದು ರಿಜರ್ವ್‌ಬ್ಯಾಂಕ್‌ನವರು ಆದೇಶ ಕೊಟ್ಟಿದ್ದಾರೆ. ಈ ಒಂದು ಆದೇಶದ ಪ್ರಕಾರ ಷೆಡ್ಯೂಲ್ ಬ್ಯಾಂಕ್‌ನವರಿಂದ ಸಣ್ಣ ಕೈಗಾರಿಕೆಗಳಿಗೆ ಹೆಚ್ಚಿನಮಟ್ಟಿಗೆ ಪ್ರೋತ್ಸಾಹ ದೊರೆಯುತ್ತಿದೆ. ಕಚ್ಚಾಮಾಲುಗಳು ನಮ್ಮ ರಾಜ್ಯದಲ್ಲಿ ಯಾವ ರೀತಿ ಸಿಗುತ್ತದೋ ಅದರ ಒಂದು ಆಧಾರದ ಮೇಲೆ ಸಣ್ಣ ಕೈಗಾರಿಕೆಗಳು ನಡೆಯುತ್ತಿದ್ದವು. ಈಗ ಕೆಲವರು ಸಣ್ಣ ಕೈಗಾರಿಕೆಗಳನ್ನು ನಡೆಸುತ್ತೇವೆಂದು ಕೊಂಡು 30–40 ಸುಳ್ಳು ಪರ್ಮಿಟ್‌ಗಳನ್ನು ಪಡೆದುಕೊಂಡು ಆ ಮೂಲಕ ಪಡೆದುಕೊಳ್ಳುವ ಈ ಕಚ್ಚಾ ಮಾಲನ್ನು ಕಳ್ಳ ಮಾರ್ಕೆಟ್‌ನಲ್ಲಿ ಮಾರಿ ಹಣವನ್ನು ಸಂಪಾದನೆ ಮಾಡುತ್ತಿದ್ದಾರೆ. ಈ ರೀತಿ ಪರ್ಮಿಟ್‌ಗಳನ್ನು ಕೊಡುವುದನ್ನು ಹತೋಟಿಗೆ ತರಬೇಕೆಂದು ಇಂಪೋರ್ಟ್ ಲೈಸನ್ಸ್ ಕೊಡುವುದನ್ನು ಕಡಿಮೆ ಮಾಡಿದ್ದೇವೆ. ಇಂಪೋರ್ಟ್ ಲೈಸನ್ಸ್ ಕೊಡಬೇಕೆಂದು ಬರುವ ಅರ್ಜಿಗಳಲ್ಲಿ 100ಕ್ಕೆ 75ರಷ್ಟು ಬೋಗಸ್ ಅರ್ಜಿಗಳು ಇರುತ್ತವೆ. ಈ ರೀತಿ ಬೋಗಸ್ ಅರ್ಜಿ ಹಾಕುವವರು ತಮಗೆ ಸಿಕ್ಕುವ ಕಚ್ಚಾಮಾಲನ್ನು ಬ್ಲಾಕ್‌ಮಾರ್ಕೆಟ್‌ನಲ್ಲಿ ಮಾರಿಕೊಳ್ಳುತ್ತಿದ್ದಾರೆ.

ಶ್ರೀ ಎಚ್. ಸಿದ್ದವೀರಪ್ಪ.—ಇದರಿಂದ ಜೆನಿಯುನ್ ಪೀಪಲ್‌ಗಳಿಗೆ ತೊಂದರೆಯಾಗುತ್ತಿದೆ.

ಶ್ರೀ ಎ. ಪಿ. ಅಪ್ಪಣ್ಣ.—ಈ ಕಾರಣದಿಂದಲೇ ಇತ್ತೀಚೆಗೆ ಜೆನಿಯುನ್ ಪೀಪಲ್‌ಗಳಿಗೆ ಹೆಚ್ಚಿನ ಉತ್ತೇಜನ ಕೊಡಬೇಕೆಂದು ಕೆಲವು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಈ ಸಂದರ್ಭದಲ್ಲಿ

1-4-1968 ರಿಂದ 30-11-1968ರ ವರೆಗೆ ನಮ್ಮ ಮೈಸೂರು ರಾಜ್ಯದಲ್ಲಿ 9500 ಅರ್ಜಿಗಳು ಬಂದಿವೆ. ಇಂಪೋರ್ಟ್ ಆದಂಥ ರಾ-ಮೆಟೀರಿಯಲ್ಸ್‌ನ ಆಧಾರದ ಮೇಲೆ ಎಷ್ಟು ಕೈಗಾರಿಕೆಗಳು ಇರುವುದಕ್ಕೆ ಸಾಧ್ಯವೋ ಅವಕ್ಕಿಂತ ಜಾಸ್ತಿ ಅರ್ಜಿಗಳು ಬಂದಿವೆ. ಇಷ್ಟು ಕೈಗಾರಿಕೆಗಳನ್ನು ನಡೆಸಲು ನಮ್ಮ ರಾಜ್ಯದಲ್ಲಿ ಕಚ್ಚಾಮಾಲೂ ಕೂಡ ದೊರೆಯುತ್ತಿಲ್ಲ. ಆ ಕಾರಣದಿಂದ ಈ ಬಗ್ಗೆ ಬರುವ ಹೊಸ ಅಪ್ಲಿಕೇಷನ್‌ಗಳನ್ನು ರಿಜೆಕ್ಟ್ ಮಾಡುತ್ತಿರುವುದಲ್ಲದೆ ಯಾರು ಕಚ್ಚಾಮಾಲನ್ನು ಸರಿಯಾಗಿ ಉಪಯೋಗಿಸಿಕೊಳ್ಳದೆ ಬ್ಲಾಕ್‌ಮಾರ್ಕೆಟ್‌ನಲ್ಲಿ ಮಾರಿಕೊಳ್ಳುತ್ತಿದ್ದಾರೋ ಅಂಥವರ ಪರ್ಮಿಟ್‌ಗಳನ್ನು ಕ್ಯಾನ್ಸಲ್ ಮಾಡುತ್ತಿದ್ದೇವೆ. ಅಲ್ಲದೆ ಬ್ಲಾಕ್‌ಮಾರ್ಕೆಟ್‌ನಲ್ಲಿ ಮಾರಿಕೊಳ್ಳುತ್ತಿರುವ ಕೆಲವರ ಮೇಲೆ ಕ್ರಮ ಕೈಗೊಳ್ಳಲು Central Bureau of Investigation ಅವರಿಗೆ ರೆಫರ್ ಮಾಡುತ್ತಿದ್ದೇವೆ. ಈ ವಿಚಾರದಲ್ಲಿ ಒಂದು ಕಾರ್ಯಕ್ರಮವನ್ನೂ ಸಹ ಹಾಕಿಕೊಂಡಿದ್ದೇವೆ. ಇಂಥವರ ಪರವಾಗಿ ಈ ಮನೆಯ ಸದಸ್ಯರುಗಳಾಗಲೀ ಅಥವಾ ಮೇಲ್ಮನೆಯ ಸದಸ್ಯರುಗಳಾಗಲೀ ಇಲ್ಲಿಯತನಕ ಕಚ್ಚಾಮಾಲನ್ನು ಬ್ಲಾಕ್ ಮಾರ್ಕೆಟ್‌ನಲ್ಲಿ ಮಾರಿಕೊಳ್ಳುವವರ ಪ್ರಭಾವಕ್ಕೆ ಒಳಗಾಗಿ ಅವರಿಗೆ ಪರ್ಮಿಟ್ ಕೊಡಬೇಕೆಂದು ಸರ್ಕಾರಕ್ಕಾಗಲೀ ಅಥವಾ ಡೈರಕ್ಟರ್‌ಗೆ ಆಗಲೀ ಒತ್ತಡ ತರದಿರುವುದು ಸಂತೋಷದ ವಿಚಾರ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಹಿಂದಿನ ವರ್ಷವೂ ಕೂಡ ಇದೇ ವಿಚಾರವನ್ನು ಹೇಳಿದ್ದಿರಿ. ಈಗಲೂ ಅದನ್ನೇ ಹೇಳುತ್ತಿದ್ದೀರಿ.

ಶ್ರೀ ಎ. ಪಿ. ಅಪ್ಪಣ್ಣ.—ನಾನು ಹೇಳುತ್ತಿರುವುದೇನೆಂದರೆ ಬ್ಲಾಕ್‌ಮಾರ್ಕೆಟ್‌ನಲ್ಲಿ ಕಚ್ಚಾಮಾಲನ್ನು ಮಾರಿಕೊಳ್ಳುವವರ ಪರವಾಗಿ ಮಾನ್ಯ ಸದಸ್ಯರುಗಳು ವಕಾಲತ್ತು ವಹಿಸದೆ ಜೆನಿಯುನ್ ಪೀಪಲ್‌ಗೆ ಅನುಕೂಲ ಮಾಡಿಕೊಟ್ಟು ಆ ಮೂಲಕ ನಮ್ಮ ದೇಶದಲ್ಲಿರತಕ್ಕ ಕೈಗಾರಿಕೆಗಳು ಮುಂದೆ ಬರಲು ಸಹಾಯ ಮಾಡುತ್ತಿದ್ದಾರೆಂದು ಸಂತೋಷದಿಂದ ಹೇಳುತ್ತಿದ್ದೇನೆ ಮತ್ತು ಇದೇ ರೀತಿ ಇನ್ನು ಮುಂದೆಯೂ ಕೂಡ ಬೋಗಸ್ ಅರ್ಜಿ ಹಾಕಿಕೊಂಡವರ ಪರವಾಗಿ ಪರ್ಮಿಟ್ ಕೊಡಬೇಕೆಂದು ಒತ್ತಡವನ್ನು ಯಾರೂ ತರದಿದ್ದರೆ ಜೆನಿಯುನ್ ಪೀಪಲ್‌ಗಳಿಗೆ ಇನ್ನೂ ಹೆಚ್ಚಿನ ಸಹಕಾರ ಕೊಡುವುದಕ್ಕೆ ಅವಕಾಶವಾಗುತ್ತದೆಂದು ಈ ಸಂದರ್ಭದಲ್ಲಿ ಹೇಳಲು ಇಚ್ಛೆ ಪಡುತ್ತೇನೆ. ಇಲ್ಲದಿದ್ದರೆ ಜೆನಿಯುನ್ ಪೀಪಲ್‌ಗಳು ಕಚ್ಚಾಮಾಲನ್ನು ಬ್ಲಾಕ್‌ಮಾರ್ಕೆಟ್‌ನಲ್ಲಿ ಕೊಂಡುಕೊಳ್ಳಬೇಕಾಗುತ್ತದೆ.

ಶ್ರೀ ಡಿ. ದೇವರಾಜ ಅರಸ್.—ಇಷ್ಟು ಹೇಳಿದ ಮೇಲೆ ಯಾರು ತಾನೇ ಒತ್ತಡ ತರುತ್ತಾರೆ.

ಶ್ರೀ ಎ. ಪಿ. ಅಪ್ಪಣ್ಣ.—ಇನ್ನು ಮಾನ್ಯ ಸದಸ್ಯರಾದ ಶ್ರೀಮಾನ್ ಡಿ. ಎಂ. ಸಿದ್ದಯ್ಯನವರು ನಮ್ಮ ರಾಜ್ಯದಲ್ಲಿ ಕಾಯರ್ ಇಂಡಸ್ಟ್ರೀಸ್‌ಗೆ ಹೆಚ್ಚಿನ ಪ್ರೋತ್ಸಾಹ ಸಿಗುತ್ತಿಲ್ಲವೆಂದು ಹೇಳಿದರು. ನಮ್ಮ ರಾಜ್ಯದಲ್ಲಿ ಕಳೆದ ಒಂದೆರಡು ವರ್ಷಗಳಲ್ಲಿ ಈ ಬಗ್ಗೆ ನಾವು ಸಾಧಿಸಿದಂಥ ಪ್ರಗತಿಯನ್ನು ಮಾನ್ಯ ಸದಸ್ಯರುಗಳ ಗಮನಕ್ಕೆ ತರುವುದಕ್ಕೆ ಬಹಳ ಸಂತೋಷಪಡುತ್ತೇನೆ. ಕಾಯರ್ ಇಂಡಸ್ಟ್ರಿಯನ್ನು ಮುಂದುವರೆಸಲು ನಮ್ಮ ರಾಜ್ಯದಲ್ಲಿ ಕೇರಳ ರಾಜ್ಯದಲ್ಲಿರುವಂತಹ ಅನುಕೂಲಗಳು ಮತ್ತು ಸಲಕರಣೆಗಳು ಇಲ್ಲದಿರುವುದರಿಂದ ಪ್ರಗತಿ ಕುಂಠಿತವಾಗುತ್ತಿತ್ತು. ಆದರೆ ನಮ್ಮ ಕಡೆ ಇರುವ ತೆಂಗು ನಾರುಗಳಲ್ಲಿ ಉಪ್ಪು ಇಲ್ಲದುದರಿಂದ ಇದು ಉತ್ತಮವಾಗಿದೆ ಮತ್ತು ಇದಕ್ಕೆ ಎಲ್ಲ ತರಹದ ಸೌಕರ್ಯಗಳನ್ನೂ ಕೊಟ್ಟರೆ ಹಳ್ಳಿಗಾಡಿನಲ್ಲಿ ಇದೂ ಒಂದು ರೀತಿಯಾದ ಗೃಹ ಕೈಗಾರಿಕೆಯಂತಾಗುವುದು ಎಂದು ಈಗಾಗಲೇ ಇದರ ಬಗ್ಗೆ ಸೂಕ್ತ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೇವೆ. ಕೇರಳದ ಕಡೆಯಲ್ಲಿ ಸಿಗುವ ನಾರು ಉಪ್ಪುನೀರಿನಲ್ಲಿ ನೆನೆಸಿರುವುವಾಗಿರುವುದರಿಂದ ಇದು ಹೆಚ್ಚು ಅನುಕೂಲವಾಗಿಲ್ಲ. ನಮ್ಮ ಭಾಗದ ತೆಂಗು ನಾರು ಚೆನ್ನಾಗಿ ಕೆಲಸಕ್ಕೆ ಬರುತ್ತದೆ ಇದಕ್ಕೆ ತಕ್ಕ ಹಾಗೆ ಎಲ್ಲೆಲ್ಲಿ ತೆಂಗು ಕ್ಷೇತ್ರಗಳು ಹೆಚ್ಚಾಗಿವೆಯೋ ಅಂತಹ ಕಡೆಗಳಲ್ಲಿ ಕಾಯಿರ್ ಪ್ರೊಡ್ಯೂಸಿಂಗ್ ಯೂನಿಟ್ಟುಗಳೆಂದು ಮಾಡಲಾಗಿದೆ ಮತ್ತು ಈಗಾಗಲೇ ನಮ್ಮ ರಾಜ್ಯದಲ್ಲಿ ಸುಮಾರು 31 ಕಾಯರ್ ಪ್ರೊಡ್ಯೂಸಿಂಗ್ ಯುನಿಟ್‌ಗಳನ್ನು ಮಾಡಲಾಗಿದೆ. ಇದರಲ್ಲಿ ಒಂಬತ್ತು ಸರಕಾರದ ಇಲಾಖೆಯ ಮೂಲಕ ನಡೆಯುತ್ತಿದೆ, ಎರಡು ಕೋ-ಅಪರೇಟಿವ್ ಯೂನಿಟ್ಸ್‌ಗಳಿವೆ ಮತ್ತು 20 ಪ್ರೈವೇಟ್ ಯೂನಿಟ್‌ಗಳಿವೆ. ಇವೆಲ್ಲಾ ಸಾಧಾರಣವಾಗಿ ತುಮಕೂರು ಹಾಗೂ ಹಾಸನ ಜಿಲ್ಲೆಗಳಲ್ಲಿ ಇವೆ. ಇದಕ್ಕೆ ಕಾರಣ ಇಲ್ಲಿ ತೆಂಗು ವ್ಯವಸಾಯ ಚೆನ್ನಾಗಿ ಆಗುತ್ತಿದೆ, ಮತ್ತು ತೆಂಗು ಕ್ಷೇತ್ರಗಳ ಮಧ್ಯದಲ್ಲಿಯೇ ಇಂತಹ ಕಾಯರ್ ಯುನಿಟ್‌ಗಳನ್ನು ಮಾಡಿದರೆ ಜನರಿಗೂ ಅನುಕೂಲವಾಗುತ್ತದೆ ಎಂದು ಆಯಾ ತೆಂಗು ಕ್ಷೇತ್ರಗಳ ಮಧ್ಯದಲ್ಲೇ ಇಂತಹ ಯೂನಿಟ್‌ಗಳನ್ನು ಮಾಡಲಾಗಿದೆ. ಅಲ್ಲದೆ ಗ್ರಾಮಾಂತರಗಳಲ್ಲಿ ಇಂತಹ ಕೈಗಾರಿಕೆಗಳನ್ನು ಮಾಡಿದರೆ ಹಳ್ಳಿಗಾಡಿನ ಜನರಿಗೂ ಅನುಕೂಲವಾಗುತ್ತದೆ ಎಂದು ಈ ನೀತಿಗೆ ಒಳಪಡಿಸಿ ಇಂತಹ ಕಾಯರ್ ಯೂನಿಟ್‌ಗಳನ್ನು ಸ್ಥಾಪನೆ ಮಾಡಲಾಗಿದೆ. ಈಗಾಗಲೇ ನಮ್ಮ ರಾಜ್ಯದಲ್ಲಿ ಸಾಧಾರಣವಾಗಿ

(ಶ್ರೀ ಎ. ಪಿ. ಅಪ್ಪಣ್ಣ)

ಒಂದು ವರ್ಷಕ್ಕೆ ಸುಮಾರು 924 ಟನ್ನುಗಳಷ್ಟು ಕಾಯರನ್ನು ತಯಾರು ಮಾಡುತ್ತಿದ್ದಾರೆ ಮತ್ತು ಇದರ ಬೆಲೆ ಸುಮಾರು ಏಳು ಲಕ್ಷದಷ್ಟು ಬರುತ್ತದೆ. ಇನ್ನು ಈ ವರ್ಷದಲ್ಲಿ ಸುಮಾರು 1,36,000 ರೂಪಾಯಿಗಳಷ್ಟು ಬೆಲೆಯ ಕಾಯರನ್ನು ಪರದೇಶಗಳಿಗೂ ಕಳುಹಿಸಲಾಗಿದೆ. ಇದೂ ಅಲ್ಲದೆ ನಮ್ಮ ಇಲಾಖೆಯಲ್ಲಿ ಕಾಯರುಗಳಿಗಾಗಿ ಬೇಡಿಕೆಗಳು ದಿನೇ ದಿನೇ ಹೆಚ್ಚುತ್ತಾ ಇವೆ. ಇದನ್ನೆಲ್ಲಾ ಮುಗಿಸಿ ಕಾಯರುಗಳನ್ನು ಹೊರದೇಶಗಳಿಗೂ ಇಂದು ನಾವು ಕಳುಹಿಸುವ ಸ್ಥಿತಿಯಲ್ಲಿದ್ದೇವೆ ಎಂದು ಹೇಳಲು ಸಂತೋಷಪಡುತ್ತೇನೆ.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಮೀಡಿಯಂ ಸ್ಟೇಪಲ್ ನಾರು ಶಕ್ತಿ ಇದ್ದರೂ ಲಾಂಗ್ ಸ್ಟೇಪಲ್ ಸಪ್ಲೈ ಮಾಡಲು ತೊಂದರೆ ಇದೆ ಎಂದು ಕೇಳುತ್ತೇವೆ. ಇದರ ಬಗ್ಗೆ ಸರಕಾರದ ನೀತಿಯೇನು ?

ಶ್ರೀ ಎ. ಪಿ. ಅಪ್ಪಣ್ಣ.—ಇದರಲ್ಲಿ ಒಂದು ತೊಂದರೆ ಏನಿತ್ತು ಎಂದರೆ ನಾರನ್ನು ಹಿಂದೆ ತಯಾರು ಮಾಡುತ್ತಿದ್ದಾಗ ಅವು ಕೆಳದರ್ಜೆಯ ಮಟ್ಟದಲ್ಲಿತ್ತು. ಇವನ್ನೆಲ್ಲಾ ಕ್ಲೀನ್ ಮಾಡಲು ಮೊದಲು ಸರಿಯಾದ ಮೆಷಿನರಿಗಳು ಬಂದಿರಲಿಲ್ಲ. ಈಚೆಗೆ ಇಂತಹ ಕ್ಲೀನಿಂಗು ಮೆಷಿನರಿಗಳೆಲ್ಲಾ ಬಂದಿವೆ. ಇಂತಹ ಕ್ಲೀನಿಂಗು ಯೂನಿಟ್ಟುಗಳನ್ನು ಕೆಲವು ಕಡೆಗಳಲ್ಲಿ ತೆರೆಯಲಾಗಿದೆ. ನಮ್ಮ ರಾಜ್ಯದಲ್ಲಿ ಮೈಸೂರು, ಬೆಂಗಳೂರು ನಗರಗಳಲ್ಲಿರುವ ಇಂಡಸ್ಟ್ರಿಯಲ್ ಎಸ್ಟೇಟಿನಲ್ಲಿ ಮೈಸೂರು ಸ್ಮಾಲ್‌ಸ್ಕೇಲ್ಸ್ ಇಂಡಸ್ಟ್ರೀಸ್ ಕಾರ್ಪೊರೇಷನ್ನಿನವರು ಕಾಯರ್ ಪ್ರೊಡ್ಯೂಸಿಂಗು ಯೂನಿಟ್‌ಗಳಿಗೆ ಅನುಕೂಲವಾಗುವಂತೆ ಕ್ಲೀನಿಂಗು ಮೆಷಿನರಿಗಳನ್ನು ತಯಾರು ಮಾಡಿ ತಕ್ಕ ಕಾರ್ಯಕ್ರಮಗಳನ್ನು ಇಲಾಖೆಯವರು ಈಗಾಗಲೇ ಮಾಡುತ್ತಿದ್ದಾರೆ.

ಶ್ರೀ ಡಿ. ಎಂ. ಸಿದ್ದಯ್ಯ.—ಇದರಲ್ಲಿ ಫಾರಿನ್ ಎಕ್ಸ್‌ಚೇಂಜು ಎಷ್ಟು ಬರುತ್ತದೆ ?

ಶ್ರೀ ಎ. ಪಿ. ಅಪ್ಪಣ್ಣ.—ಸುಮಾರು 1, 36,000 ದಷ್ಟು ಫಾರಿನ್ ಎಕ್ಸ್‌ಚೇಂಜು ಬರಬಹುದು. ಇನ್ನೂ ಚೆನ್ನಾಗಿರುವ ಕಾಯರನ್ನು ತಯಾರುಮಾಡುವ ಕಾರ್ಯಕ್ರಮವನ್ನು ಈಗಾಗಲೇ ಕೈಗೊಂಡಿದ್ದೇವೆ. ಮತ್ತೆ ಮಾನ್ಯ ಸದಸ್ಯರಾದ ಶ್ರೀಮಾನ್ ಜ್ವಾಲನಯ್ಯನವರು ಮಾರ್ಕೆಟಿಂಗು ಬಗ್ಗೆ ರಾಜ್ಯ ಸರಕಾರದವರು ತಯಾರಿಸಿರುವ ಸಾಮಾನುಗಳಿಗೆ ಸರಿಯಾದ ಕಾರ್ಯಕ್ರಮ ಕೈಗೊಂಡಿಲ್ಲ ಎಂದು ಹೇಳಿದರು. ಇದು ಸರಿಯಲ್ಲ. ಸರಕಾರ ನೇರವಾಗಿ ಕೈಗೊಳ್ಳದೇ ಇದ್ದರೂ ಸಹಾ ಮೈಸೂರು ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಕಾರ್ಪೊರೇಷನ್‌ನ್ನವರ ಮೂಲಕ ತಕ್ಕ ಕಾರ್ಯಕ್ರಮಗಳನ್ನು ಕೈಗೊಂಡಿದ್ದೇವೆ. ಸ್ಮಾಲ್‌ಸ್ಕೇಲ್ ಇಂಡಸ್ಟ್ರೀಸ್ ಕಾರ್ಪೊರೇಷನ್ ಮೂಲಕ ಸ್ಟೋರ್ಸ್ ಪರ್ಚೇಸ್ ಕಮಿಟಿ ಮೂಲಕ ಟೆಂಡರುಗಳನ್ನು ಕರೆಯಲಾಗಿದೆ ಎಂ ಎಸ್ ಇ ಬಿ ಮೂಲಕ ಟೆಂಡರುಗಳನ್ನು ಕರೆಯಲಾಗಿದೆ ಎಂ. ಎಸ್ ಆರ್ ಟಿ ಸಿ ಮೂಲಕ ಟೆಂಡರುಗಳನ್ನು ಕರೆಯಲಾಗಿದೆ ಸರಕಾರದವರೇ ಟೆಂಡರುಗಳನ್ನು ಕರೆದು ಅದನ್ನು ಒಪ್ಪುವುದಕ್ಕೆ ಹೆಚ್ಚು ಕಾಲ ಬೇಕಾಗುತ್ತದೆ ಎಂದು ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಕಾರ್ಪೊರೇಷನ್ನಿನ ಮೂಲಕ ಎಲ್ಲಾ ಸಾಮಾನುಗಳನ್ನು ಪಡೆದು ಕೂಡಲೆ ಅದರ ಬೆಲೆಯನ್ನು ಮಾರುವವರಿಗೆ ಕೊಡುವ ಅನುಕೂಲವನ್ನೂ ಮಾಡಿಕೊಡಲಾಗಿದೆ. ಖರೀದಿ ಮಾಡಲು ಬರುವವರಿಗೆ ಹೆಚ್ಚು ಕಾಲ ಕಾಯ ಬೇಕಾಗುತ್ತದೆ ಎಂದು ಅವರು ಸಪ್ಲೈ ಮಾಡುವ ಸಾಮಾನುಗಳಿಗೆ ಕೂಡಲೇ ದುಡ್ಡು ಸಿಗಬೇಕು ಎಂದು ಸ್ಮಾಲ್ ಸ್ಕೇಲ್ ಕಾರ್ಪೊರೇಷನ್ ಮೂಲಕ ಅವರಿಗೆ ಹಣ ಕೊಡಲಾಗುತ್ತಿದೆ. ಈಗ ಸರಕಾರದವರಿಂದ ಮಾಡಿದ ಸುಮಾರು 52 ಸಾಮಾನುಗಳು ಸಣ್ಣ ಕೈಗಾರಿಕೆಗಳಿಂದಲೇ ಕೊಂಡುಕೊಳ್ಳಬೇಕು ಎಂದು ಒಂದು ನಿಯಮವನ್ನೂ ಮಾಡಿ ಇದರಂತೆ ಎಲ್ಲ ಇಲಾಖೆಗಳಿಗೂ ಸೂಚನೆಗಳನ್ನು ನೀಡಲಾಗಿದೆ. ಸುವ್ಯವಸ್ಥಿತವಾದ ಒಂದು ಅಟಾನಮಸ್ ಬಾಡಿ ಮೂಲಕ ಇವನ್ನೆಲ್ಲಾ ಖರೀದಿ ಮಾಡಬೇಕು ಎಂದು ಕಾರ್ಪೊರೇಷನ್ ಮೂಲಕ ಈ ಕೆಲಸವನ್ನು ಮಾಡಲಾಗುತ್ತಿದೆ. ಸರಕಾರದವರೇ ಪೂರ್ತಿಯಾಗಿ ಟೆಂಡರು ಕರೆದರೆ, ಆ ಟೆಂಡರನ್ನು ಒಪ್ಪಿ ಖರೀದಿದಾರರಿಗೆ ಹಣ ಕೊಡಬೇಕಾದರೆ 6—9 ತಿಂಗಳ ಮೇಲಾಗುತ್ತದೆ. ಇದರಿಂದ ವ್ಯಾಪಾರ ಮಾಡುವವರು ಜೀವನ ಮಾಡಲಾಗುವುದಿಲ್ಲ ಎಂದು ತಿಳಿದು, ವ್ಯಾಪಾರ ಮಾಡಲು ಬರುವವರಿಗೆ ಅನುಕೂಲವಾಗಬೇಕು ಎನ್ನುವ ಉದ್ದೇಶದಿಂದ ಕಾರ್ಪೊರೇಷನ್ ಮೂಲಕವೇ ಎಲ್ಲ ಸಾಮಾನುಗಳನ್ನು ಖರೀದಿ ಮಾಡಿ, ಕೂಡಲೇ ಅದರ ಬೆಲೆಯನ್ನು ಕೊಡಬೇಕೆಂದು ಮಾಡಲಾಗಿದೆ. ಈ ವ್ಯವಸ್ಥೆಯಿಂದ ಕೆಲಸ ಈಗ ಚೆನ್ನಾಗಿ ಯಶಸ್ವಿಯಾಗಿ ನಡೆಯುತ್ತಿದೆ.

ಶ್ರೀ ಡಿ. ದೇವರಾಜಅರಸ್.—ಕೈಗಾರಿಕೆಗಳಿಗೆ ಸಹಾಯವಾಗುತ್ತಿದೆ ಎಂದು ಮಾಡ ವುದು ಕಾಯರು ಇಂಡಸ್ಟ್ರೀ ಒಂದೇ ಅಲ್ಲ. ನಾವು ತೆಗೆಯತಕ್ಕದ್ದು ಹಸಿಯ ತೆಂಗಿನಲ್ಲಿ ಹೆಚ್ಚು ಭಾಗ

ಕಾಯಿ ಕೊಬ್ಬರಿಗಳಾದ ಮೇಲೆ ಇದರ ಸಿಪ್ಪೆಯನ್ನು ಕೂಡ ಹೊರಕ್ಕೆ ಹಾಕದೆ ಒಣಸಿಪ್ಪೆಯಿಂದ ಒಂದು ತರದ ನಾರು ತೆಗೆದು ಅದು ಗಟ್ಟಿಯಾಗಿದೆ ಎಂದು ರಬ್ಬರೈಸ್ಡ್ ಕಾಯರ್ ಎಂದು ಮಾಡಬಹುದು. ಇವನ್ನು ಡನ್‌ಲಪ್ ಕುಷನ್‌ಗಳು ಹಾಗೂ ಸೀಟುಗಳನ್ನು ಮಾಡುವಾಗ ಉಪಯೋಗಿಸುತ್ತಿದ್ದಾರೆ. ಇದನ್ನು ಸ್ಮಾಲ್‌ಸ್ಕೇಲ್ ಇಂಡಸ್ಟ್ರೀಸ್ ಕಾರ್ಪೊರೇಷನ್ನಿನವರು ಮಾಡಬೇಕೆಂದು ಒತ್ತಾಯ ಮಾಡಿದರೆ ಒಣನಾರು ಹಾಳಾಗಿ ಹೋಗುವುದೂ ಉಪಯೋಗಕ್ಕೆ ಬರುತ್ತದೆ ಮತ್ತು ಇದರಿಂದ ಒಂದು ರೀತಿಯಾಗಿ ಇಂಡಸ್ಟ್ರೀ ಕೂಡ ಡೆವಲಪ್ ಆಗುತ್ತದೆ.

ಶ್ರೀ ಎ. ಪಿ. ಅಪ್ಪಣ್ಣ.—ನಾವು ಈಗಾಗಲೇ ಇಲಾಖೆಯ ಮೂಲಕ ತಕ್ಕ ಕಾರ್ಯಕ್ರಮಗಳನು ಕೈಗೊಂಡಿದ್ದೇವೆ. ರಬ್ಬರೈಸ್ಡ್ ಕುಷನ್ ಮಾಡಲು ಇಂತಹ ಕಾಯರ್ ಅವಶ್ಯಕವಾಗಿ ಬೇಕು. ಆದರೆ ನಮ್ಮಲ್ಲಿ ತಯಾರಾಗುವ ಕಾಯರ್ ಟೆನ್‌ಷನ್ ಬಹಳ ಚೆನ್ನಾಗಿದೆ ಎಂದು ಎಲ್ಲ ಕಡೆಗಳಿಂದಲೂ ಇದಕ್ಕೆ ಬೇಡಿಕೆಗಳು ಹೆಚ್ಚು ಬರುತ್ತಿವೆ. ಕೇರಳದಲ್ಲಿ ಮಾಡುವ ಕಾಯರ್‌ನಲ್ಲಿ ಟೆನ್‌ಷನ್ ಕಡಿಮೆ ಇದೆ. ನಮ್ಮ ರಾಜ್ಯದ ಕಾಯರ್ ಟೆನ್‌ಷನ್ ಜಾಸ್ತಿ ಇದೆ. ಆದ್ದರಿಂದ ಅನೇಕ ಕಡೆಗಳಿಂದ ಇಂತಹ ನಾರನ್ನು ಸಪ್ಲೈ ಮಾಡಲು ಆರ್ಡರುಗಳು ಬರುತ್ತಿವೆ. ನಾವು ಸಪ್ಲೈ ಮಾಡುತ್ತಿದ್ದೇವೆ. ಇಂತಹ ಒಂದು ಫ್ಯಾಕ್ಟರಿ ಒಂದು ಬೆಂಗಳೂರಿನಲ್ಲೇ ಫಂಕ್ಷನ್ ಮಾಡುತ್ತಿದೆ ಮತ್ತು ನಮ್ಮ ಮೈಸೂರು ರಾಜ್ಯದ ಕಾಯರ್‌ನ್ನೇ ಉಪಯೋಗಿಸುತ್ತಿದ್ದಾರೆ. ಬೇರೆ ರಾಜ್ಯಗಳಿಗೂ ಸಪ್ಲೈ ಮಾಡಲು ಅನುಕೂಲವಾಗುವಂತೆ ಇದಕ್ಕಾಗಿ ಕೋಆಪರೇಟೀವ್ ಸೊಸೈಟಿಗಳ ಒಂದು ಫೆಡರೇಷನ್ ಎಂದು ಮಾಡಿ ಇದರ ಮೂಲಕ ಮಾರ್ಕೆಟಿಂಗು ಡೆವಲಪ್ ಮಾಡುತ್ತಿದ್ದೇವೆ ಎಂದು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ.

ಇಷ್ಟೊಂದು ಅಂಕೆ ಅಂಶಗಳ ವಿಚಾರವನ್ನು ಈಗಾಗಲೇ ಹೇಳಿದ್ದೇನೆ. ಇನ್ನು ಬೇರೆ ಒಂದು ಮಾತನ್ನು ಇಲ್ಲಿ ಹೇಳಲಿಚ್ಛಿಸುತ್ತೇನೆ. ಶ್ರೀಮಾನ್ ಜ್ವಾಲನಯ್ಯನವರು, ಹಾಗೂ ಶ್ರೀ ರಾಜಯ್ಯ ಶೆಟ್ಟರವರು ಮತ್ತು ಶ್ರೀಮತಿ ನಾಗರತ್ನಮ್ಮನವರು ಖಾದಿ ಬೋರ್ಡು ವಿಚಾರವಾಗಿ ಹೇಳಿದರು. ನಾನು ಖಾದೀ ಬೋರ್ಡು ವಿಚಾರವಾಗಿ ಇಲ್ಲಿ ಹೇಳುವಾಗ ಇದು ಬಹಳ ಚೆನ್ನಾಗಿ ಕೆಲಸ ಮಾಡುತ್ತಿದೆ ಎಂದು ಹೇಳಲು ಹೋಗುವುದಿಲ್ಲ. ಕಳೆದ ಸಾರಿಯೂ ಕೂಡ ಚೆನ್ನಾಗಿ ನಡೆಯುತ್ತಿದೆ ಎಂದು ಹೇಳಲಿಲ್ಲ. ಮತ್ತು ಈ ಮಾನ್ಯ ಸಭೆಯ ಸದಸ್ಯರನ್ನೂ ತಪ್ಪುದಾರಿಗೆ ಎಳೆಯಲು ಪ್ರಯತ್ನ ಪಡುವುದೂ ಇಲ್ಲ ಮತ್ತು ಇದು ಯಶಸ್ವಿಯಾಗಿ ಕೆಲಸ ನಡೆಯುತ್ತದೆ ಎನ್ನುವ ನಂಬಿಕೆಯನ್ನೂ ಇಟ್ಟುಕೊಂಡಿಲ್ಲ. ಮಾನ್ಯ ಸದಸ್ಯರಾದ ಶ್ರೀಮಾನ್ ಸಿದ್ಧವೀರಪ್ಪನವರಂತಥಹ ದೊಡ್ಡ ವ್ಯಕ್ತಿಗಳೂ ಈ ಸಂಸ್ಥೆಯಲ್ಲಿ ದುಡಿದಿರುವುದರಿಂದ ಮತ್ತು ಅವರು ಇಂದು ಇಲ್ಲಿ ಕುಳಿತಿರುವುದರಿಂದ, ಅವರ ಎದುರಿಗೇ ನಾನು ಈ ಸಂಸ್ಥೆ ಚೆನ್ನಾಗಿದೆ ಇದರಲ್ಲಿ ದೋಷವಿಲ್ಲ ಎಂದು ಒಪ್ಪಿಕೊಳ್ಳುವುದಕ್ಕೆ ಮತ್ತು ಇದು ಪರಿಪೂರ್ಣವಾಗಿದೆ ಎಂದು ಹೇಳುವುದಕ್ಕೆ ತಯಾರು ಇಲ್ಲ. ಕಳೆದ ಬಡ್ಜೆಟ್ ಅಧಿವೇಶನದಲ್ಲಿ ಕೆಲವು ಮಾನ್ಯ ಸದಸ್ಯರು ಖಾದೀಬೋರ್ಡನಂತಹ ಸಂಸ್ಥೆಗೆ ಕೊಡುವ ಹಣ ಸರಿಯಲ್ಲ ಇದನ್ನು ಸ್ವಲ್ಪಮಟ್ಟಿಗಾದರೂ ಉಳಿಸಿ ಎಂದು ಹೇಳಿದ್ದರು. ಶ್ರೀಮಾನ್ ಜ್ವಾಲನಯ್ಯನವರು ಒಂದೇ ಮಾತಿನಲ್ಲಿ ಇದನ್ನು ಮುಚ್ಚಿಬಿಡಿ, ನಾವು ಇನ್ನು ಮುಂದೆ ಇದಕ್ಕಾಗಿ ಮೊಬಲಗನ್ನು ಕೊಡುವುದಕ್ಕಾಗುವುದಿಲ್ಲ, ಇದರಿಂದ ಈ ದೇಶದಲ್ಲಿ ಏನೇನೋ ಅನಾಹುತಗಳಾದವು, ಇದರ ಬಗ್ಗೆ ಸೂಕ್ತವಾದ ಒಂದು ವಿಚಾರಣಾ ಸಮಿತಿಯನ್ನು ನೇಮಿಸಬೇಕು ಎಂದು ಹೇಳಿದ್ದರು. ಇದಕ್ಕೆ ಕೊಡುವ ಹಣವಾಗಲೀ ಗ್ರ್ಯಾಂಟಾಗಲೀ ಖಾದೀ ಕಮಿಷನ್‌ನವರು ಕೊಡುತ್ತಿದ್ದಾರೆ. ಆದಾಗ್ಯೂ ಎಷ್ಟು ಮಟ್ಟಿಗೆ ಕೆಲಸಗಳು ಇಲ್ಲಿ ನಡೆಯುತ್ತಿವೆ ಯಾವ ಯಾವ ಯೋಜನೆಗಳು ಎಷ್ಟುಮಟ್ಟಿಗೆ ಕೆಲಸ ಮಾಡುತ್ತಿವೆ ಎನ್ನುವ ವಿಚಾರಗಳನ್ನು ನಾವು ಗಣನೆಗೆ ತೆಗೆದುಕೊಳ್ಳಬೇಕು. ಇದರಲ್ಲಿ ಎಷ್ಟು ಮಟ್ಟಿನ ಸಾಮಾನುಗಳು ತಯಾರಾಗುತ್ತಲಿವೆ ಮತ್ತು ಈ ಕೈಗಾರಿಕೆಯಿಂದ ಎಷ್ಟು ಜನರಿಗೆ ಉದ್ಯೋಗಗಳು ದೊರೆಯುತ್ತಿವೆ ಎನ್ನುವುದನ್ನು ವಿಚಾರ ಮಾಡಬೇಕು. ಹಳ್ಳಿಗಾಡಿನ ಜನರಿಗೆ ಇದರಲ್ಲಿ ಉದ್ಯೋಗಗಳನ್ನು ದೊರಕಿಸಿಕೊಡಬೇಕು ಎನ್ನುವ ಜವಾಬುದಾರಿ ಹೊತ್ತಿರುವುದರಿಂದ ಇದನ್ನು ಮುಂದುವರಿಸಿಕೊಂಡು ಹೋಗಲೇಬೇಕಾಗುತ್ತದೆ. ಇದನ್ನು ಮುಚ್ಚಬೇಕೆಂಬ ಭಾವನೆ ನಾವು ಹೊಂದಿದ್ದೇ ಆದರೆ, ಅದು ಬಹುಜನರ ಹಿತದೃಷ್ಟಿಯಿಂದ ಸರಿಯಲ್ಲ ಮತ್ತು ಹೊಂದಾಣಿಕೆಯೂ ಆಗುವುದಿಲ್ಲ ಖಾದೀಬೋರ್ಡಿಗೆ ಮದರ್ ಇನ್‌ಸ್‌ಟಿಟ್ಯೂಷನ್ ಖಾದೀ ಕಮಿಷನ್. ಇದು ಸಾಲ ಇತ್ಯಾದಿಗಳನ್ನು ಕೊಟ್ಟು ನಮ್ಮ ಜನರ ಕಷ್ಟಗಳನ್ನು ಪರಿಹರಿಸುತ್ತಿದೆ.

ನಾವು ಈ ಸಂದರ್ಭದಲ್ಲಿ 695.99 ಲಕ್ಷ ರೂಪಾಯಿಯನ್ನು ಸಹಕಾರಿ ಸಂಸ್ಥೆಗೂ ಮತ್ತು ಕೋ-ಆಪರೇಟೀವ್ ಸಂಸ್ಥೆಗೂ ಕೊಟ್ಟಿದ್ದೇವೆ. ಇದರಲ್ಲಿ ಕೋಆಪರೇಟಿವ್ ಸಂಸ್ಥೆಗಳು ಇದುವರೆಗೆ 226 ಲಕ್ಷ 9 ಸಾವಿರ ರೂಪಾಯಿ ಮರುಪಾವತಿ ಮಾಡಿದೆ. ಖಾದಿಬೋರ್ಡ್ 2 86 ಲಕ್ಷ ರೂಪಾಯಿಯನ್ನು ಮರುಪಾವತಿ ಮಾಡಿದೆ. 31-3-1968 ರವರೆಗೆ ಕಮೀಶನ್‌ಗೆ ಖಾದಿಬೋರ್ಡಿನಿಂದ ಓವರ್

(ಶ್ರೀ ಎ. ಪಿ. ಅಪ್ಪಣ್ಣ)

ಡ್ಯೂಸ್ 65 ಲಕ್ಷ 88 ಸಾವಿರ 103 ರೂಪಾಯಿ. ಮತ್ತು ಈ ಖಾದಿಬೋರ್ಡ್‌ಗೆ ಸಂಸ್ಥಾನದ ಸಹಕಾರ ಸಂಘದಿಂದ ಓವರ್‌ಡ್ಯೂಸ್ 86 ಲಕ್ಷ 6 ಸಾವಿರ 836 ರೂಪಾಯಿ. 1968-69ರಲ್ಲಿ ಗ್ರಾಂಟ್ ಮತ್ತು ಲೋನ್ 50 ಲಕ್ಷ ಚಿಲ್ಲರೆಯನ್ನು ಈ ಸಂಸ್ಥೆಗೆ ಕೊಟ್ಟಿದ್ದೇವೆ. ಇದರಲ್ಲಿ ಒಂದು ವಿಷಯವನ್ನು ಶ್ರೀಮಾನ್ ಜ್ವಾಲನಯ್ಯನವರು ಟೀಕೆ ಮಾಡಿದ್ದಾರೆ. ಅದನ್ನು ಅವರ ಗಮನಕ್ಕೆ ತರುತ್ತೇನೆ. ಖಾದಿ ಮತ್ತು ವಿಲೇಜ್ ಇಂಡಸ್ಟ್ರೀಸ್‌ನಲ್ಲಿ ಈಗ ಇರುವ ಮಾಹಿತಿ ಪ್ರಕಾರು ಸಾಧಾರಣವಾಗಿ ವರ್ಷಂಪ್ರತಿ ಖಾದಿಬೋರ್ಡ್ ಸಂಸ್ಥೆಯಲ್ಲಿರುವ ಜನರಿಗೆ ಖಾದಿಬೋರ್ಡ್ ಮೂಲಕ ಸಂಬಳದ ರೂಪವಾಗಿ 6 ಕೋಟಿ 83 ಲ ರೂಪಾಯಿಯನ್ನು ಕೊಡುತ್ತಿದ್ದೇವೆ. ಇದರಲ್ಲಿ ಕೆಲಸದಲ್ಲಿ ನಿರತರಾಗಿರುವ ಜನ 2 ಲಕ್ಷ 12 ಸಾವಿರ 930.

ಶ್ರೀ ಕೆ. ಎಚ್. ರಂಗನಾಥ್.—ಇದರಲ್ಲಿ ಕೊಟ್ಟಣದ ಅಕ್ಕಿ ಮಾಡುವವರು ಸೇರಿದ್ದಾರೆಯೇ ?

ಶ್ರೀ ಎ. ಪಿ. ಅಪ್ಪಣ್ಣ.—ಬಹುಶಃ ಇದರಲ್ಲಿ ಕೆಲಸ ಮಾಡುವವರು 2 ಲಕ್ಷ 12 ಸಾವಿರ 930 ಜನ ಏನು ಇದ್ದಾರೆ ಈ ಅಂಕಿ ಸಂಖ್ಯೆಗಳು ಪೂರ್ತಿ ಸರಿಯಾಗಿ ಇಲ್ಲದಿದ್ದರೂ 100ಕ್ಕೆ 50 ಭಾಗ ತೆಗೆದುಕೊಂಡರೂ ಕೂಡ ಉಳಿದವರಿಗೆ ಕೆಲಸ ಕೊಡುತ್ತಾ ಇದ್ದೇವೆ. ಈಗ ಖಾದಿಬೋರ್ಡ್‌ನ್ನು ತೆಗೆಯುವುದಾದರೆ ನಿರುದ್ಯೋಗಿಗಳಾಗಿರುವ ಜನರಿಗೆ ಬೇರೆ ಕೆಲಸವನ್ನು ಒದಗಿಸಲು ಮೊದಲು ಯೋಚನೆ ಮಾಡಿ, ಆಮೇಲೆ ನಾವು ಇದನ್ನು ತೆಗೆಯುವ ಯೋಚನೆ ಮಾಡಬೇಕು. ಅದಲ್ಲದೆ ಕಳೆದ ವರ್ಷಕ್ಕಿಂತಲೂ ಈ ವರ್ಷ ಕೆಲವು ಸಂಘ ಸಂಸ್ಥೆಗಳ ಮೇಲೆ ಕ್ರಮವನ್ನು ಕೈಕೊಂಡಿದ್ದೇವೆ. ಅದರ ಪಟ್ಟಿಯೂ ಇದೆ. ಇದರಲ್ಲಿ ನಾವು ಮುಂದಕ್ಕೆ ಹೋಗಿದ್ದೇವೆಯೇ ಹೊರತು ಹಿಂದಕ್ಕೆ ಹೋಗಿಲ್ಲ. ಅವರ ಮೇಲೆ ಹಾಕತಕ್ಕಂಥ ಕೇಸುಗಳಲ್ಲಿ ಕೆಲವು ಕನ್‌ವಿಕ್ಷನ್ ಆಗಿದೆ. ಇನ್ನೂ ಕೆಲವು ಸಂಸ್ಥೆಗಳ ಮೇಲೆ ಕಾರ್ಯಕ್ರಮ ಕೈಗೊಂಡಿದ್ದೇವೆ. ನಾವು ಅದನ್ನು ಸರಿಯಾದ ರೀತಿಯಲ್ಲಿ ನಡೆಸಿಕೊಂಡು ಹೋಗಬೇಕು ಎನ್ನುವ ಕಾರ್ಯಕ್ರಮ ಇಟ್ಟುಕೊಟ್ಟಿದ್ದೇವೆ.

ಶ್ರೀ ಎಸ್. ಶಿವಪ್ಪ.—ಖಾದಿಬೋರ್ಡ್‌ನಲ್ಲಿ ಮಹಿಳಾ ಸದಸ್ಯರು ಯಾರೂ ಇಲ್ಲವೇ ?

ಶ್ರೀ ಎ. ಪಿ. ಅಪ್ಪಣ್ಣ.—ಮಹಿಳಾದ ಸದಸ್ಯರೂ ಇದ್ದಾರೆ. ಶ್ರೀಮತಿ ಕೆ. ಎಸ್. ನಾಗರತ್ನಮ್ಮನವರು ಅವರ ಕ್ಷೇತ್ರದಲ್ಲಿ ಕೆಲವು ಸಂಸ್ಥೆಗಳು ಸ್ಪಿನ್ನರ್ಸ್‌ಗೆ ವಂಚನೆ ಮಾಡುತ್ತಿವೆ ಎನ್ನುವ ವಿಷಯ ಹೇಳಿದರು. ಅದನ್ನು ಗಮನಕ್ಕೆ ತೆಗೆದುಕೊಂಡು, ಅದರಲ್ಲಿ ಲೋಪದೋಷಗಳು ಏನು ಇವೆ ಅದನ್ನು ವಿಚಾರ ವಿನಿಮಯ ಮಾಡಿ ಪುನಃ ಅವರ ಮುಂದೆ ಒಂದು ಪಟ್ಟಿಯನ್ನು ಇಡಲಿಕ್ಕೆ ಬದ್ಧನಾಗಿದ್ದೇನೆ. ಈ ಸಂಸ್ಥೆ ಸಹಕಾರಿ ಖಾತೆಗೆ ಸಂಬಂಧ ಪಡುವುದರಿಂದ ಇದನ್ನು ವಿಚಾರವಿನಿಮಯ ಮಾಡಿ ತೊಂದರೆಗಳನ್ನು ನಿವಾರಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಹೆಚ್. ಎನ್. ನಂಜೇಗೌಡ.—ವರ್ಷಂಪ್ರತಿ ಕೊಟ್ಟಣದ ಅಕ್ಕಿಗೆ ಎಂದು ಭತ್ತ ಕೊಳ್ಳುವುದಕ್ಕೆ ಇಂಟರೆಸ್ಟ್ ಫ್ರೀ ಲೋನ್ ಎಂದು 22 ಲಕ್ಷ ರೂಪಾಯಿಗಳನ್ನು ಕಳೆದ ವರ್ಷ ಕೊಟ್ಟಿದ್ದಾರೆ. ನಮಗೆ ಖಚಿತವಾಗಿ ತಿಳಿದು ಬಂದಿದೆ, ಇದನ್ನು ಹಂಚಬೇಕಾದವರೆ ನಿಮ್ಮಲ್ಲಿ ಒಬ್ಬ ಆಫೀಸ್ ಮ್ಯಾನೇಜರ್ ಆಗಿರತಕ್ಕಂಥಾವರು, ನಿಮ್ಮ ಪೈಕಿ ಮಂತ್ರಿಗಳಿಗೆ ಹತ್ತಿರ ಸಂಬಂಧೀಕರು. ಹಾಸನಕ್ಕೆ 4 ಲಕ್ಷ, ಬೆಳಗಾಂಗೆ 10 ಲಕ್ಷ ಈ ರೀತಿ ಜಿಲ್ಲಾವಾರು ಹಂಚಿದ್ದೀರಿ. ಮಂಗಳೂರಿನವರೇ ಆಗಲಿ, ಮೈಸೂರಿನವರೇ ಆಗಲಿ, ಹಾಸನದವರೇ ಆಗಲಿ ಯಾರೇ ಆಗಲಿ ಅವರು ಭತ್ತ ಕೊಳ್ಳಬೇಕಾದರೆ ಅವರು ಗಂಗಾವತಿಯಲ್ಲೇ ಹೋಗಿ ಕೊಂಡುಕೊಳ್ಳಬೇಕು. ಅವರು ಅಲ್ಲೇ ಹೋಗಿ ಭತ್ತವನ್ನು ಕೊಂಡುಕೊಳ್ಳಬೇಕಾದರೆ ಇದು ಭ್ರಷ್ಟಾಚಾರ ಆಗುವುದಿಲ್ಲವೇ ? ಮತ್ತು ಅವರು ಅಲ್ಲಿ ಹೋಗಿ ಕೊಂಡುಕೊಂಡರೆ ಅಲ್ಲಿಂದ ಬರುವ ಲಾರಿ ಟ್ರಾನ್ಸ್‌ಪೋರ್ಟೇಷನ್ ಛಾರ್ಜ್ ಇವೆಲ್ಲಾ ಕೊಡಬೇಕು. ಶ್ರೀಕಂಠೇಶ್ವರ ಟ್ರೇಡಿಂಗ್ ಕಂಪನಿಯವರು ಟ್ರಾನ್ಸ್‌ಪೋರ್ಟೇಷನ್ ಮಾಡುವಾಗ ಅವರಿಗೆ 10-12 ರೂಪಾಯಿ ಜಾಸ್ತಿ ಸೇರಿಸಿ ಬಿಲ್ ಹಾಕಿರುವುದನ್ನು ಖುದ್ದು ನೋಡಿದ್ದೇನೆ. ಇದು ಸರಿಯೇ ? ಇದರ ಮೇಲೆ ಏನು ಕಾರ್ಯಕ್ರಮ ಕೈಗೊಳ್ಳುತ್ತೀರಿ ?

ಶ್ರೀ ಎ. ಪಿ. ಅಪ್ಪಣ್ಣ.—ಅದರ ಬಗ್ಗೆ ಮಾನ್ಯ ಸದಸ್ಯರು ವಿವರಣೆ ಕೊಟ್ಟು ಆ ಸಂಸ್ಥೆ ಯಾವುದು ಎಂದು ನನ್ನ ಗಮನಕ್ಕೆ ತಂದರೆ ವಿಚಾರಮಾಡುತ್ತೇನೆ.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಸ್ವಾಮಿ, ಖಾದಿ ಗ್ರಾಮೋದ್ಯೋಗ ಭವನದ ಮ್ಯಾಕ್ಸ್‌ಮಿನ್ ನೋಡಿದರೆ ಯಾವ ಯಾವ ಸೊಸೈಟಿಗಳಿಂದ ಎಷ್ಟೆಷ್ಟು ಬರಬೇಕು ಎನ್ನುವುದನ್ನು ಕೊಟ್ಟಿದೆ, 1 ಕೋಟಿ 40 ಲಕ್ಷ ರೂಪಾಯಿಯಷ್ಟು ಬರಬೇಕಾಗುತ್ತದೆ. ಅದುದರಿಂದ ಮ್ಯಾಕ್ಸ್‌ಮಿನ್‌ನಲ್ಲಿ

ಕೊಟ್ಟಿರುವ ಅಂಕಿಸಂಖ್ಯೆಗಳು ಸರಿಯಾಗಿದೆಯೇ ಅಥವಾ ನೀವು ಕೊಟ್ಟಿರುವ ಅಂಕಿಸಂಖ್ಯೆಗಳು ಸರಿಯೇ ?

ಶ್ರೀ ಎ. ಪಿ. ಅಪ್ಪಣ್ಣ.—ನೀವು ಯಾವುದೋ ಒಂದು ಕಾಲದ ಪುಸ್ತಕವನ್ನು ಓದಿ ಫಿಗರ ಹೇಳುತ್ತೀರಿ. ಅದು ಸರಿಯುಲ್ಲ. ಖಾದಿಬೋರ್ಡ್ ಈಗ ಇಂಪ್ರೂವ್ ಅಗಿದೆ. ಈಗ ನಾನು ಕೊಟ್ಟಿರುವ ಫಿಗರ್ಸ್ ಅಪ್-ಟು-ಡೇಟ್ ಅಗಿದೆ.

Sri H. SIDDAVEERAPPA.—I want to tell the Hon'ble Minister, that a large number of technically trained young men who come from abroad and who want to start small industries in the State, do not requires any financial assistance, but what they want is that the State Government should help them in getting the necessary required machinaries which are not available in India, but the Government of India is not in favour of importing the machineries. May I request you to take necessary action in this behalf ?

Sri A. P. APPANNA.—It is a fact and one or two such cases have been brought to the notice of the department. We have taken up the matter with the Government of India. The Government of India rejected these cases on the ground that the materials are not indigenously manufactured. By oversight or something they might have rejected. Anyhow we have again taken up the matter with the Government of India and we will certainly help those who are specialised and technically trained and see that they are allowed to start industries.

Sri M. S. KRISHNAN.—In Rajajinagar Industrial Estate they are not able to get raw-materials, as the raw-materials are being given only to some marwaries etc. who are having licences. May I request you to see that these raw-matarials are given to some genuine industrialists instead of giving them to marwarils etc. ? Secondly, the Sheet Metal works particularly in the I. T. I. is being got done from Bombay. Will the hon'ble Minister use his influence to see that this work is entrusted to some local industrialists in the State itself ?

7-30 P.M.

My another point is, that there is a general complaint by entrepreneurs, particularly in Rajajinagar Industrial Estate, that there is much delay in the disposal of loan applications. Will it not be possible for the Government to see that these loan applications are straightaway accepted by the Government on the recommendations of the Administrative Officer, as is being done in the States of Andhra Pradesh and Maharashtra ?

Sri A. P. APPANNA.--After decontrol, there was shortage of raw-materials. The Hindustan Steels Ltd., and the Tatas were directly releasing their production through their agents located in various parts of the State and in turn some black marketeers were keeping it and supplying to Small Scale Industrialists at higher prices. The Mysore Small Industries Corporation is now taking up the matter directly. I am glad to say that recently the Minister for Steel has allotted a substantial quota of pig iron and other sheets and we are making

(SRI A. P. APPANNA)

arrangements to see that this hardship is removed. But we cannot take the entire responsibility, as these items have been decontrolled and they have to be bought from the open market also, sometimes. I hope we would be successful in improving the position during the current year.

Regarding the development of ancillary industries and pig iron industries we are already conducting seminars regarding the products that could be manufactured in these industries. We are making them display the components that are manufactured. We have also developed certain ancillaries in some of the industries. There may also be cases in which they may be getting the materials from outside because of the fact they have to buy from the places where they could get at cheaper rates and thereby able to keep up the cost of production also at a cheaper rate. Anyhow, we will take into account the question of entrusting the sheet metal works to local industrialists in the State itself, as was suggested by hon. Member Sri M. S. Krishnan.

Regarding the disposal of loan applications, at present, under the State Aid to Industries Act we have cut down certain procedures to a large extent and we have simplified it. We are relying on the recommendations of the Assistant Director of Industries in sanctioning these loans. But so far as the units within the Industrial Estates are concerned, we cannot rely on the recommendations of the Administrative officer, as he is not an employee of the Government, but only an employee of the Mysore State Small Industries Corporation. The present procedure also does not permit us to rely on the recommendations of the Administrative Officer and in these cases also we are relying on the recommendations of the Assistant Director of Industries and we cannot change this.

ಶ್ರೀ ಬಿ. ಗಂಗಣ್ಣ.—ಎ ಮತ್ತು ಬಿ ಷೆಡ್ಯೂಲ್ ಪ್ರಕಾರ ಕೈಗಾರಿಕಾ ನೀತಿಯನ್ನು ಹಾಕಿಕೊಂಡಿದ್ದೀರಿ. ಆ ಪ್ರಕಾರ ಗ್ರಾಮಾಂತರ ಕೈಗಾರಿಕೆಗಳು ಎಷ್ಟು ಇರಬೇಕು ಎಂದು ಇದೆ. ಆ ಪ್ರಕಾರ ಮಾಡುವುದಕ್ಕೆ ಏನಾದರೂ ಯೋಜನೆ ಹಾಕಿಕೊಂಡಿದ್ದೀರಾ ?

ಶ್ರೀ ಎ. ಪಿ. ಅಪ್ಪಣ್ಣ.—ಗ್ರಾಮಾಂತರ ಪ್ರದೇಶಗಳಲ್ಲಿ ಸಣ್ಣ ಕೈಗಾರಿಕೆಯನ್ನು ಸ್ಥಾಪನೆ ಮಾಡುವಂಥ ವಿಚಾರದಲ್ಲಿ ಸರ್ಕಾರವೇ ನೇರವಾಗಿ ಗ್ರಾಮಾಂತರ ಪ್ರದೇಶದಲ್ಲಿ ಕೈಗಾರಿಕೆಯನ್ನು ಸ್ಥಾಪನೆ ಮಾಡುವ ವಿಚಾರವನ್ನು ಇಟ್ಟುಕೊಂಡಿಲ್ಲ. ಆದರೆ ಯಾರಾದರೂ ಗ್ರಾಮಾಂತರ ಪ್ರದೇಶದಲ್ಲಿ ಸಣ್ಣ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಕ್ಕೆ ಮುಂದೆ ಬಂದರೆ ಅವರಿಗೆ ಉತ್ತೇಜನ ಕೊಡಲು ಸರ್ಕಾರ ಮುಂದೆ ಬರುತ್ತದೆ.

ಶ್ರೀ ಕೆ. ಪ್ರಭಾಕರ್ (ವರ್ತೂರು).—ಗ್ರಾಮಾಂತರ ಪ್ರದೇಶದಲ್ಲಿ ಸಣ್ಣ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವ ಧೋರಣೆ ಸರ್ಕಾರಕ್ಕೆ ಇಲ್ಲ ಎಂದು ಹೇಳಿದರು. ಪಟ್ಟಣಗಳು ಅನಾವಶ್ಯಕವಾಗಿ ಬೆಳೆಯುತ್ತಿರುವುದರಿಂದ ಕೈಗಾರಿಕೆಗಳನ್ನು ಪಟ್ಟಣಗಳಲ್ಲಿ ಹೆಚ್ಚಿಸುವುದನ್ನು ಕಡಮೆಮಾಡಿ ಹಳ್ಳಿಗಳಲ್ಲಿ ಕೈಗಾರಿಕೆಗಳನ್ನು ಬೆಳೆಸಿದರೆ ಹತ್ತಾರು ವರ್ಷಗಳಲ್ಲಿ ಹಳ್ಳಿಗಳೂ ಅಭಿವೃದ್ಧಿಗೆ ಬರುತ್ತವೆ ಎಂದು ಹೇಳುತ್ತಿದ್ದೇನೆ. ಈ ವಿಚಾರದಲ್ಲಿ ಸರ್ಕಾರದ ಧೋರಣೆ ಏನು ಮತ್ತು ಆ ಬಗ್ಗೆ ಸರ್ಕಾರ ಕೈಗೊಂಡಿರತಕ್ಕ ಕಾರ್ಯಕ್ರಮವೇನು ಎನ್ನುವುದನ್ನು ಕೈಗಾರಿಕಾ ಮಂತ್ರಿಗಳು ಹೇಳಬೇಕು ಎಂದು ಕೇಳುತ್ತೇನೆ.

ಶ್ರೀ ಎ. ಪಿ. ಅಪ್ಪಣ್ಣ.—ಇಂಡಸ್ಟ್ರಿಯಲ್ ಎಸ್ಟೇಟುಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ತೆರೆಯುವುದು, ಕೈಗಾರಿಕಾ ಅಭಿವೃದ್ಧಿ ಬ್ಲಾಕ್ಸ್ ಮಾಡುವುದು, ಗ್ರಾಮಾಂತರ ಪ್ರದೇಶಗಳಲ್ಲಿ ಕೈಗಾರಿಕೆಯನ್ನು ಅಭಿವೃದ್ಧಿ ಪಡಿಸಲು ಪ್ರತಿ ಜಿಲ್ಲೆಗೂ ಅಸಿಸ್ಟೆಂಟ್ ಡೈರೆಕ್ಟರನ್ನು ಹಾಕಿ

ಗ್ರಾಮಾಂತರ ಪ್ರದೇಶಗಳಲ್ಲಿ ಸ್ಥಾಪನೆ ಮಾಡುವಂಥ ಕೈಗಾರಿಕೆಗಳಿಗೆ ಉತ್ತೇಜನ ಕೊಡುವುದು, ಪ್ರತಿ ಜಿಲ್ಲೆಯಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಯಾವ ಯಾವ ಕೈಗಾರಿಕೆಗಳನ್ನು ಸ್ಥಾಪನೆ ಮಾಡಬಹುದು ಎನ್ನುವುದಕ್ಕೆ ಪ್ರಾಜೆಕ್ಟ್ ರಿಪೋರ್ಟ್ ತಯಾರುಮಾಡುವುದು, ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಯಾವ ಯಾವ ಸಲಕರಣೆಗಳನ್ನು ಮತ್ತು ಸಹಾಯವನ್ನು ಸರ್ಕಾರದಿಂದ ಕೊಡಲಾಗುತ್ತದೆ ಎನ್ನುವ ವಿಚಾರವನ್ನು ಜನತೆಗೆ ತಿಳಿಸುವಂಥ ಕಾರ್ಯಕ್ರಮವನ್ನು ಹಾಕಿಕೊಳ್ಳಲಾಗಿದೆ. ಸಣ್ಣ ಕೈಗಾರಿಕೆಯನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಸರ್ಕಾರದವರೇ ನೇರವಾಗಿ ಸ್ಥಾಪನೆ ಮಾಡಬೇಕು ಎನ್ನುವುದು ಸಾಧ್ಯವಾಗದಂಥ ಮಾತು.

ಶ್ರೀ ಎಂ. ರಾಜಶೇಖರಮೂರ್ತಿ.—ಕೈಗಾರಿಕೆಗಳು ಒಂದೇ ಸ್ಥಳದಲ್ಲಿ ಕೇಂದ್ರೀಕೃತ ಆಗಬಾರದು ಎಂಬುದು ಮುಖ್ಯವಾದ ಪ್ರಶ್ನೆ. ಸರಕಾರ ಇದನ್ನು ಆಲೋಚನೆಮಾಡಿ ಕಾರ್ಯಕ್ರಮ ಕೈಕೊಂಡಿರುವ ಫಲವಾಗಿ ಬೆಂಗಳೂರಿನಲ್ಲಿ ಮಾತ್ರವಲ್ಲದೆ ಮೈಸೂರು ರಾಜ್ಯದ ಅನೇಕ ಕಡೆಗಳಲ್ಲಿ ಕೈಗಾರಿಕೆಗಳು ಸ್ಥಾಪಿಸಲ್ಪಡುತ್ತಿವೆ. ಸುಮಾರು ಹನ್ನೊಂದು ಕಡೆ ಗ್ರೋತ್ ಏರಿಯಾ ಎಂದು ಡಿಕ್ಲೇರ್ ಮಾಡಿದೆ, ಶಿವಮೊಗ್ಗ, ಭದ್ರಾವತಿ, ಹುಬ್ಬಳ್ಳಿ, ಮೈಸೂರು, ದಾಂಡೇಲಿ, ಹರಿಹರ, ದಾವಣಗೆರೆ ಮುಂತಾದ ಕಡೆಗಳಲ್ಲಿ ಡೆವಲಪ್‌ಮೆಂಟ್ ಕಮಿಟಿಯ ಮೂಲಕ ಜಮೀನನ್ನು ಸ್ವಾಧೀನ ಪಡಿಸಿಕೊಂಡು ಕೈಗಾರಿಕೆಗಳಿಗೆ ಅವಕಾಶ ಮಾಡಲಾಗಿದೆ. ಬೆಳಗಾಂ ಹತ್ತಿರ ಅಲ್ಯೂಮಿನಿಯಂ ಕಾರ್ಖಾನೆ, ಹುಬ್ಬಳ್ಳಿಯಲ್ಲಿ ಕಿರ್ಲೋಸ್ಕರ್ ಕಾರ್ಖಾನೆಯ ಎರಡನೆಯ ಯೂನಿಟ್, ಹರಿಹರ ದಾವಣಗೆರೆಯ ಬಳಿ ಬಿರ್ಲಾ ಕಾರ್ಖಾನೆ, ಭದ್ರಾವತಿ-ಶಿವಮೊಗ್ಗ ಕೈಗಾರಿಕಾ ವಲಯದಲ್ಲಿ 11 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಸ್ಟೈನ್‌ಲೆಸ್ ಉಕ್ಕಿನ ಕಾರ್ಖಾನೆ ಮುಂತಾದುವು ಬರಲಿವೆ. ಹೀಗೆ ಬೆಂಗಳೂರು ಒಂದೇ ಕಡೆಯಲ್ಲದೆ ದೇಶದ ಎಲ್ಲಾ ಕಡೆಯೂ ಕೈಗಾರಿಗಳ ಬೆಳವಣಿಗೆಗೆ ಅವಕಾಶ ಮಾಡಲಾಗಿದೆ. ಇದರಿಂದ ಉತ್ಪತ್ತಿ ಹೆಚ್ಚುವುದಲ್ಲದೆ ಅನೇಕರಿಗೆ ಕೆಲಸ ದೊರೆಯುವುದು. ಮತ್ತು ನಗರದ ಬೆಳವಣಿಗೆ ಕಡಮೆಯಾಗಿ ಅದರ ಸಮಸ್ಯೆಗಳೂ ಕೂಡ ಕಡಮೆಯಾಗುವುವು. ಮೈಸೂರಿಗೆ ಟೈರ್ಸ್ ಅಂಡ್ ಟ್ಯೂಬ್ಸ್ ಮ್ಯಾನುಫ್ಯಾಕ್ಚರಿಂಗ್ ಕಂಪೆನಿಯು ಬರಲಿದೆ. ಹೀಗೆ ಬೆಂಗಳೂರು ಒಂದೇ ಕಡೆಯಲ್ಲದೆ ಬೇರೆ ಕಡೆಗಳಲ್ಲೂ ಕೈಗಾರಿಕೆಗಳ ಬೆಳವಣಿಗೆಯಾಗಲು ಅವಕಾಶ ಕಲ್ಪಸಲಾಗಿದೆ. ಹಳ್ಳಿಗಾಡುಗಳಲ್ಲಿ ದೊಡ್ಡ ಕೈಗಾರಿಕೆಗಳನ್ನು ಸ್ಥಾಪಿಸುವುದಕ್ಕಾಗುವುದಿಲ್ಲ, ಇದು ಹೋಟೆಲು, ಶಾಲಾ ಕಾಲೇಜುಗಳ ವಿಷಯವಲ್ಲ, ಕೈಗಾರಿಕೆ ಪ್ರಾರಂಭಿಸಬೇಕಾದರೆ ಕೆಲವು ಸೌಲಭ್ಯಗಳು ಬೇಕು, ಟ್ರಾನ್ಸ್‌ಪೋರ್ಟ್ ಫೆಸಿಲಿಟೀಸ್ ಇರಬೇಕು. ರಾಮೆಟೀರಿಯಲ್ಸ್ ದೊರೆಯಬೇಕು. ಹೀಗೆ ಬೇಕಾದ ಸೌಲಭ್ಯಗಳಿರುವ ಕಡೆ ಕೈಗಾರಿಗಳನ್ನು ಸ್ಥಾಪಿಸಬಹುದೇ ಹೊರತು ಎಲ್ಲಾ ಕಡೆಯೂ ಸ್ಥಾಪನೆ ಮಾಡಲು ಸಾಧ್ಯವಾಗುವುದಿಲ್ಲ.

ಶ್ರೀ ಬಿ. ರಾಚಯ್ಯ (ವ್ಯವಸಾಯ ಶಾಖೆಯ ಮಂತ್ರಿಗಳು).—ಸನ್ಮಾನ್ಯ, ಅಧ್ಯಕ್ಷರೇ, ರೇಷ್ಮೆ ಇಲಾಖೆಯಮೇಲೆ ಆರು ಜನ ಸದಸ್ಯರು ಮಾತನಾಡಿದ್ದಾರೆ ಮತ್ತು ಮೂರು ಜನ ಸದಸ್ಯರು ಖೋತಾ ನಿರ್ಣಯ ಕಳಿಸಿದ್ದಾರೆ. ಖೋತಾ ನಿರ್ಣಯಗಳಲ್ಲಿ ಕೇಳಿರುವ ಅಂಶಗಳು ಮತ್ತು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರುವ ವಿಷಯಗಳು ಬಹಳಮಟ್ಟಿಗೆ ಅಷ್ಟೊಂದು ಕಟುತರವಾಗಿಲ್ಲ. ರಚನಾತ್ಮಕವಾಗಿ ಕೆಲವರು ವಿಷಯಗಳನ್ನು ಪ್ರಸ್ತಾಪಿಸಿದ್ದಾರೆ. ಆದರೂ ಕೂಡ ಇದನ್ನು ನೋಡಿದಾಗ ಈ ಇಲಾಖೆ ಎಲ್ಲಾ ಕಡೆ ಸರಿಯಾಗಿ ನಡೆಯುತ್ತಿದೆ, ಮಾಡುವ ಕೆಲಸ ಸರಿಯಾಗಿದೆ ಎಂದು ಹೇಳುವುದಕ್ಕೆ ನಾನು ನಿಂತಿಲ್ಲ. ಈ ರೇಷ್ಮೆ ಬೆಳೆ ಒಂದು ವಿಧದಲ್ಲಿ ವ್ಯವಸಾಯವೂ ಹೌದು, ಮತ್ತೊಂದು ವಿಧದಲ್ಲಿ ಕೈಗಾರಿಕೆಯೂ ಹೌದು. ಈ ದೃಷ್ಟಿಯಿಂದ ನಮ್ಮ ಮೈಸೂರು ಸಂಸ್ಥಾನದಲ್ಲಿ ರೇಷ್ಮೆಯನ್ನು ಹೊರದೇಶದ ಶೇಕಡ ನಾಲ್ಕರಷ್ಟು ನಾವು ಉತ್ಪತ್ತಿಮಾಡುತ್ತಿದ್ದೇವೆ. ಇದು ನಮ್ಮ ಸಂಸ್ಥಾನದ ಶೇಕಡ 5 ರಷ್ಟು ಜನಾಂಗಕ್ಕೆ ಉದ್ಯೋಗವನ್ನು ಒದಗಿಸುವ ಕೈಗಾರಿಕೆಯಾಗಿದೆ. ಬಹುಶಃ ಬೇಸಾಯಗಾರರಿಗೆ ಮಳೆಗಾಲವಿಲ್ಲದಿರುವಾಗ, ಬರಗಾಲದಲ್ಲಿ ಇದೊಂದು ಕಸುಬಾಗಿ ಅವರಿಗೆ ಅನ್ನ ಕೊಟ್ಟಿರುವ ಕೈಗಾರಿಕೆ ಆಗಿರುವುದರಿಂದ ಕಳೆದ ನಾಲ್ಕಾರು ವರ್ಷಗಳಿಂದ ನಾವೇನು ದಿಟ್ಟತನದ ಕಾರ್ಯಕ್ರಮ ಈ ಉದ್ಯಮದ ಬಗ್ಗೆ ಕೈಕೊಂಡಿದ್ದರೂ ಫಿಲೇಚರ್‌ನಲ್ಲಿ ಆಗುವ ನಷ್ಟವನ್ನು ಕಡಮೆ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಮಾನವೀಯತೆಯ ದೃಷ್ಟಿಯಿಂದ ಸ್ವಲ್ಪಮಟ್ಟಿಗೆ ಈ ಕೈಗಾರಿಕೆಯನ್ನು ಮುಂದುವರೆಸುವ ಜವಾಬ್ದಾರಿ ನಮ್ಮ ಮೇಲಿದೆ ಎಂದು ಒಪ್ಪಿಕೊಳ್ಳಬೇಕಾಗಿದೆ. ಆದರೂ ಕೂಡ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದಹಾಗೆ ನಮ್ಮ ಮೈಸೂರಿನಲ್ಲಿ ಸುಮಾರು 80 ಭಾಗ ರೇಷ್ಮೆ ತಯಾರು ಮಾಡುತ್ತಿದ್ದೇವೆ. ಅದರಲ್ಲಿ ಕೇವಲ ಮಳೆಯ ಆಶ್ರಯದಲ್ಲಿ ಹೆಚ್ಚು ಭಾಗ ಇದೆ. ಒಂದು ಲಕ್ಷ 95 ಸಾವಿರ ಎಕರೆ ಹಿಪ್ಪುನೇರಳೆ ಬೆಳೆಯಿದೆ, 17 ಸಾವಿರ ಎಕರೆಯಲ್ಲಿ ನೀರಾವರಿಯಿಂದ ಹಿಪ್ಪು ನೇರಳೆ ಬೆಳೆಯುವುದಿದೆ, ನೀರಾವರಿ ಪ್ರದೇಶದಲ್ಲಿ ಒಂದು ಎಕರೆಗೆ ಸುಮಾರು 10 ಸಾವಿರದಿಂದ 13 ಸಾವಿರ ಕೆ.ಜಿ. ಸೊಪ್ಪು ಬೆಳೆಯಬಹುದು, ಮಳೆ ಆಶ್ರಯ

(ಶ್ರೀ ಬಿ. ರಾಚಯ್ಯ)

ದಲ್ಲಿರುವ ಭೂಮಿಯಲ್ಲಿ ಒಂದು ಎಕರೆಗೆ ಸುಮಾರು 3 ಸಾವಿರದಿಂದ ಮೂರೂವರೆ ಸಾವಿರ ಕೆ.ಜಿ. ವರೆಗೆ ಸೊಪ್ಪು ಬೆಳೆಯಬಹುದು. ಬೆಳೆಯುವ ಸೊಪ್ಪಿಗೆ ಬೆಲೆಯನ್ನು ಫ್ಯಾಕ್ಟ್ಸ್ ಫೈಂಡಿಂಗ್ ಕಮಿಟಿ ನಿರ್ಧರಿಸಿದೆ, ಆ ಸಮಿತಿಯ ವರದಿ ಪ್ರಕಾರ ಒಂದು ಕೆ.ಜಿ. ಸೊಪ್ಪಿಗೆ 7 ಪೈಸ ಬೆಲೆ ಇದೆ, ನೀರಾವರಿ ಇರುವ ಕಡೆ 9 ಪೈಸೆ ಇದೆ. ಆದುದರಿಂದ ರೇಷ್ಮೆ ವ್ಯವಸಾಯ ಮಾಡುವವರಿಗೆ ಒಂದು ಕೆ.ಜಿ ಗೂಡಿಗೆ 4 ರೂಪಾಯಿ 44 ಪೈಸೆ ಕೊಟ್ಟರೆ ಸಾಕಾಗಬಹುದು ಎಂದು ವರದಿ ಮಾಡಿದ್ದಾರೆ. ಆದರೆ ಇತರ ಆಹಾರ ಪದಾರ್ಥಗಳ ಬೆಲೆ ಮತ್ತು ಕೈಗಾರಿಕಾ ವಸ್ತುಗಳ ಬೆಲೆ ನೋಡಿದಾಗ ಇದು ಕಡಮೆಯಾಗಬಹುದು ಅನ್ನಿಸುವುದು. ಈ ದೃಷ್ಟಿಯಿಂದ ನಾವು ರೇಷ್ಮೆ ಮಾರುಕಟ್ಟೆಯನ್ನು ತೆರೆದಾಗ ಬಹುಶಃ ಗೂಡಿನಲ್ಲಿರುವ ನೂಲಿನ ಉದ್ದ ಮತ್ತು ಬಣ್ಣ ನೋಡಿ ಆರಿಸಿ ಅದರ ಪ್ರಕಾರ ಬೆಲೆ ಕೊಡಲಿ ಎಂದು ತಿಳಿಸಿದೆವು. ಆದರೆ ಈ ಒಂದು ದೃಷ್ಟಿಯಿಂದ ಹೇಳುವುದಾದರೆ ಇದರಿಂದ ಹೆಚ್ಚಾಗಿ ನಮ್ಮ ಫಿಲೇಚರ್‌ಗೆ ಅಧಿಕವಾಗಿ ನಷ್ಟವಾಗುವುದಕ್ಕೆ ಅವಕಾಶವಾಯಿತು. ಕಾರಣ ನಾವು ಉತ್ಪತ್ತಿ ಮಾಡುವ 16 ಕೋಟಿ ಬೆಲೆ ಬಾಳುವ ಗೂಡಿನಲ್ಲಿ ಕೇವಲ 2 ಕೋಟಿ ಬೆಲೆ ಬಾಳುವದು ಮಾರುಕಟ್ಟೆಯಲ್ಲಿ ಬೆಲೆಯಾಗುತ್ತಿತ್ತು. ಅದರಲ್ಲಿ ಒಂದೂಮುಕ್ಕಾಲು ಕೋಟಿ ನಮ್ಮ ಫಿಲೇಚರ್‌ನಲ್ಲಿ ಕೊಳ್ಳುತ್ತಿದ್ದೆವು. ಇದರಿಂದ ಶೇಕಡ ಒಂದೂವರೆಯಷ್ಟು ಮಾರುಕಟ್ಟೆಗೆ ಕೊಡಬೇಕಾಗಿರುವುದರಿಂದ ನಷ್ಟಕ್ಕೆ ಕಾರಣವಾಗಿದೆ.

ರಿಸರ್ಚ್‌ನಲ್ಲಿ ಸಾಕಷ್ಟು ಪ್ರಗತಿ ಸಾಧಿಸಿಲ್ಲ ಎಂಬುದನ್ನು ನಾನು ಒಪ್ಪಿಕೊಳ್ಳಬೇಕು. ಕೇಂದ್ರ ಸರ್ಕಾರಕ್ಕೆ ಸಂಶೋಧನೆ ಕೆಲಸವನ್ನು ವಹಿಸಿದ್ದೇವೆ. ಮೊದಲು ಶ್ರೀ ಸಿದ್ಧವೀರಪ್ಪನವರು ಈ ಕೈಗಾರಿಕೆಯ ಜವಾಬ್ದಾರಿಯನ್ನು ಹೊತ್ತಾಗ ರೇಷ್ಮೆ ಸಂಶೋಧನಾಲಯವನ್ನು ಚನ್ನಪಟ್ಟಣದಲ್ಲಿ ಸ್ಥಾಪಿಸಲಾಯಿತು. ನಂತರ ಅದು ಸರಿಯಾದ ಸ್ಥಳವಲ್ಲ, ಅಲ್ಲಿ ಬೆಳೆಯುವ ಸೊಪ್ಪಿನಿಂದ ಸಂಶೋಧನೆ ನಡೆಸುವುದಕ್ಕಾಗುವುದಿಲ್ಲ ಎಂದು ಕೇಂದ್ರ ಸರ್ಕಾರದ ತಜ್ಞರು ಹೇಳಿದ ಮೇಲೆ, ಮೈಸೂರಿಗೆ ಸಂಶೋಧನಾಲಯವನ್ನು ವರ್ಗ ಮಾಡಬೇಕೆಂದು ಒತ್ತಾಯ ಮಾಡಿದಮೇಲೆ ಹಾಗೆ ಮಾಡಲಾಯಿತು ಅಲ್ಲಿಗೆ ಹೋದಮೇಲೆ ಒಳ್ಳೆಯ ಫಾರಂ ಬಿಟ್ಟುಕೊಡಲಾಯಿತು. ಯಾವ ರೀತಿಯಲ್ಲಿ ಹೈಬ್ರಿಡ್ ಮೈಜ್, ಜೋಳ ಮತ್ತು ಮೆಕ್ಸಿಕನ್ ವೀಟ್ ಮುಂತಾದುವುಗಳ ಬೇಸಾಯದಲ್ಲಿ ಒಳ್ಳೆಯ ತಳಿಯನ್ನು ಕಂಡುಹಿಡಿದಿದ್ದಾರೆ. ಹಾಗೆ ಸಂಶೋಧಕರು ಹೊಸದಾಗಿ ಮೂರು ತಳಿಯನು ಕಂಡುಹಿಡಿದಿದ್ದಾರೆ. ಮೈಸೂರು ಪ್ರಿನ್ಸ್, ಕೊಳ್ಳೆಗಾಲದ ಜವಾನ್ ಮತ್ತು ಕೋಲಾರ ಗೋಲ್ಡ್ ಎಂಬ ಮೂರು ಹೊಸ ತಳಿ ಕಂಡುಹಿಡಿದಿರುವುದಕ್ಕೆ ಟ್ರಯಲ್ ಕೊಟ್ಟರು. ಅದನ್ನು ರೈತರಿಗೆ ಕೊಟ್ಟಾಗ ಬೆಳೆ ಸರಿಯಾಗಿ ಆಗಲಿಲ್ಲ ; ಅದರಿಂದ ರೈತರಿಗೆ ಉತ್ತೇಜನ ಬರಲಿಲ್ಲ. ಕೇಂದ್ರದ ಸಂಶೋಧನಾಲಯದವರು ಕೋಲಾರದಲ್ಲಿ ಒಂದು ಬ್ರಾಂಚನ್ನು ತೆಗೆದು ಕಾರ್ಯ ನಡೆಸುತ್ತಾ ಇದ್ದಾರೆ, ಹೆಚ್ಚು ಇಳುವರಿ ಬರತಕ್ಕ ನೂಲಿನ ಗೂಡನ್ನು ಕೊಟ್ಟು ಹೆಚ್ಚು ಬೀಜವನ್ನು ತಯಾರು ಮಾಡುವುದರಲ್ಲಿ ಇನ್ನೂ ವಿಫಲರಾಗಿದ್ದೇವೆ ಎಂಬ ಮಾತನ್ನು ಒಪ್ಪಿಕೊಳ್ಳುತ್ತಾ ಇದ್ದೇನೆ. ಇದನ್ನು ಸರಿಯಾಗಿ ಮಾಡಿದ್ದೇ ಆದರೆ ಫಿಲೇಚರ್ಸ್‌ನಲ್ಲಿ ಆಗತಕ್ಕ ನಷ್ಟವನ್ನು ಕಡಿಮೆ ಮಾಡುವುದಕ್ಕೆ ಆಗುತ್ತದೆ. ಶ್ರೀಮಾನ್ ದೇವರಾಜ ಅರಸ್‌ರವರು ಹೇಳಿದ ಶ್ರೀಮಾನ್ ಟ್ಯೂಡರ್ ಅನ್ನುವವರು ನಮ್ಮ ಸಂಸ್ಥಾನಕ್ಕೆ ಬೇಕಾಗಿರತಕ್ಕ ಹಣವನ್ನು ಒದಗಿಸಿಕೊಡುತ್ತೇನೆ ಆದರೆ ಮೈಸೂರು ಸಂಸ್ಥಾನದಲ್ಲಿ ಉತ್ಪಾದನೆಯಾಗತಕ್ಕ ರೇಷ್ಮೆಯನ್ನು, ವೇಸ್ಟ್‌ಸಿಲ್ಕನ್ನು ನಾನು ಹೇಳತಕ್ಕ ಏಜೆಂಟ್ ಮುಖಾಂತರ ಕೊಡಿಸಿಕೊಡಬೇಕು ಅನ್ನತಕ್ಕ ಒಂದು ಸಲಹೆಯನ್ನು ಕೊಟ್ಟಿದ್ದಾರೆ. ಕೇಂದ್ರ ಸರ್ಕಾರದ ಜೊತೆಯಲ್ಲಿ ಚರ್ಚೆ ಮಾಡಿದಾಗ ಮನಾಪಲಿಕೊಡುವುದಕ್ಕಾಗುವುದಿಲ್ಲ. ರಾಜ್ಯಾಂಗ ಬದ್ಧವಾಗಿ ಆ ರೀತಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಎಂಬ ನಿರ್ಣಯಕ್ಕೆ ಅವರು ಬಂದಿದ್ದರಿಂದ ಅದನ್ನು ಮುಂದುವರಿಸುವುದಕ್ಕೆ ಸಾಧ್ಯವಾಗಲಿಲ್ಲ. ಆದರೂ ಕೂಡ ಮೈಸೂರು ಸಂಸ್ಥಾನದಲ್ಲಿ ಹೆಚ್ಚು ಬಾವಿಗಳನ್ನು ಈ ಪ್ರದೇಶಗಳಲ್ಲಿ ಒದಗಿಸಿಕೊಡುವುದಕ್ಕೆ ಕಮರ್ಷಿಯಲ್ ಬ್ಯಾಂಕ್ಸ್ ಜೊತೆಯಲ್ಲಿ ಮಾತನಾಡಿದ್ದೇವೆ, ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಅವರು ಮುಂದೆ ಬಂದಿದ್ದಾರೆ. ಎರಡು ಲಕ್ಷ ಎಕರೆಗೆ ಅನೂಲವಾಗುವಂತೆ 40 ಸಾವಿರ ಬಾವಿಗಳನ್ನು ತೋಡಿಸುವುದಕ್ಕೆ ಮತ್ತು ಪಂಪ್ ಸೆಟ್ಟುಗಳನ್ನು ಒದಗಿಸಿಕೊಡುವುದಕ್ಕೆ, ವಿದ್ಯುಚ್ಛಕ್ತಿಯನ್ನು ಕೊಡುವುದಕ್ಕೆ ಇತರ ಸಹಾಯಗಳನ್ನು ಕೊಡುವುದಕ್ಕೆ ಅವರ ಸಹಾಯವನ್ನು ಕೇಳಿದ್ದೆವು. ಈಗಾಗಲೇ ಅವರು ಕೆಲವಾರು ಯೋಜನೆಗಳನ್ನು ಇಟ್ಟುಕೊಂಡು ಈ ವರ್ಷ ಸುಮಾರು 25 ಲಕ್ಷ ರೂಪಾಯಿ ಸಹಾಯ ಮಾಡುತ್ತೇವೆ ಎಂದು ಮುಂದೆ ಬಂದಿದ್ದಾರೆ. ಇದರ ಜೊತೆಗೆ 4 ಯೋಜನೆಯಲ್ಲಿ 13 ಕೋಟಿ ರೂಪಾಯಿಗಳಷ್ಟು ಹಣವನ್ನು ಕೊಡಬೇಕೆಂದು ಕೇಳಿದ್ದೆವು. ಆದರೆ ವರ್ಕಿಂಗ್ ಗ್ರೂಪಿನಲ್ಲಿ ಅದನ್ನು 5 ಕೋಟಿ ರೂಪಾಯಿಗಳಿಗೆ ಇಳಿಸಿದ್ದಾರೆ. ನಮ್ಮ ಸಂಸ್ಥಾನದ ಸಣ್ಣ ಕೈಗಾರಿಕೆಯಲ್ಲಿ ಇದೂ ಸೇರಿದೆ.

ಹೊರಗಿನ ದೇಶಗಳಿಂದ ಸುಮಾರು 2 ಕೋಟಿ ರೂಪಾಯಿನ ರೇಷ್ಮೆ ಅಮದು ಮಾಡುವುದನ್ನು ನಿಲ್ಲಿಸಿ ಕೇಂದ್ರಸರ್ಕಾರದವರಿಗೆ ಎರಡು ಕೋಟಿ ರೂಪಾಯಿಗಳ ಉಳಿತಾಯ ಮಾಡಿದ್ದೇವೆ ಅದೂ ಅಲ್ಲದೆ ಈ ವರ್ಷ 6 ಕೋಟಿ ರೂಪಾಯಿ ಬೆಲೆ ಬಾಳತಕ್ಕ ರೇಷ್ಮೆ ಬಟ್ಟೆಗಳನ್ನು ಮತ್ತು ರೇಷ್ಮೆ ನೂಲನ್ನು ಹೊರ ದೇಶಕ್ಕೆ ಕಳುಹಿಸಿ ನಮ್ಮ ದೇಶಕ್ಕೆ 6 ಕೋಟಿ ರೂಪಾಯಿಗಳಷ್ಟು ವಿದೇಶೀ ವಿನಿಮಯವನ್ನು ಗಳಿಸಿಕೊಟ್ಟಿದ್ದೇವೆ. ಈ ರೀತಿ ಒಟ್ಟು 8 ಕೋಟಿ ರೂಪಾಯಿಗಳಷ್ಟು ಆದಾಯ ಇಂಡಿಯಾ ದೇಶಕ್ಕೆ ಮೈಸೂರು ಸಂಸ್ಥಾನದ ರೇಷ್ಮೆಯಿಂದ ಬಂದಿದೆ ಎಂದು ಭಾವಿಸಬಹುದು. ಫಿಲೇಚರ್ಸ್ ಈಗ ನಡೆಸತಕ್ಕ ರೀತಿಯಲ್ಲಿ ಮುಂದುವರಿಸುವುದಕ್ಕೆ ಸಾಧ್ಯವಿಲ್ಲ ನಮಗೆ ನಷ್ಟವಾಗ ತಕ್ಕ ಅರ್ಥದಷ್ಟನ್ನಾದರೂ ಕೊಡಬೇಕು ಇಲ್ಲದೇ ಇದ್ದರೆ ಅದನ್ನು ಮುಚ್ಚುತ್ತೇವೆ ಎಂದು ತೀವ್ರವಾಗಿ ಕೇಂದ್ರ ಸರ್ಕಾರದವರಿಗೆ ಕಾಗದ ಬರೆದ ಮೇಲೆ ಅವರು ಫ್ಯಾಕ್ಟ್ ಫೈಂಡಿಂಗ್ ಸಮಿತಿಯನ್ನು ನೇಮಕ ಮಾಡಿ ಅವರಿಂದ ಒಂದು ವರದಿಯನ್ನು ತರಿಸಿಕೊಂಡು ಅದರ ಮೇಲೆ ಒಂದು ಕಾರ್ಪೊರೇಷನ್ ಮಾಡಿ ಅದಕ್ಕೆ ವಹಿಸುತ್ತೇವೆ ಎಂದು ಸೂಚನೆ ಮಾಡಿದ್ದರು. ಆಗತಕ್ಕ ನಷ್ಟವನ್ನು ಕೊಡುವುದಕ್ಕೆ ಆಗುವುದಿಲ್ಲ ಎಂಬ ರೀತಿಯಲ್ಲಿ ಮತ್ತು ನಷ್ಟವನ್ನು ಕೊಡಿಸಿ ಕೊಡುವುದಕ್ಕಾಗುವುದಿಲ್ಲ ಎಂಬ ಉತ್ತರವನ್ನೂ ಕಳುಹಿಸಿದ್ದಾರೆ. ಬಹುಶಃ ಅವರು ಒಳ್ಳೆಯ ಮಾತಿಗೆ ಬಗ್ಗುವುದಿಲ್ಲ ಎಂದು ನಾವು ಅರ್ಥಮಾಡಿಕೊಂಡಿದ್ದೇವೆ. ಕಳೆದ 5-6 ವರ್ಷಗಳಿಂದ ಪ್ರಯತ್ನ ಮಾಡಿ ಸೆಂಟ್ರಲ್ ಸಿಲ್ ಬೋರ್ಡ್ ಅಂತ ಒಂದು ಸ್ಟ್ಯಾಟ್ಯುಟರಿ ಬೋರ್ಡನ್ನು ಮಾಡಿದರು, ಅದಕ್ಕೆ ಖಾಸಗಿ ಅಧ್ಯಕ್ಷರನ್ನು ನೇಮಕ ಮಾಡಬೇಕೆಂದು ಒತ್ತಾಯ ಮಾಡಿದ್ದೆವು. ಈಗ ಅಧ್ಯಕ್ಷರನ್ನೇನೋ ನೇಮಕ ಮಾಡಿದ್ದಾರೆ. ಬೊಂಬಾಯಿನಲ್ಲಿ ಅದು ಇದೆ ಅದನ್ನು ಇಲ್ಲಿಗೆ ವರ್ಗಾಯಿಸಬೇಕೆಂದು ಒತ್ತಾಯ ಮಾಡಿದ್ದೇವೆ. ಮೈಸೂರು ಸಂಸ್ಥಾನದಲ್ಲಿ ಲಕ್ಷದ 5 ಸಾವಿರ ಕೆ. ಜಿ. ರೇಷ್ಮೆಯನ್ನು ಉತ್ಪಾದನೆ ಮಾಡುತ್ತಾ ಇದ್ದೇವೆ. ಸುಮಾರು 6 ಲಕ್ಷ ಚಿಲ್ಲರೆ ಕೆ. ಜಿ. ಚರಕಾ ರೇಷ್ಮೆ ಉತ್ಪಾದನೆ ಮಾಡುತ್ತಾ ಇದ್ದೇವೆ. ಸುಮಾರು 4 ಲಕ್ಷ ಚಿಲ್ಲರೆ ಬೇಸಿಕ್ ಬೇಸಿನ್ ರೇಷ್ಮೆ ಉತ್ಪಾದನೆ ಮಾಡುತ್ತಾ ಇದ್ದೇವೆ. ಒಟ್ಟು 11 ಲಕ್ಷ ಚಿಲ್ಲರೆ ಕೆ. ಜಿ. ಯಷ್ಟು ರೇಷ್ಮೆ ನಮ್ಮ ಸಂಸ್ಥಾನದಲ್ಲಿ ಉತ್ಪಾದನೆಯಾಗುತ್ತಾ ಇದೆ. ಕೇವಲ 75 ಸಾವಿರ ಕೆ. ಜಿ. ಯಷ್ಟು ಇತರ ಪ್ರಾಂತ್ಯಗಳು ಎಂದರೆ ಜಮ್ಮು ಕಾಶ್ಮೀರ ಹಾಗೂ ಉತ್ತರ ಪ್ರದೇಶದಲ್ಲಿ ಉತ್ಪಾದನೆಯಾಗುತ್ತಾ ಇದೆ. ನಮ್ಮ ದೇಶದಲ್ಲಿ ಸುಮಾರು 3 ಸಾವಿರ ಪವರ್‌ಲೂಮ್‌ಗಳು ಇವೆ ಅದರಿಂದ ಕೊನೆ ಪಕ್ಷ 2 ಲಕ್ಷ ಕೆಜಿ ಆದರೂ ಒಳ್ಳೆಯ ರೇಷ್ಮೆ ಉತ್ಪಾದನೆಯಾಗುತ್ತದೆ. ಎರಡು ಲಕ್ಷ ಕೆಜಿ ನೂಲನ್ನು ಹೊರ ದೇಶದಿಂದ ತರಿಸಬೇಕಾದರೆ ಕೋಟಿಗಟ್ಟಲೆ ರೂಪಾಯಿ ಖರ್ಚಾಗುತ್ತದೆ. ಅದನ್ನೂ ಕೂಡ ಕೇಂದ್ರ ಸರ್ಕಾರದವರ ಗಮನಕ್ಕೆ ತಂದಿದ್ದೇವೆ. ನಮ್ಮ ಮೈಸೂರು ಸಂಸ್ಥಾನದಲ್ಲಿ ಈ ರೇಷ್ಮೆ ಉದ್ದಿಮೆಯಲ್ಲಿ ಸ್ಪನ್ ಸಿಲ್ಕ್‌ನಲ್ಲಿ ಲಾಭ ಪಡೆಯುತ್ತಾ ಇದ್ದೇವೆ. ಕಳೆದ ವರ್ಷ ಎರಡು ಲಕ್ಷ ರೂಪಾಯಿಗೆ ಇಳಿದಿದೆ. 8 ಲಕ್ಷದಿಂದ 2 ಲಕ್ಷ ರೂಪಾಯಿಗಳಿಗೆ ಇಳಿಯಲು ಕಾರಣವೇನೆಂದರೆ 28 ಲಕ್ಷ ರೂಪಾಯಿ ಬೆಲೆ ಬಾಳತಕ್ಕ ಸ್ಪಿಂಡಲ್ಸ್‌ನ್ನು ಜಪಾನ್‌ನಿಂದ ತರಿಸಿ ಕೊಟ್ಟರೂ ಕೂಡ ಒಂದೇ ಷಿಫ್ಟ್ ಕೆಲಸ ಮಾಡುತ್ತಾ ಇರುವುದರಿಂದ ಈ ರೀತಿಯಾಗಿದೆ. ಇದೇ ರೀತಿ ಮೈಸೂರು ವೀವಿಂಗ್ ಫ್ಯಾಕ್ಟರಿಯಲ್ಲೂ ಕೂಡ ಅದು ಲಾಭದಾಯಕವಾಗಿ ನಡೆಯುತ್ತಾ ಇಲ್ಲ, 21 ಲಕ್ಷ ರೂಪಾಯಿ ಬೆಲೆ ಬಾಳತಕ್ಕ 30 ಹೊಸ ಲೂಂಗಳನ್ನು ಜಪಾನ್‌ನಿಂದ ತರಿಸಿದ್ದಾರೆ ಬಹಳ ನವುರಾದ ಬಟ್ಟೆಯನ್ನು ತಯಾರು ಮಾಡುತ್ತಾ ಇದ್ದಾರೆ. ಅದು ಒಳ್ಳೆಯ ರೀತಿಯಲ್ಲಿ ಮಾರಾಟವಾಗುತ್ತಾ ಇದೆ. ಇದನ್ನೆಲ್ಲಾ ನೋಡಿದಾಗ ಸ್ಪನ್ ಸಿಲ್ಕ್ ಮಿಲ್ಲಿನಲ್ಲಿ ಹೆಚ್ಚಿನ ರೀತಿಯಲ್ಲಿ ಲಾಭ ಮಾಡುವುದಕ್ಕೆ ಅವಕಾಶವಿದೆ. ವೀವಿಂಗ್ ಫ್ಯಾಕ್ಟರಿಯಲ್ಲೂ ಲಾಭ ಮಾಡುವುದಕ್ಕೆ ಅವಕಾಶ ಇದೆ. ಒಟ್ಟಿನಲ್ಲಿ ನಷ್ಟವಾಗುತ್ತಾ ಇರುವುದಕ್ಕೆ ಕಾರಣವೇನೆಂದರೆ 1963 ರಿಂದ ಈಚೆಗೆ ಕೆಲಸಗಾರರಿಗೆ ಇಂಡಸ್ಟ್ರಿಯಲ್ ಆಕ್ಟ್ ಪ್ರಕಾರ ಕೊಡಬೇಕಾದ ಸೌಲಭ್ಯ ಕೊಡಬೇಕಾಗಿ ಬಂತು, ಅದನ್ನು ಹಿಂದೆ ಕೊಡುತ್ತಾ ಇರಲಿಲ್ಲ. ಪ್ರತಿವರ್ಷ ರಿವೈಸ್ಡ್ ಡಿ ಎ ಕೊಟ್ಟಿದ್ದೇವೆ. ಎಷ್ಟೇ ಮಿತವ್ಯಯ ಮಾಡಬೇಕೆಂದು ಪ್ರಯತ್ನ ಮಾಡಿದರೂ ಕೂಡ ಕೊನೇ ಪಕ್ಷ 20 ರೂಪಾಯಿ ಒಂದು ಕೆ. ಜಿ. ಗೆ ನಷ್ಟವಾಗುತ್ತಾ ಇದೆ ಎಂದು ಫ್ಯಾಕ್ಟ್ ಫೈಂಡಿಂಗ್ ಕಮಿಟಿಯವರು ತಿಳಿಸಿದ್ದಾರೆ.

8-00 P. M.

ಅದು ಈ ರೀತಿ 64 ಕೆ.ಜಿ, ರೇಷ್ಮೆ ಗೂಡಿಗೆ ಒಂದು ಕೆ. ಜಿ. ರೇಷ್ಮೆ ನೂಲು ಬರುತ್ತದೆ. ಹೀಗೆ ಯಾವ ಯಾವ ತರಹೆಯ ಗೂಡುಗಳಲ್ಲಿ ಎಷ್ಟೆಷ್ಟು ರೇಷ್ಮೆ ಬರುತ್ತದೆ ಎಂಬುದನ್ನು ಫ್ಯಾಕ್ಟ್ ಫೈಂಡಿಂಗ್ ಸಮಿತಿಯವರು ಕಂಡುಹಿಡಿದಿದ್ದಾರೆ.

Weight of green cocoon fit—raw silk produced	...	4.55 kgs.

(ಶ್ರೀ ಬಿ. ರಾಚಯ್ಯ)

Wastage	...	59.49 kg.
Break up of wastages as under :		
Stretching and drying		13.85 kg.
Handling loss	...	.1 kg.
Flaws	...	.020 kg.
Cocoons wastage	...	1 kg.
Reelers	...	.45 kg.
Re-reelers	...	.005

ಹೀಗೆ ಅವರು 59·49 ಕೆ. ಜಿ. ವೇಸ್ಟಾಗುತ್ತದೆಂದು ತಿಳಿದುಕೊಂಡು ಹೋಗಿದ್ದಾರೆ. ಕನಕಪುರ, ಕೊಳ್ಳೇಗಾಲ ಮತ್ತು ಕಿಸಾನ್ ಇಂಡಸ್ಟ್ರೀಗಳಿಗೆ ಕಕೂನುಗಳ ಬೆಲೆ ಬಹಳ ಜಾಸ್ತಿಯಾಗಿರುತ್ತೆಂದು ಹೇಳುತ್ತಿದ್ದಾರೆ. ಅದಕ್ಕೆ ಅವರು ಕಾರಣವನ್ನು ತಿಳಿಸುತ್ತಾ ಅಲ್ಲಿ ಲೇಬರ್ ಮತ್ತು ಇತರೇ ಓವರ್ ಹೆಡ್ ಚಾರ್ಜುಗಳು ಬಹಳ ಜಾಸ್ತಿ ಆದುದರಿಂದ ಆ ಬೆಲೆಯೂ ಜಾಸ್ತಿ ಆಗಿದೆ ಎಂದು ಹೇಳುತ್ತಿದ್ದಾರೆ. ಆದರೆ ಖಾಸಗಿಯವರು ನಡೆಸತಕ್ಕ ಈ ಉದ್ಯಮದಲ್ಲಿ ಅವರು ಆ ಲೇಬರ್ ಆಕ್ಟಿಗೆ ಅನುಗುಣವಾಗಿ ಕಾರ್ಮಿಕರಿಗೆ ಕೂಲಿಯನ್ನು ಕೊಡುತ್ತಿಲ್ಲ, ಇತರೇ ಸೌಲಭ್ಯಗಳನ್ನೂ ಕೂಡ ಒದಗಿಸುವುದಿಲ್ಲ. ಅವರೂ ನಮ್ಮ ಹಾಗೆ ಇವುಗಳನ್ನೆಲ್ಲಾ ಕೊಟ್ಟರೆ ಅವರಿಗೂ ಈ ಉದ್ಯಮದಲ್ಲಿ ಲುಕ್ಸಾನಾಗಲೇ ಬೇಕು. ಈ ವ್ಯತ್ಯಾಸಗಳಿಂದ ಈ ದಿವಸ ಪ್ರೈವೇಟ್ ಇಂಡಸ್ಟ್ರಿಯವರಿಗೂ ಮತ್ತು ಸರ್ಕಾರಿ ಇಂಡಸ್ಟ್ರಿಗಳವರಿಗೂ ಈ ದರದಲ್ಲಿ 28 ರೂಪಾಯಿಗಳ ವ್ಯತ್ಯಾಸವಿದೆ. ಈ ಒಂದು ದೃಷ್ಟಿಯಿಂದ ಈ ದಿವಸ ಮಾರುಕಟ್ಟೆಗೆ ಬರತಕ್ಕ ಸುಮಾರು 16 ಕೋಟಿ ರೂಪಾಯಿಗಳ ಬೆಲೆ ಬಾಳತಕ್ಕ ರೇಷ್ಮೆಯನ್ನು ಅಲ್ಲಿ ಕೇವಲ ಎರಡು ಕೋಟಿ ರೂಪಾಯಿಗಳಿಗೆ ಮಾತ್ರ ಬೆಲೆ ಮಾಡಲಾಗುತ್ತಿದೆ. ನಮ್ಮ ಸರಕು ಅಲ್ಲಿ ಇಷ್ಟು ಕಡಿಮೆ ದರಕ್ಕೆ ಮಾರಾಟವಾಗುತ್ತಿರುವುದರಿಂದ ನಾವು ನಿರೀಕ್ಷಿಸಿದ ಮಟ್ಟದಲ್ಲಿ ಕೆಲಸವನ್ನು ಮಾಡುವುದಕ್ಕಾಗುತ್ತಿಲ್ಲ. ನಾನು ಈ ಒಂದು ಕಾರಣದಿಂದ ಇದೇ ಅಧಿವೇಶನದಲ್ಲಿ ನಮ್ಮ ಮಾರುಕಟ್ಟೆಯ ಶಾಸನಕ್ಕೆ ಒಂದು ತಿದ್ದುಪಡಿಯನ್ನು ತಂದು ಅದಕ್ಕೆ ತಮ್ಮೆಲ್ಲರ ಒಪ್ಪಿಗೆ ಪಡೆಯಬೇಕೆಂದಿದ್ದೇನೆ. ಆ ಒಂದು ತಿದ್ದುಪಡಿ ಪಾಸಾದರೇನೇ ಆ ಮಾರುಕಟ್ಟೆ ಸ್ವಲ್ಪ ಎಫಿಷಿಯೆಂಟಾಗಿ ಕೆಲಸ ಮಾಡುತ್ತದೆ. ನಮ್ಮ ಕಾನೂನಿನ ಮಾರಾಟದಲ್ಲಿ ಶೇಕಡ 70 ರಷ್ಟು ಫಿಲೇಚರ್ ರೇಷ್ಮೆಯ ಶಿಲ್ಕು ಇರುತ್ತದೆ. 91 ಕೆ.ಜಿ. ಫಿಲೇಚರ್ ಶಿಲ್ಕು ಕಕೂನು ಗೂಡುಗಳಿಂದ ಒಂದು ಕೇಜಿ ರೇಷ್ಮೆ ನೂಲನ್ನು ತಯಾರಿಸಬಹುದು. ಅದರ ಬೆಲೆ 191 ರೂಪಾಯಿ ಆಗುತ್ತದೆ. ಅದಕ್ಕೆ ಮಾರುಕಟ್ಟೆಯಲ್ಲಿ 135 ರೂಪಾಯಿ ಬೆಲೆ ಸಿಕ್ಕುತ್ತದೆ. ಅಂದರೆ 1 ಕೆ. ಜಿ. ರೇಷ್ಮೆ ನೂಲಿಗೆ 100 ರೂಪಾಯಿಗಳ ಬೆಲೆ ಎಂದರೆ ಬಹಳ ಆಯಿತು. ಅಷ್ಟು ಜಾಸ್ತಿ ಬೆಲೆ ಕೊಡುವುದಕ್ಕಾಗುವುದಿಲ್ಲ. ಆದರೆ ಅದು 20 ರೆಂಡಿಟಾ ಇರುತ್ತದೆ. ನಮ್ಮ ಕೊಳ್ಳೇಗಾಲ—ಮೈಸೂರು ಭಾಗದ ಶಿಲ್ಕು 19—20 ರೆಂಡೆಟಾ ಬಂದರೆ ಕನಕಪೂರದ್ದು 14–15 ರೆಂಡಿಟಾ ಬರುತ್ತದೆ. ಆದರೆ ಒಂದೊಂದು ರೆಂಡಿಟಾಕ್ಕೂ ಬೆಲೆಯಲ್ಲಿ 5 ರಿಂದ 7—8 ರೂಪಾಯಿಗಳವರೆಗೂ ಏರುಪೇರುಗಳಾಗುತ್ತದೆ. ಆದರೆ ನಮ್ಮಲ್ಲಿ ರೇಷ್ಮೆ ಗೂಡುಗಳಿಗೆ ಸಾಕಷ್ಟು ಗಿರಾಕಿಗಳು ಬಾರದೆ ಅದು ದುರುಪಯೋಗವಾಗುತ್ತಿದೆ. ಸಾಕಷ್ಟು ಗೂಡು ಸಿಕ್ಕದಿದ್ದಾಗ ಅಲ್ಲಿ ಕೆಲಸ ಮಾಡತಕ್ಕ ಕಾರ್ಮಿಕರಿಗೂ ತೊಂದರೆ ಬರುತ್ತದೆ. ಆದರೆ ಬೆಳೆಯುತಕ್ಕ ರೈತರಿಗೆ ಗೂಡಿನ ಬೆಲೆ ನಿಗದಿ ಮಾಡದೆ ರೇಷ್ಮೆ ಬೆಲೆಯನ್ನು ನಿಗದಿ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಆ ರೇಷ್ಮೆ ಗೂಡುಗಳ ಬೆಲೆ ನೂರು ರೂಪಾಯಿಗಳಿಗಿಂತ ಕಡಮೆ ಆಗದ ಹಾಗೆ ನಿಗದಿ ಮಾಡಬೇಕು. ಮಾರುಕಟ್ಟೆಯಲ್ಲಿ ಗೂಡಿನ ಬೆಲೆ ಬಹಳ ಇಳಿದಾಗ ಸರ್ಕಾರದವರು ಮಾರುಕಟ್ಟೆಯಲ್ಲಿ ಗೂಡನ್ನು ಕೊಂಡು ಅದನ್ನು ಹೆಚ್ಚಿನ ಪ್ರಮಾಣದಲ್ಲಿ ದಾಸ್ತಾನಿಡುವುದಕ್ಕೆ ಯೋಗ್ಯವಾದ ಗೋಡೌನುಗಳನ್ನು ಏರ್ಪಡಿಸಲಾಗಿದೆ.

ಇನ್ನು ಆ ಪ್ಯಾಕ್ಟ್ ಫೈಂಡಿಂಗ್ ಸಮಿತಿಯವರು ನಮ್ಮಲ್ಲಿ ಕೆಲಸ ಮಾಡುತ್ತಿದ್ದ 1500 ಬೇಸಿನ್‌ಗಳನ್ನು 3000ಕ್ಕೆ ಹೆಚ್ಚಿಸಿದರೇನೇ ಅವುಗಳಿಂದ ಲಾಭ ಬರುತ್ತದೆಂದು ಹೇಳಿದ್ದರಿಂದ, ಅವರ ಸಲಹೆಯ ಮೇರೆಗೆ ಮತ್ತೆ 1200 ಬೇಸಿನ್‌ಗಳನ್ನು ಹೆಚ್ಚು ಮಾಡಿದ್ದಾಯಿತು. ಆದರೆ ನಮಗೆ ಅದರಿಂದ ದೃಢಪಟ್ಟ ವಿಷಯವೆಂದರೆ ನಾವು ಎಷ್ಟು ಹೆಚ್ಚಿಗೆ ಬೇಸಿನ್‌ಗಳನ್ನು ಹಾಕುತ್ತೇವೋ ಅಷ್ಟು ನಮಗೆ ಅವುಗಳಿಂದ ಲುಕ್ಸಾನು ಹೆಚ್ಚಾಗುತ್ತದೆಂದು ಮನವರಿಕೆ ಆಗಿದೆ ಅದಕ್ಕಾಗಿ ನಾವೀಗ 890 ಬೇಸಿನ್‌ಗಳನ್ನು ಮಾತ್ರ ಇಟ್ಟುಕೊಂಡಿದ್ದೇವೆ. ಇವುಗಳಲ್ಲೇ ಇನ್ನು ಒಂದೆರಡು ಬೇಸಿನ್‌ಗಳನ್ನು ಮುಚ್ಚಬೇಕೆಂಬ ಉದ್ದೇಶವಿದೆ. ಈ ವ್ಯವಹಾರದಲ್ಲಿ ಇಲ್ಲಿಯತನಕ 2 ಕೋಟಿ 25ಲಕ್ಷ

ರೂಪಾಯಿಗಳ ನಷ್ಟ ಉಂಟಾಗಿದೆ. ಅಷ್ಟು ಅಪಾರವಾದ ನಷ್ಟವಾದರೂ ಆಗಲಿ ಅವುಗಳನ್ನು ಮುಚ್ಚಬಾರದು ಎಂದು ಯಾವ ದೇಶಭಕ್ತನೂ ಹೇಳಲಾರ ; ಮತ್ತು ಒಪ್ಪಲಾರ. ಇವುಗಳನ್ನೆಲ್ಲಾ 1965ರಲ್ಲೇ ಮುಚ್ಚಬೇಕಾಗಿತ್ತು. ಆದರೆ ಆಗ ಇದೇ ಸಭೆಯಲ್ಲಿ ಕೆಲವು ಮಾನ್ಯ ಸದಸ್ಯರು ಬಹಳ ಕಟುವಾಗಿ ಟೀಕಿಸಿದ್ದರಿಂದ ಅವುಗಳನ್ನು ಮುಚ್ಚದೆ ಇಲ್ಲಿಯತನಕ ಮುಂದುವರಿಸಿಕೊಂಡು ಬರಲಾಯಿತು. ಆದರೆ ಆಗ್ಗೆ ಇದ್ದ ಅಭಾವ ಪರಿಸ್ಥಿತಿಯನ್ನೂ ಸರ್ಕಾರ ಗಮನಿಸಿ ಇವನ್ನು ಮುಂದುವರಿಸಿಕೊಂಡು ಬಂದಿತು. ಇತ್ತೀಚೆಗೆ ಈ ಬೇಸಿನ್‌ಗಳ ಶೇ 25ರಷ್ಟನ್ನು ಮುಚ್ಚಿಡಬೇಕು ಎಂಬ ತೀರ್ಮಾನಕ್ಕೆ ಬರಲಾಗಿದೆ. ಆದರೆ ಇಲ್ಲಿ ಕೆಲಸ ಮಾಡತಕ್ಕ ಕೂಲಿಗಾರರಲ್ಲಿ ಸ್ವಲ್ಪ ವಯಸ್ಸಾದವರನ್ನು ಅವರಿಗೆ ಗ್ರ್ಯಾಚುಯಟಿಯನ್ನಾದರೂ ಕೊಟ್ಟು ಅವರನ್ನು ನಿವೃತ್ತಿ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಹೀಗೆ ಅಲ್ಲಿ ಕ್ರಮೇಣ ಕೆಲಸಗಾರರನ್ನು ಕಡಮೆ ಮಾಡಬೇಕೆಂದಿದ್ದೇವೆ. ಇನ್ನು ಮುಂದಕ್ಕೆ ಅಲ್ಲಿ ತಯಾರಾಗತಕ್ಕ ರೇಷ್ಮೆಯ ಗುಣ ಮತ್ತು ದರ್ಜೆಗಳನ್ನು ಉತ್ತಮಗೊಳಿಸತಕ್ಕ ಹೆಚ್ಚಿನ ನಿಗಾ ವಹಿಸಲಾಗುತ್ತದೆ. ಈ ಎಲ್ಲಾ ಕಾರಣಗಳಿಂದ ಮುಂದಿನ ಕೆಲವು ತಿಂಗಳುಗಳಲ್ಲಿ ಮೈಸೂರು ಸಂಸ್ಥಾನದಲ್ಲಿ ಉತ್ಪತ್ತಿಯಾಗತಕ್ಕ ರೇಷ್ಮೆಯಲ್ಲಿ ಖೋತಾ ಆಗತಕ್ಕ ಸಂಭವ ಇರುವುದರಿಂದ ಬೇರೆ ಪ್ರಾಂತ್ಯಗಳಿಗೆ ಇದರ ಸರಬರಾಯಿಯ ಬಗ್ಗೆ ಸ್ವಲ್ಪ ಅಭಾವ ಉಂಟಾಗಬಹುದು. ಬಹಶಃ ಆಗೇನಾದರೂ ಕೇಂದ್ರ ಸರ್ಕಾರದವರು ಕಣ್ಣು ತೆರೆಯಬಹುದು.

ಶ್ರೀ ಡಿ. ಎಂ. ಸಿದ್ದಯ್ಯ.—ಹಾಗೆ ಮುಚ್ಚುವುದಕ್ಕೆ ಮುಂಚೆ ಕೇಂದ್ರ ಸರ್ಕಾರಕ್ಕೆ ಒಮ್ಮೆ ಈ ತೊಂದರೆಯನ್ನು ತಿಳಿಸಿದರೆ ಅವರು ಅದರ ನಿವಾರಣೆಗೆ ಪ್ರಯತ್ನ ಮಾಡುತ್ತಾರೆಂದು ಊಹಿಸುವುದಕ್ಕೆ ಅವಕಾಶವಿಲ್ಲವೇ ?

ಶ್ರೀ ಬಿ. ರಾಚಯ್ಯ.—5 ವರ್ಷಗಳ ಹಿಂದೆಯೇ ಇದನ್ನು ಮುಚ್ಚಬೇಕಾಗಿತ್ತು. ಆಗ ಕೇಂದ್ರದವರೇ ಒಂದು ರೀತಿಯಲ್ಲಿ ಹೇಳಿಕೆಯನ್ನು ಕೊಟ್ಟು ಇದರ ಬಗ್ಗೆ ಏನು ಪರಿಹಾರ ಕೊಡಬೇಕೆಂಬುದನ್ನು ಸೂಚಿಸಲು ಒಂದು ಸಮಿತಿಯನ್ನು ನೇಮಕ ಮಾಡಿದರು. ಆ ಸಮಿತಿ ತನ್ನ ವರದಿಯನ್ನೂ ಕೊಟ್ಟಿದ್ದಾಯಿತು. ಆದರೆ ಅವರಿಂದೇನೂ ಪ್ರಯೋಜನ ಆಗಲಿಲ್ಲ. ಹೀಗಾಗಿ ಅಲ್ಲಿಂದಲೂ ನಮಗೆ ವರ್ಷಂಪ್ರತಿ 40 ಲಕ್ಷ ರೂಪಾಯಿ ಲುಕ್ಸಾನಾಗುತ್ತಿದೆ. ನಾನು ಬಂದಿರತಕ್ಕ ಭಾಗದಲ್ಲಿ ಹೆಚ್ಚು ಜನ ರೇಷ್ಮೆ ಕೈಗಾರಿಕೆಯನ್ನು ಅವಲಂಬಿಸಿದ್ದಾರೆ. ಈ ದೇಶದ ದುಡ್ಡನ್ನು ಈ ರೀತಿಯಾಗಿ ವ್ಯಯ ಮಾಡುವುದಕ್ಕೆ ನನ್ನ ಮನಸ್ಸು ಒಪ್ಪುತ್ತಾ ಇಲ್ಲ. ಈ ಒಂದು ದೃಷ್ಟಿಯಿಂದ ಕೇಂದ್ರ ಸರ್ಕಾರದವರು ಕಣ್ಣು ತೆರೆಯಲಿ. ಇಲ್ಲದೇ ಹೋದರೆ ಈ ಸರ್ಕಾರ ಇದನ್ನು ಮುಚ್ಚುವುದಕ್ಕೆ ಸಿದ್ಧವಾಗಿರಬೇಕೆಂಬ ತೀರ್ಮಾನಕ್ಕೆ ಬಂದಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್.—ಕೂಲಿಯವರಿಗೂ ಮತ್ತು ಕಾರ್ಮಿಕರಿಗೂ ಸಂಬಳ ಕೊಡಿ. ಕೇಂದ್ರಸರ್ಕಾರದವರ ಮೇಲೆ ಒತ್ತಾಯ ತರುವುದಕ್ಕೋಸ್ಕರ ಈ ಕ್ರಮ ತೆಗೆದುಕೊಂಡರೆ ಸರಿಯಲ್ಲ. ಇದರಿಂದ ನಿರುದ್ಯೋಗ ಸಮಸ್ಯೆಯನ್ನು ಉಂಟುಮಾಡಬೇಡಿ. ಅವರು ಪ್ರೊಡಕ್ಷನ್ ಜಾಸ್ತಿಯಾದ್ದರಿಂದ ನಷ್ಟ ಜಾಸ್ತಿಯಾಗುತ್ತಿದೆಯೆಂದು ಹೇಳಿದರು. ಅದು ಸರಿಯಲ್ಲ. ಲಾಭವೇ ಜಾಸ್ತಿಯಾಗುತ್ತದೆ. ಈ ನಿರುದ್ಯೋಗ ಭಯಕ್ಕೆ ಕಾರ್ಮಿಕರನ್ನು ತಳ್ಳಬೇಡಿ.

ಶ್ರೀ ಬಿ. ರಾಚಯ್ಯ.—ಈಗ ಒಬ್ಬ ಕೆಲಸಗಾರನಿಗೆ ದಿವಸಕ್ಕೆ 2 ರೂಪಾಯಿಗಳು ಸಿಗುತ್ತದೆ. ಆದರೆ ಕೊಳ್ಳೇಗಾಲ, ಚಾಮರಾಜನಗರ ಮತ್ತು ಕನಕಪುರಗಳಲ್ಲಿ ಯಾರೂ 2 ರೂಪಾಯಿಗಳನ್ನು ಕೊಡುತ್ತಾ ಇಲ್ಲ. ಮನೆಯಲ್ಲಿ ಕೆಲಸ ಮಾಡಿದರೆ 2 ರೂಪಾಯಿಗಳು ಸಿಗುತ್ತದೆ. ಜಪಾನ್ ಮತ್ತು ಇತರ ದೇಶಗಳಲ್ಲಿಯೂ ಹೀಗೆಯೇ ಕೆಲಸಮಾಡುತ್ತಾರೆ. ಮಾನ್ಯ ಸದಸ್ಯರೂ ನೋಡಿದ್ದಾರೆ. ಒಬ್ಬ ವರ್ಕರ್ 7 ಪೌಂಡು ನೂಲನ್ನು ಒಂದು ದಿವಸಕ್ಕೆ ತೆಗೆಯುತ್ತಾನೆ. ಇಷ್ಟೊಂದು ಸೂಪರ್‌ವಿಷನ್ ಇರುವುದಿಲ್ಲ. ಮೋಸ ಇರುವುದಿಲ್ಲ. ರೈತರಿಗೆ ಅವರ ಗೂಡಿನ ಬೆಲೆ ಇಳಿಯುತ್ತದೆ ಅದಕ್ಕೋಸ್ಕರ ಫಿಲೇಚರ್ ಮಾಡುವುದನ್ನು ಸರ್ಕಾರದವರು ತೆಗೆದುಕೊಳ್ಳಬೇಕೆಂದು ಮಾನ್ಯ ಶ್ರೀ ಸಿದ್ಧವೀರಪ್ಪನವರು ಸಚಿವರಾಗಿದ್ದಾಗ ಹೇಳಿದ್ದರು. ಅದರಂತೆ ಈಗ ನಾವು ತೆಗೆದುಕೊಂಡಿದ್ದೇವೆ. ಆಗ 5,100 ಕೆ. ಜಿ. ರೇಷ್ಮೆ ತಯಾರಾಗುತ್ತಿತ್ತು. ಈಗ ಒಂದು ಲಕ್ಷ 5 ಸಾವಿರ ಕೆ. ಜಿ. ರೇಷ್ಮೆ ತಯಾರಾಗುತ್ತಿದೆ. ಇವತ್ತು ಸಿಬ್ಬಂದಿ ಸಂಖ್ಯೆ ನೋಡಿದರೆ 5 ಪಟ್ಟು ಜಾಸ್ತಿಯಾಗಿದೆ. ರೇಷ್ಮೆ ಫಿಲೇಚರ್‌ನಲ್ಲಿ ಗೂಡನ್ನು ಸ್ಟಾಕ್ ಇಟ್ಟುಕೊಳ್ಳುತ್ತಿದ್ದರು. ಒಬ್ಬೊಬ್ಬರಿಗೆ ರೇಷನ್ ಕಾರ್ಡ್ ಮೇಲೆ ಕೊಡುವ ನೂಲು ಎಷ್ಟು ಎನ್ನುವುದನ್ನು ಬಹಳ ಕೂಲಂಕಷವಾಗಿ ಅಲ್ಲಿ ಖುದ್ದು ಸ್ಟಡಿ ಮಾಡಿದ್ದೇವೆ. ಅಲ್ಲಿ ಆಗತಕ್ಕ ಅನ್ಯಾಯಗಳನ್ನೂ ನೋಡಿದ್ದೇವೆ. ಇಷ್ಟು ನೋಡಿಯೂ ಅವರಿಗೆ ಬುದ್ಧಿ ಬಾರದಿದ್ದರೆ ಇನ್ನೇನುಮಾಡಬೇಕೋ ಗೊತ್ತಿಲ್ಲ ಯಾರ್‍ಯಾರು ದುರ್ನಡತೆಯಲ್ಲಿ ತೊಡಗಿದ್ದಾರೋ, ಸೂಪರ್‌ವೈಜರ್ಸ್ ಅಧಿಕಾರಿಗಳು ಅಲ್ಲಿ ಅನ್ಯಾಯ

(ಶ್ರೀ ಬಿ. ರಾಚಯ್ಯ)

ಮಾಡುತ್ತಿದ್ದಾರೋ ಅವರಿಗೆ ನಾವು ಬುದ್ಧಿಕಲಿಸುತ್ತೇವೆಂಬ ಹೆದರಿಕೆ ಈಗಾಗಲೇ ಬಂದಿದೆ. ಮಾನ್ಯ ಕೃಷ್ಣನ್ ಅವರು ಹೇಳಿದಹಾಗೆ ಮ್ಯಾನೇಜ್‌ಮೆಂಟಿನಲ್ಲಿ ಒಳ್ಳೆಯ ವರ್ಕರ್ ರೆಪ್ರಸೆಂಟಟೀವ್ಸ್ ಇದ್ದಾರೆ. ಯಾವ್ಯಾವ ಭಾಗಗಳಲ್ಲಿ ನಷ್ಟವನ್ನು ಕಡಿಮೆಮಾಡುವುದಕ್ಕೆ ಸಾಧ್ಯವಿದೆಯೋ ಅಂಥಾದ್ದನ್ನು ಮಾಡುತ್ತಿದ್ದೇವೆ. ಗೂಡನ್ನು ಕೊಂಡುಕೊಳ್ಳುವುದಕ್ಕೆ ಮತ್ತು ಅದನ್ನು ಸೂಪರ್ ವೈಜ್ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್.—ಇನ್‌ಸೆಂಟಿವ್ ಸಿಸ್ಟಂ ಇಂಟ್ರಡ್ಯೂಸ್ ಮಾಡಿ.

ಶ್ರೀ ಬಿ. ರಾಚಯ್ಯ.—ಕನಕಪುರ, ಕೊಳ್ಳೇಗಾಲ, ಮೈಸೂರಿನಲ್ಲಿರತಕ್ಕ 4 ಕಾರ್ಖಾನೆಗಳನ್ನು ಲೆಕ್ಕಹಾಕಿದರೆ, ಕನಕಪುರದಲ್ಲಿ ಸ್ವಲ್ಪಮಟ್ಟಿಗೆ ವರ್ಷಂಪ್ರತಿ ನಷ್ಟ ಐದು ಲಕ್ಷ ರೂಪಾಯಿಗಳ ವರೆಗೂ ಆಗುತ್ತಿರುವುದು ಗೊತ್ತಿದೆ. ಅದನ್ನು ಈಗ ಒಂದು ಲಕ್ಷಕ್ಕೆ ಇಳಿಸುವುದಕ್ಕೆ ಮ್ಯಾನೇಜ್‌ಮೆಂಟಿನವರು ಬಹಳ ಪ್ರಯತ್ನಮಾಡಿದ್ದಾರೆ. ಹಿಂದೆ ಡಿ. ಎ. ಕೊಡುತ್ತಾ ಇರಲಿಲ್ಲ. ಆದ್ದರಿಂದ ಲಾಭ ಬರುತ್ತಿತ್ತು. ಬೇರೆ ಕಡೆ ಇದೇ ಕಾರ್ಖಾನೆಗಳಲ್ಲಿ 12ರಿಂದ 15 ಲಕ್ಷ ರೂಪಾಯಿಗಳವರೆಗೂ ನಷ್ಟ ವಾಗುತ್ತಿತ್ತು. ಇದರಲ್ಲಿ ವರ್ಕರ್ಸ್ ಸೇರಿಕೊಂಡಿದ್ದಾರೆ, ಮ್ಯಾನೇಜ್‌ಮೆಂಟಿನವರು ಸೇರಿಕೊಂಡಿದ್ದಾರೆ, ರೈತರು ಸೇರಿಕೊಂಡಿದ್ದಾರೆ. ಮಾನ್ಯ ಶ್ರೀ ಸಿದ್ಧಯ್ಯನವರು ಹೇಳಿದಹಾಗೆ ಪ್ರೈವೇಟ್ ಕಂಪೆನಿಯವರು ಎಷ್ಟರಮಟ್ಟಿಗೆ ವಿಚಕ್ಷಣೆಯಿಂದ ಕೆಲಸಮಾಡುತ್ತಾರೋ ಅಷ್ಟೇ ವಿಚಕ್ಷಣೆಯಿಂದ ಪಬ್ಲಿಕ್ ಸೆಕ್ಟರಿನಲ್ಲಿ ಕೆಲಸ ಮಾಡಿ ನಷ್ಟವನ್ನು ಕಡಿಮೆಮಾಡುವುದಕ್ಕೆ ಸಾಧ್ಯವಿದೆಯೆಂಬ ತೀರ್ಮಾನಕ್ಕೆ ಬಂದಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್.—ಪ್ರೊಡಕ್ಷನ್ ಎಷ್ಟಿರಬೇಕು, ಕಾರ್ಮಿಕರಿಗೆ ಏನು ಕೊಡಬೇಕು ಎನ್ನುವುದನ್ನು ಮ್ಯಾನೇಜ್‌ಮೆಂಟಿನವರೊಡನೆ ಚರ್ಚೆ ಮಾಡಿದ್ದೀರಾ?

ಶ್ರೀ ಬಿ. ರಾಚಯ್ಯ.—ಕಾರ್ಮಿಕರಿಗೆ ಕೊಡುವ ಸೌಲಭ್ಯಗಳೇನೆಂಬುದನ್ನು ವಿಚಾರ ಮಾಡಿದ್ದೇವೆ. ಅವರಿಗಿಂತ ಮುಂಚಿತವಾಗಿ, ಸ್ಟ್ಯಾಂಡರ್ ಆಯಿಲ್ ಕಾರ್ಖಾನೆಯಲ್ಲಿ ನಾನೇ ಇಂಟ್ರಡ್ಯೂಸ್ ಮಾಡಿ, ವರ್ಕ್ ಹೆಚ್ಚಾಗಿದ್ದರೆ 28 ರೂಪಾಯಿಗಳವರೆಗೂ ಕೊಟ್ಟಿದ್ದೇವೆ. ಅಲ್ಲಿ ನಮ್ಮ ಪ್ರೈವೇಟ್ ಸೇಲರ್ಸ್‌ಗೆ ವರ್ಕ್ಸ್ ಕೊಡುವುದನ್ನು ಎಲಿಮಿನೇಟ್ ಮಾಡಿ ಎಂದು ಟ್ರೇಡ್ ಯೂನಿಯನ್ನಿನವರು ಮುಂದೆ ಬಂದಿದ್ದಾರೆ. ಇದು ಬಹಳ ಸಂತೋಷಕರವಾದ ಸಂಗತಿ.

ಶ್ರೀ ಎಂ. ಎಸ್. ಕೃಷ್ಣನ್.—ಟ್ರೇಡ್ ಯೂನಿಯನ್ ಮುಖಂಡರು ತಮ್ಮಲ್ಲಿ ಬಂದು ಕ್ಲೋಸ್ ಮಾಡಬೇಡಿ ಸಹಕಾರ ನೀಡುತ್ತೇವೆ ಎಂದು ಹೇಳಿದ್ದಾರೆಯೇ?

ಶ್ರೀ ಬಿ. ರಾಚಯ್ಯ.—ನಾನು ಆತ್ಮೀಯತೆಯಿಂದ ಹೇಳಬೇಕು ಎಂದರೆ, ಅಲ್ಲಿ ಹೆಚ್ಚು ಜನರು ಹರಿಜನರು ಇದ್ದಾರೆ. ಈ ಫಿಲೇಚರ್‌ಗಳಲ್ಲಿ ಕೆಲಸಮಾಡುವವರ ಹೊಟ್ಟೆಯಮೇಲೆ ಹೊಡೆಯುವುದಕ್ಕೆ ನನಗೆ ಮನಸ್ಸು ಇಲ್ಲ. ನಾನು ನಿಮ್ಮಿಂದ ಪಾಠ ಕಲಿಯಬೇಕಾಗಿಲ್ಲ. ಕೊಳ್ಳೇಗಾಲ, ಚಾಮರಾಜನಗರ, ಯಳಂದೂರುಗಳಲ್ಲಿ ನನಗೆ ಚಿರಪರಿಚಿತರು ಇದ್ದಾರೆ. ಅವರಲ್ಲಿ ಇದನ್ನು ವಿಮರ್ಶೆ ಮಾಡಿಕೊಂಡು ಬಂದಿರುವವನು. ನಮ್ಮ ಫಿಲೇಚರ್‌ನಲ್ಲಿ ಏನು ನಡೆಯುತ್ತಿದೆ, ನಷ್ಟವನ್ನು ಕಡಿಮೆಮಾಡುವುದಕ್ಕೆ ಸಾಧ್ಯವಿದೆ. ಅವರು ಮನಸ್ಸು ಮಾಡದೆ ಇರುವುದರಿಂದ ಈ ರೀತಿಯಾಗಿ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ನಿರ್ಧಾರ ಮಾಡಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್.—ನಿಮ್ಮ ನಿರ್ಧಾರ ಸರಿಯಲ್ಲ, ನ್ಯಾಯವಲ್ಲ.

ಶ್ರೀ ಬಿ. ರಾಚಯ್ಯ.—ಬಹುಶಃ ಈ ನಿರ್ಧಾರ ಸರಿಯೆಂಬುದನ್ನು ಇನ್ನು ಎರಡು ತಿಂಗಳುಗಳ ಮೇಲೆ ಹೇಳುತ್ತೇನೆ. 6 ತಿಂಗಳುಗಳ ಕಾಲಾವಕಾಶ ನನಗೆ ಬೇಕು. ಇದರಿಂದ 40 ಲಕ್ಷ ರೂಪಾಯಿಗಳ ನಷ್ಟವಾಗುತ್ತಿತ್ತು. ಅದನ್ನು ಈಗ 20 ಲಕ್ಷಕ್ಕೆ ಇಳಿಸಿದ್ದಾರೆ ನಾವು ತೆಗೆದುಕೊಳ್ಳುವ ತೀರ್ಮಾನದಿಂದ ರೇಷ್ಮೆ ಗೂಡಿನ ಬೆಲೆ ಕಡಿಮೆಯಾಗುತ್ತದೆ. ಅದನ್ನು ಫಿಲೇಚರ್ ರೆಪ್ರೆಸೆಂಟೆಟೀವ್ಸ್ ಕೂಡ ಕೊಂಡುಕೊಳ್ಳುತ್ತಾರೆ. ಅದಕ್ಕೆ ಒತ್ತಾಯ ತರುತ್ತಿದ್ದೇವೆ. ಸುಮಾರು 8 ರೂಪಾಯಿ ಬೆಲೆಬಾಳುವ ಗೂಡಿಗೆ 10 ರೂಪಾಯಿಗಳನ್ನು ಕೊಡುತ್ತಿದ್ದಾರೆ. ಈಗ ಇದು ನಡೆಯುತ್ತಿದೆ. ಅಂತಹವರನ್ನು ಹಿಡಿದು ಶಿಕ್ಷೆಮಾಡುತ್ತೇವೆ. ಬಹುಶಃ 10 ರೂಪಾಯಿಗಿಂತ ಮೇಲೆ ಹೋಗಬಾರದೆಂದು ನಿರ್ಧಾರಕ್ಕೆ ಬಂದಿದ್ದೇವೆ.

ಶ್ರೀ ಎಚ್. ಸಿದ್ದವೀರಪ್ಪ.—ಅದನ್ನು ರೆಗ್ಯುಲೇಟೆಡ್ ಮಾರ್ಕೆಟ್ಟಿಗೆ ತರುವಹಾಗೆ ಮಾಡಿ.

ಶ್ರೀ ಬಿ. ರಾಚಯ್ಯ.—ಸಿಲ್ಕ್ ಮಾರ್ಕೆಟಿಂಗ್ ಸೊಸೈಟಿಯನ್ನು ಯಾವ ಒಂದು ಉದ್ದೇಶದಿಂದ ಮಾನ್ಯ ಶ್ರೀ ಸಿದ್ಧವೀರಪ್ಪನವರು ಸ್ಥಾಪನೆ ಮಾಡಿದರೋ ಆ ಉದ್ದೇಶ ಸಾಧನೆಯಾಗುತ್ತಾ ಇಲ್ಲ. ಕೆಲವಾರು ಜನರು ಅದರಿಂದ ಉಪಯೋಗ ಪಡೆದಿದ್ದಾರೆ. ಮೈಸೂರು ಸಿಲ್ಕ್ ಫಿಲೇಚರ್‌ನವರು ತಯಾರು ಮಾಡಿದ ರೇಷ್ಮೆಯನ್ನು ಖಾಸಗೀಯವರು ಮಾರಾಟಮಾಡಿ ನಮ್ಮ ಮೈಸೂರು ಸಿಲ್ಕ್ ಫಿಲೇಚರ್‌ಗೆ ತುಂಬಾ ನಷ್ಟವಾಗುತ್ತಿದೆಯೆಂಬುದಾಗಿ ಮಾನ್ಯ ಶ್ರೀ ಪುಟ್ಟಸ್ವಾಮಿಯವರು ಅರೋಪಣೆ ಮಾಡಿದ್ದಾರೆ. ಅದನ್ನೂ ಇನ್ನೂ ವಿಚಾರ ಮಾಡಬೇಕಾಗಿದೆ. ಅದನ್ನು ಇನ್ನೂ ಒಳ ಹೊಕ್ಕು ನೋಡಬೇಕಾಗಿದೆ. ಇನ್ನು ಮುಂದೆ ಅವರಿಗೆ ಒಂದೂವರೆಪರ್ಸೆಂಟ್ ಕಮಿಷನ್ ಕೊಡದೆ ನಾವೇ ನಾಳೆ ನೇರವಾಗಿ ಅದನ್ನು ಮಾರಾಟ ಮಾಡುತ್ತೇವೆಂದು ಅಶ್ವಾಸನೆ ಕೊಡುತ್ತೇನೆ, ಈಗ ರೇಷ್ಮೆ ಕೈಗಾರಿಕೆಗೆ ಪ್ಲಾನಿಂಗ್ ಸ್ಕೀಮಿನಲ್ಲಿ 26ಲಕ್ಷ ರೂಪಾಯಿಗಳನ್ನೂ ಮತ್ತು ನಾನ್-ಪ್ಲಾನ್ ಸ್ಕೀಮಿನಲ್ಲಿ 46 ಲಕ್ಷ ರೂಪಾಯಿಗಳನ್ನೂ ಇಟ್ಟಿದ್ದೇವೆ. ಈ ಒಂದು ಸಣ್ಣ ಬಂಡವಾಳದಲ್ಲಿ 10 ಲಕ್ಷ ಜನರಿಗೆ ಅನುಕೂಲವಾಗುವ ಪರಿಸ್ಥಿತಿ ಇದೆ. ಆದ್ದರಿಂದ ಇಷ್ಟೊಂದು ಕಡಿಮೆ ಬಂಡವಾಳ ಹಾಕಿ ಹೆಚ್ಚು ಜನಸಂಖ್ಯೆಗೆ ಈ ಸೌಲಭ್ಯ ಒದಗಿಸುವುದರಲ್ಲಿ, ಇದು ಸಣ್ಣ ಕೈಗಾರಿಕೆಯಲ್ಲ, ಇದು ಒಂದು ದೊಡ್ಡ ಕೈಗಾರಿಕೆ. ಇದಕ್ಕೆ ತಾವು ಯಾರೂ ಕೂಡ ವಿರೋಧಮಾಡದೆ ಒಮ್ಮತದಿಂದ ಒಪ್ಪಿಗೆ ಕೊಡಬೇಕೆಂದು ನಾನು ಪ್ರಾರ್ಥಿಸುತ್ತೇನೆ.

Mr. SPEAKER.—The question is :

"That the respective sums not exceeding the amounts mentioned in Demands Nos. 14, 16, 24 and 44 be grated to the Government to defray the charges which will come in course of payment during the financial year for the period ending 31st day of March 1970.

The Motion was adopted.

As direceed by the Chair the motion for Demands for Grants adopted by the House are reproduced below :

DEMAND NO. 14.—SUPPLIES AND DISPOSALS.

25. Supplies and Disposals.

"That a sum not exceeding Rs. 3,30,000 be granted to the Government to defray the charges which will come in course of payment during the financial year for the period ending 31st day of March 1970, in respect of 'Supplies and Disposals'."

DEMAND NO. 16.—SCIENTIFIC DEPARTMENTS.

27. Scientific Departments.

"That a sum not exceeding Rs. 51,69,000 be granted to the Government to defray the charges which will come in course of payment during the financial year for the period ending 31st day of March 1970, in respect of 'Scientific Departments'."

DEMAND No. 24.—INDUSTRIES INCLUDING SERICULTURE.

35. Industries

"That a sum not exceeding Rs. 13,40,35,000 be granted to the Government to defray the charges which will come in course of payment during the financial year for the period ending 31st day of March 1970, in respect of 'Industries'."

DEMAND No. 44.—INDUSTRIAL AND ECONOMIC DEVELOPMENT

96. Capital Outlay on Industrial and Economic Development.

"That a sum not exceeding Rs. 9,89,39,000 be granted to the Government to defray the charges which will come in course of payment during the financial year for the period ending 31st day of March 1970, in respect of 'Capital Outlay on Industrial and Economic Development'."

MR. SPEAKER.—The House now stands adjourned to meet at 1 P.M. on Monday, the 24th March 1969.

The House adjourned at Twenty-Two Minutes past Eight of the Clock to meet again at One of the Clock on Monday the 24th March 1969.